ಅಧ್ಯಕ್ಷರು.—ಇದರಲ್ಲಿ ಸರ್ಕಾರದ ತಪ್ಪು ಇಲ್ಲ. ನಿಯಮಾವಳಿ ಪ್ರಕಾರ ಇದು ಬಂದಿಲ್ಲ. ನಾಳೆ ಬಂದರೆ ನಾಳೆಯೆ, ತೆಗೆದುಕೊಳ್ಳೋಣ.

ಶ್ರೀ ಎಸ್. ಬಂಗಾರಪ್ಪ.—ಅಧ್ಯಕ್ಷರೆ, ತಾವು ಕಾನೂನು ಪ್ರಕಾರ ಮಾಡಿದ್ದೀರಿ.

ಅಧ್ಯಕ್ಷರು.—ತಾವೇ ಬಾಲೆಟ್ ಎತ್ತಲಿಕ್ಕೆ ಅವಕಾಶ ಮಾಡಿ ಕೊಡುತ್ತೇನೆ.

ಶ್ರೀ ಎಸ್. ಬಂಗಾರಪ್ಪ.—ದಯಮಾಡಿ ಕ್ಷಮಿಸಬೇಕು. ನಾನು ಆ ಕೆಲಸ ಮಾಡುವುದಿಲ್ಲ. ಅಧ್ಯಕ್ಷರೆ, ನಾಳೆ ೩೩೪ರ ಪ್ರಕಾರ ಇದನ್ನು ತೆಗೆದುಕೊಳ್ಳುತೀರಾ ?

ಅಧ್ಯಕ್ಷರು.—ಈಗ ಮತ್ತೆ ಹಿಂದಕ್ಕೆ ಹೋಗುವುದು ಬೇಡ. ಮಾನ್ಯ ಸದಸ್ಯರಾದ ನಾರಾಯಣ ಗೌಡರು ಮಾತನಾಡಲಿ.

ವಿತ್ತೀಯ ಕಾರ್ಯಕಲಾಪಗಳು

(೧೯೭೩-೭೪ನೇ ಸಾಲಿಗೆ ಸಂಬಂಧಿಸಿದ ಬೇಡಿಕೆಗಳ ಮೇಲಿನ ಚರ್ಚೆ)

ಬೇಡಿಕೆ ಸಂಖ್ಯೆ—೫೪, ೫೫—ಸಹಕಾರ ನಿಯಮಿತ ಮಾರುಕಟ್ಟೆಗಳು.

† ಶ್ರೀ ಹೆಚ್.ಎ. ನಾರಾಯಣಗೌಡ (ಚಿಕ್ಕಮಗಳೂರು).—ಸನ್ಮಾನ್ಯ ಅಧ್ಯಕ್ಷರೆ, ಸಹಕಾರ ಮಂತ್ರಿಗಳು ತಮ್ಮ ವರದಿಯನ್ನು ಸಭೆಯ ಮುಂದಿಟ್ಟಿದ್ದಾರೆ. ಅದನ್ನು ನಾನು ಸಮರ್ಥಿಸುತ್ತಾ ಅದರ ಬಗ್ಗೆ ಸ್ವಲ್ಪ ವಿಮರ್ಶೆ ಮಾಡಲು ಇಷ್ಟಪಡುತ್ತೇನೆ. ನಮ್ಮ ರಾಷ್ಟ್ರದಲ್ಲಿ ಸಹಕಾರಿ ಆಂದೋಳನ ಸುಮಾರು ೭೦-೮೦ ವರ್ಷಗಳಿಂದ ನಡೆಯುತ್ತಿತ್ತು. ಈವೊತ್ತು ಅವರ ಪ್ರಗತಿಯನ್ನು ನೋಡಿದರೆ ನಾವೆಲ್ಲರೂ ತಲೆ ತಗ್ಗಿಸತಕ್ಕ ಒಂದು ಸನ್ನಿವೇಶ ಇದೆ. ಸ್ವಾತಂತ್ರ್ಯ ನಂತರ ಸ್ವಲ್ಪ ಚಳುವಳಿಗೆ ತಿರುಗಿಕೊಂಡರೂ ಯಾವ ಘನ ಉದ್ದೇಶದಿಂದ ಈ ಚಳುವಳಿ ಆರಂಭವಾಯಿತೋ ಆ ಉದ್ದೇಶದಲ್ಲಿ ಹೇಳುವುದಾದರೆ ಇದು ಕೇವಲ ೧೦-೧೫ ಭಾಗ ಕೂಡ ಸಾಧನೆ ಮಾಡಿಲ್ಲ. ಮೊದಲು ಈ ಚಳುವಳಿ ಪ್ರಾರಂಭವಾದುದು ಹಳ್ಳಿಗರಿಗೆ, ಬಡ ರೈತರಿಗೆ ಆರ್ಥಿಕ ನೆರವನ್ನು ಕೊಡಬೇಕೆಂಬ ಘನ ಉದ್ದೇಶದಿಂದ ಈ ಚಳುವಳಿ ಆರಂಭವಾಯಿತು. ಆದರೆ ಈವೊತ್ತಿನ ದಿವಸ ನಾವು ಸೇವಾ ಸಹಕಾರ ಸಂಘಗಳನ್ನು ಏನು ನಿರ್ಮಾಣ ಮಾಡಿದ್ದೇವೆ. ಅವುಗಳ ಕಾರ್ಯ ನೋಡಿದಾಗ, ಅವುಗಳಿಗೆ ಕೊಟ್ಟಿರತಕ್ಕ ನೆರವನ್ನು ನೋಡಿದಾಗ, ನಿಜವಾಗಿಯೂ ಕೂಡ ಇದರ ಬಗ್ಗೆ ದೀರ್ಘವಾಗಿ ಯೋಚನೆ ಮಾಡಬೇಕಾಗುತ್ತದೆ. ಈ ಒಂದು ಸಂಸ್ಥೆಗಳ ಉದ್ದೇಶ ಎಂದರೆ, ಸಂಸ್ಥೆಗಳು ಹಂತ ಹಂತವಾಗಿ ತಮ್ಮ ಕಾಲಮೇಲೆ ತಾವು ನಿಲ್ಲುವಂತೆ ಆಗಬೇಕೆಂಬ ಘನ ಉದ್ದೇಶದಿಂದ ಸ್ಥಾಪನೆ ಆಯಿತು. ಆದರೆ ಈವೊತ್ತು ಆ ರೀತಿಯಲ್ಲಿ ಆಗಿಲ್ಲ. ೨೨,೮೦೦ ನಾನಾ ತರಹದ ಸೇವಾ ಸಹಕಾರ ಸಂಘಗಳು ಇವೆ. ಎಂದು ಹೇಳಿದ್ದೀರಿ. ಅವುಗಳನ್ನು ನೋಡಿದಾಗ, ಬಹಳಷ್ಟು ನೂರಕ್ಕೆ ತೊಂಭತ್ತೊಂಭತ್ತು ಸಂಸ್ಥೆಗಳು ಏನು ಇವೆ ಅವು ತಮ್ಮ ಕಾಲ ಮೇಲೆ ತಾವು ನಿಲ್ಲಬೇಕೆಂದು ಏನ್ ಒಂದು ಗುರಿ ಇತ್ತೋ ಆ ಗುರಿಯನ್ನು ಮುಟ್ಟಿಲ್ಲ. ಏತಕ್ಕೆ ಆ ಗುರಿಯನ್ನು ಮುಟ್ಟಿಲ್ಲ. ಏತಕ್ಕೆ ಸಾಧ್ಯವಾಗಿಲ್ಲ, ಎಂದರೆ ಸರಿಯಾಗಿ ಕೆಲಸ ಮಾಡುವ ರೀತಿಯಲ್ಲಿ ನಾವು ಆಡಳಿತದಲಿರತಕ್ಕ ರಾಜಕಾರಣಿಗಳು, ಜೊತೆಗೆ ಅಧಿಕಾರಿಗಳು ನಾವು ಇಬ್ಬರು ಕೂಡ ಸಫಲರಾಗಿಲ್ಲ ಎನ್ನುವ ಮಾತನ್ನು ನಾನು ಈ ಸದನದ ಮುಂದೆ ಹೇಳದೇ ವಿಧಿ ಇಲ್ಲ. ರೈತರ ನೆರವಿಗೆ ಸಹಕಾರ ಸಂಘಗಳು ಬೇಕು, ಬಡ ಕುಟುಂಬದವರಿಗೂ, ಮಧ್ಯಮ ವರ್ಗದವರಿಗೂ, ಕಡು ಬಡವರಿಗೂ ಸಹಕಾರ ಸಂಘದ ನೆರವು ಬೇಕೆಂದು ಸಹಕಾರ ಸಂಘಗಳು ಸ್ಥಾಪನೆ ಆಗಿದ್ದು ಸಹಕಾರ ರಂಗದಲ್ಲಿ ಬಹಳಷ್ಟು ವರ್ಷಗಳ ಕಾಲದ ದುಡಿದ ನನ್ನ ಅನುಭವ ಹೇಳಬೇಕೆಂದರೆ, ಹಳ್ಳಿಯ ಮಟ್ಟದಿಂದ, ರಾಜ್ಯಮಟ್ಟದವರೆಗೆ ಅನುಭವ ಕೇಳಬೇಕೆಂದರೆ ಈ ನೆರವಿನಲ್ಲಿ ರಾಜಕೀಯ ಪ್ರವೇಶ ಮಾಡಿದ್ದರೆ ಫಲದಿಂದ ಈ ಒಂದು ಚಳುವಳಿ ಸಫಲವಾಗುವುದಕ್ಕೆ ಸಾಧ್ಯವಾಗಿಲ್ಲ ಎನ್ನುವ ಮಾತನ್ನು ಹೇಳಬೇಕಾಗಿದೆ. ಈ ೨೨,೮೦೦ ಸಹಕಾರ ಸಂಘಗಳಲ್ಲಿರತಕ್ಕ ಸಿಬ್ಬಂದಿ ವರ್ಗವನ್ನು ನೋಡಿದರೆ ಸುಮಾರು ೧೫೦೦ ಕೋಟಿ ರೂಪಾಯಿಗಳ ವ್ಯವಹಾರ ನಡೆಸತಕ್ಕಂಥಸಿ ಸಿಬ್ಬಂದಿವರ್ಗ ಅಲ್ಲಿದೆ. ಮೇಲ್ಮಟ್ಟದಲ್ಲಿ ಮಾತ್ರ ರಿಜಿಸ್ಟ್ರಾರ್ ಮತ್ತು ಜಾಯಿಂಟ್ ರಿಜಿಸ್ಟ್ರಾರ್ ಇದ್ದು ಈ ರೀತಿಯ ಒಂದು ಸಿಬ್ಬಂದಿವರ್ಗ ಬೃಹದಾಕಾರವಾಗಿ ಅಲ್ಲಿ ಬೆಳೆದಿದೆ ಕೆಳಮಟ್ಟದಲ್ಲಿ ನೋಡಿದರೆ ಯಾರಿದ್ದಾರೆ ? ಈ ೨೨,೮೦೦ ಸಹಕಾರ ಸಂಸ್ಥೆಗಳು ಏನಿವೆ ಇವು ೧,೫೦೦ ಕೋಟಿ ರೂಪಾಯಿಗಳ ವ್ಯವಹಾರ ನಡೆಸತಕ್ಕ ಸಂಸ್ಥೆಗಳು. ಇವುಗಳ ಮೇಲ್ವಿಚಾರಣೆ ನೋಡಲಿಕ್ಕೆ ಕೆಳ

ಮಟ್ಟದಲ್ಲಿ ಯಾರಿದ್ದಾರೆ ಎಂದರೆ ಕೋಆಪರೇಟೀವ್ ಎಕ್ಸ್‌ಟೆನ್‌ಷನ್ ಆಫೀಸರ್ ಇದ್ದಾರೆ. ಅಲ್ಲಿ ಡ್ಯುಯಲ್ ಕಂಟ್ರೋಲ್ ಇದ್ದ ಹಾಗೆ ಬಿಡಿಒ ಅಸಿಸ್ಟೆಂಟ್ ರಿಜಿಸ್ಟ್ರಾರ್ ಕಡೆ ತೋರಿಸುತ್ತಾನೆ. ಅಸಿಸ್ಟೆಂಟ್ ರಿಜಿಸ್ಟ್ರಾರ್ ಬಿಡಿಒ ಕಡೆ ತೋರಿಸುತ್ತಾನೆ.

ಈ ಡ್ಯೂಯಲ್ ಕಂಟ್ರೋಲ್‌ನಲ್ಲಿ ಅವನು ಎಲ್ಲಿಯೂ ಕೂಡ ಕೆಲಸಮಾಡುವುದಿಲ್ಲ. ಹಾಗಾದರೆ ಅದರ ಮೇಲ್ವಿಚಾರಣೆಯನ್ನು ನೋಡಿಕೊಳ್ಳುವವರು ಯಾರು ? ಕೆಳಮಟ್ಟದಲ್ಲಿ ಏನು ಅಧಿಕಾರಿಗಳ ವಿಸ್ತರಣೆ ಆಗಬೇಕಾಗಿತ್ತು ಅದು ಆಗಿಲ್ಲ. ಅದು ಆಗದಿದ್ದರೆ ಮೇಲ್ಮಟ್ಟದಲ್ಲಿರತಕ್ಕ ಅಧಿಕಾರಿಗಳು ಏನು ಮಾಡುವುದಕ್ಕೆ ಸಾಧ್ಯ ? ಇವರು ಕೇವಲ ಅಂಕಿ ಅಂಶಗಳನ್ನು ಒದಗಿಸುವುದರಲ್ಲೇ ಇವರು ಕಾಲಹರಣ ಮಾಡುತ್ತಿದ್ದಾರೆ. ತಿಂಗಳಲ್ಲಿ ಯಾವತ್ತು ನೋಡಿದರೂ ಸಹ ಇವತ್ತು ಜಿಲ್ಲಾಧಿಕಾರಿಯವರು ಕರೆದರು, ಇವತ್ತು ರಿಜಿಸ್ಟ್ರಾರ್‌ರವರು ಕರೆದರು, ಇವತ್ತು ಜಾಯಿಂಟ್ ರಿಜಿಸ್ಟ್ರಾರ್‌ರವರು ಕರೆದರು, ಇವತ್ತು ಜಿಲ್ಲಾ ಬ್ಯಾಂಕ್ ಅಧ್ಯಕ್ಷರು ಕರೆದರು, ಎಂದು ಹೇಳಿಕೊಂಡು ಕೇವಲ ಮೀಟಿಂಗ್ ಮಾಡಿಕೊಂಡು ಅಂಕಿಅಂಶಗಳನ್ನು ಒದಗಿಸುವುದರಲ್ಲಿಯೇ ಕಾಲಕಳೆಯುತ್ತಿದ್ದಾರೆಯೇ ಹೊರತು ಯಾವ ಅಧಿಕಾರಿಯೂ ಕೆಳಮಟ್ಟಕ್ಕೆ ಹೋಗಿ ಈ ಸಹಕಾರ ಸಂಘಗಳು ಏನು ಮಾಡುತ್ತಿವೆ ಅಲ್ಲಿ ಏನು ನಡೆಯುತ್ತಿದೆ ಎಂಬುದನ್ನು ತನಿಖೆ ಮಾಡುತ್ತಿಲ್ಲ. ಇದರ ಜೊತೆಗೆ ಅವರಿಗೆ ಈ ಒಂದು ವ್ಯವಧಾನವೂ ಇಲ್ಲ, ಸಮಯವೂ ಇಲ್ಲ. ಆದ್ದರಿಂದ ಈ ಕೆಳಮಟ್ಟದ ಸಿಬ್ಬಂದಿ ವರ್ಗವನ್ನು ಜಾಸ್ತಿ ಮಾಡಬೇಕಾಗಿರುವುದರಿಂದ ಮಾನ್ಯ ಸಹಕಾರ ಮಂತ್ರಿಗಳು ಈ ಬಗ್ಗೆ ಗಮನಹರಿಸಿ ಸೂಕ್ತ ಕ್ರಮ ತೆಗೆದುಕೊಳ್ಳಬೇಕೆಂದು ಹೇಳಬಯಸುತ್ತೇನೆ. ವ್ಯವಸಾಯ ಕುಟುಂಬಗಳಿಗೆ ಅಲ್ಪಕಾಲವಧಿ ಸಾಲವನ್ನು ಕೊಟ್ಟಿರುವುದು ಸುಮಾರು ೩೫ ಲಕ್ಷ ರೂಪಾಯಿಗಳು ಇದರ ದಾಮಾಷಾ ೧ ಸಾವಿರದಂತೆ ಲೆಕ್ಕ ಹಾಕಿದರೂ ಕೇವಲ ೨೦–೨೫ ಪರ್ಸೆಂಟ್ ಜನರಿಗೆ ಮಾತ್ರ ಕೊಟ್ಟಿದ್ದಾರೆ. ಹಾಗಾದರೆ ಉಳಿದವರು ಎಲ್ಲಿಗೆ ಹೋಗಬೇಕು ? ಒಂದು ಕಡೆ ಡೆಟ್ ರಿಲೀಫ್ ಆಕ್ಟನ್ನು ತಂದಿರುವುದರಿಂದ ವಾರ್ಷಿಕ ವರಮಾನ ೪೮೦೦ ರೂಪಾಯಿಗಳ ಒಳಗಿರತಕ್ಕ ಕುಟುಂಬಗಳಿಗೆ ಖಾಸಗಿಯವರು ಕೂಡ ಒಂದೇ ಒಂದು ಪೈಸೆ ಸಾಲವನ್ನೂ ಕೊಡುವುದಿಲ್ಲ. ಕೊಟ್ಟರೆ ಅದು ವಾಪಸ್ಸು ಬರುವುದಿಲ್ಲವೆಂದು ಗೊತ್ತಿರುವುದರಿಂದ ಯಾರೂ ಕೊಡುವುದಿಲ್ಲ. ಇಂಥ ಒಂದು ನಿಬಂಧನೆಯನ್ನು ನಾವು ಮಾಡಿದ್ದೇವೆ. ಇದರಿಂದಾಗಿ ಸಣ್ಣ ವ್ಯವಸಾಯಗಾರ ಯಾರಿದ್ದಾನೆ ಅವರಿಗೆ ಆರ್ಥಿಕ ನೆರವನ್ನು ಕೊಡಬೇಕಾದ್ದು ನಮ್ಮ ಕರ್ತವ್ಯವಲ್ಲವೆ? ಆದರೆ ನಾವು ಕೊಟ್ಟಿರತಕ್ಕ ಸಾಲವನ್ನು ನೋಡಿದರೆ ನಾವು ನಮ್ಮ ಕೆಲಸವನ್ನು ಮಾಡುವುದರಲ್ಲಿ ಕರ್ತವ್ಯ ಚ್ಯುತಿಯನ್ನು ಮಾಡಿದ್ದೇವೆ. ಹಿಂದೆ ಆಡಳಿತ ನಡೆಸಿದವರು ಸಣ್ಣ ವ್ಯವಸಾಯಗಾರರ ಬಗ್ಗೆ ಅಥವಾ ಕೃಷಿ ಕಾರ್ಮಿಕರ ಬಗ್ಗೆ ಹೆಚ್ಚಿನ ಗಮನವನ್ನು ಕೊಟ್ಟಿಲ್ಲ. ಇವತ್ತು ಅವರಿಗೆ ಹೊರಗಡೆ ಸಾಲ ಸಿಕ್ಕುತ್ತಿಲ್ಲ. ವಾಣಿಜ್ಯ ಬ್ಯಾಂಕ್‌ಗಳವರು ಸಾಲವನ್ನು ಕೊಡುತ್ತಾರೆಂದು ತಾವು ಹೇಳಬಹುದು. ಆದರೆ ನನ್ನ ಅನುಭವದಲ್ಲಿ ಹೇಳುವುದಾದರೆ ಆ ಬ್ಯಾಂಕ್‌ನವರು ತಮಗೆ ಬೇಕಾದ ಕೆಲವರಿಗೆ ಕೊಟ್ಟು ಇನ್ನು ಕೆಲವರಿಗೆ ಕೊಡದೆ ನಾನಾ ಕಾರಣಗಳನ್ನು ತೋರಿಸಿ ಸಾಲವನ್ನು ಕೊಡದೆ ವಾಪಸ್ಸು ಕಳುಹಿಸಿದ್ದಾರೆ. ಹಾಗಾದರೆ ಕಳೆದ ೩೫ ವರ್ಷದಿಂದ ರಾಜ್ಯಭಾರ ಮಾಡಿದಂಥ ಜನ ಏನು ಮಾಡಿದ್ದಾರೆ ? ಸಣ್ಣ ರೈತರು ಮತ್ತು ಕೃಷಿ ಕಾರ್ಮಿಕರು ದೇಶದ ಬೆನ್ನೆಲುಬು ಎಂದು ವಿಧಾನ ಸೌಧ ಮತ್ತು ಹೊರಗಡೆ ಮೈದಾನದಲ್ಲಿ ಬೊಬ್ಬೆ ಹೊಡೆಯುತ್ತಿದ್ದ ಜನರು ಈ ರೈತರಿಗೆ ಏನು ಅನುಕೂಲ ಮಾಡಿಕೊಡುವ ಬಗ್ಗೆ, ಅವರ ಆರ್ಥಿಕ ಪರಿಸ್ಥಿತಿಯನ್ನು ಸುಧಾರಿಸುವ ಬಗ್ಗೆ ಏನು ಕ್ರಮ ತೆಗೆದುಕೊಂಡಿದ್ದರು ಎಂದು ನಾನು ಕೇಳಬೇಕಾಗಿದೆ. ಆದ್ದರಿಂದ ಮಾನ್ಯ ಸಹಕಾರ ಮಂತ್ರಿಗಳಲ್ಲಿ ನಾನು ನಿವೇದಿಸಿಕೊಳ್ಳುವುದೇನೆಂದರೆ, ಮುಂದಿನ ಅವಧಿಯಲ್ಲಾದರೂ ಹಳ್ಳಿಗಾಡಿನ ಜನರು ಆರ್ಥಿಕ ನೆರವಿನಿಂದ ಏನು ವಂಚಿತರಾಗಿದ್ದಾರೆ ಆ ನ್ಯಾಯವನ್ನು ಅವರಿಗೆ ಒದಗಿಸಿಕೊಡುವವರೆಗೂ ಅವರು ಮೇಲಕ್ಕೆ ಬರುವುದಕ್ಕೆ ಸಾಧ್ಯವಾಗುವುದಿಲ್ಲ. ಹಿಂದೆ ಬ್ರಿಟಿಷರ ದಾಸ್ಯದಲ್ಲಿದ್ದೆವು ಈಗ ನಮ್ಮ ಹಳ್ಳಿಯ ಜನರು ನಾನಾ ಬಗೆಯ ಜನರ ದಾಸ್ಯದಲ್ಲಿ ಬಾಳಬೇಕಾಗಿದೆ. ಇವತ್ತು ಅವರು ಗೊಬ್ಬರದ ಅಂಗಡಿಗೆ, ಬೀಜಗಳ ಅಂಗಡಿಗೆ, ಮುಂತಾಗಿ ನಾನಾ ಜಾಗಗಳಿಗೆ ಹೋಗಿ ಬೇಡಿ ತಿರಿದು ತರಬೇಕಾಗಿದೆ. ಇಂಥ ಒಂದು ಪರಿಸ್ಥಿತಿಗೆ ರೈತರನ್ನು ಈ ಸರ್ಕಾರ ತಂದಿಟ್ಟಿದೆ. ರೈತರ ಬೆಂಬಲವನ್ನು ತೆಗೆದುಕೊಂಡು ಸರ್ಕಾರವನ್ನು ರಚನೆ ಮಾಡಿ, ಇದರ ಆಡಳಿತದ ಹೊಣೆಯನ್ನು ಹೊತ್ತಿರತಕ್ಕ ಮಾನ್ಯ ಜಾಲಪ್ಪನವರು ಕೇವಲ ೨೦–೨೫ ಪರ್ಸೆಂಟ್ ಜನರಿಗೆ ಸಾಲವನ್ನು ಕೊಟ್ಟರೆ ಸಾಲದು. ರಾಜ್ಯದ ಎಲ್ಲಾ ಜನರಿಗೂ ಪೂರ್ಣವಾಗಿ ಸಾಲ ಸಿಕ್ಕುವಂತೆ ಮಾಡಬೇಕೆಂದು ಮಾನ್ಯ ಅಧ್ಯಕ್ಷರ ಮುಖಾಂತರ ಕೇಳಿಕೊಳ್ಳುತ್ತೇನೆ.

ಇನ್ನು ಬಾಕಿ ವಸೂಲಿ ಬಗ್ಗೆ ಹೇಳುವುದಾದರೆ ಇವರು ಕೊಟ್ಟಿರತಕ್ಕ ಕೋಷ್ಟಕವನ್ನು ನೋಡಿದರೆ ವಸೂಲಿ ಬಹಳ ಕೆಳಮಟ್ಟದಲ್ಲಿದೆ. ಕೆಲವು ಬ್ಯಾಂಕುಗಳಲ್ಲಿ ೨೦ ಪರ್ಸೆಂಟ್ ವಸೂಲಾಗಿದೆ. ಇದರ ಬಗ್ಗೆ ಯಾರೂ ಕೂಡ ಗಮನವನ್ನೇ ಕೊಟ್ಟಿಲ್ಲ. ಇದಕೆ ಕಾರಣ ಏನು ? ಬಹುಶಃ ರೈತರಿಗೆ

ಕೊಡತಕ್ಕ ಸಾಲದ ಬಗ್ಗೆ ಜಿಲ್ಲಾ ಬ್ಯಾಂಕ್ ಅಧ್ಯಕ್ಷರಿಂದ ಹಿಡಿದು ರಾಜ್ಯಮಟ್ಟದ ಅಧ್ಯಕ್ಷರವರೆಗೂ ದೊಡ್ಡ ದೊಡ್ಡ ಅಧಿಕಾರಿಗಳು ಹೇಳುತ್ತಾರೆ, ಸರ್ಕಾರದವರೂ ಕೂಡ ಹೇಳುತ್ತಾರೆ, ನಾವು ಕೊಡತಕ್ಕ ಸಾಲದ ಹಣವನ್ನು ರೈತರು ಮರುಪಾವತಿ ಮಾಡುತ್ತಿಲ್ಲ ಎಂದು. ಆದರೆ ಅವರು ಆ ರೀತಿ ಹೇಳುವುದು ಸರಿಯಲ್ಲವೆಂದು ನಾನು ಹೇಳಬಯಸುತ್ತೇನೆ. ಇವತ್ತು ಭತ್ತದ ಬೆಳೆಗೆ ಒಂದು ಎಕರೆಗೆ ೪೦೦ ರಿಂದ ೫೦೦ ರೂಪಾಯಿಗಳವರೆಗೆ ಸಾಲವನ್ನು ಕೊಡುತ್ತೀರಿ. ೧೦ ಎಕರೆ ಇದ್ದರೆ ೫೦೦೦ ರೂಪಾಯಿಗಳವರೆಗೂ ಸಾಲವನ್ನು ಕೊಡುತ್ತೀರಿ. ಹಾಗೆ ಕೊಡುವಾಗ ನೀವು ಅವನ ಪೂರ್ತಿ ಆಸ್ತಿಯನ್ನೂ ಒತ್ತೆ ಇಟ್ಟುಕೊಂಡು ಕೊಡುತ್ತೀರಿ. ಒಂದು ವೇಳೆ ಅವನಿಗೆ ಆ ಹಣ ಸಾಲದೇ ಬಂದರೆ ಮತ್ತೆ ಅವನು ಬೇರೆ ಎಲ್ಲಿಯೂ ಕೂಡ ಹೋಗಿ ಸಾಲವನ್ನು ತರುವಂತಿಲ್ಲ. ಹಾಗಾದರೆ ಅವನ ಮನೆ ಖರ್ಚಿಗೆ ಅಥವಾ ಬೇರೆ ಖರ್ಚಿಗೆ ಹಣವನ್ನು ಎಲ್ಲಿಂದ ತರಬೇಕು ? ಮಕ್ಕಳಿಗೆ ಬಟ್ಟೆಬರೆಗಳನ್ನು ತರುವುದಕ್ಕೆ ಅವನಿಗೆ ದುಡ್ಡು ಎಲ್ಲಿಂದ ಬರಬೇಕು ? ಕುಟುಂಬದವರ ಆರೋಗ್ಯಕ್ಕೆ ಬೇಕಾದ ಹಣ ಹಾಗೂ ಮಕ್ಕಳ ವಿದ್ಯಾಭ್ಯಾಸಕ್ಕೆ ಬೇಕಾದ ಹಣವನ್ನು ಅವರು ಎಲ್ಲಿಂದ ತರಬೇಕು ? ಇದರ ಬಗ್ಗೆ ಯಾರೂ ಕೂಡ ಗಮನವನ್ನೇ ಕೊಟ್ಟಿಲ್ಲ. ಆದ್ದರಿಂದ ನಾನಾದರೂ ತಮ್ಮಲ್ಲಿ ಪ್ರಾರ್ಥಿಸಿಕೊಳ್ಳುತ್ತೇನೆ ಒಬ್ಬ ರೈತನಿಗೆ ಸಾಲವನ್ನು ಕೊಡುವಾಗ ಅವನಿಗೆ ಯಾವ ಯಾವ ಖರ್ಚುಗಳಿವೆ, ಅವನಿಗೆ ಎಷ್ಟು ಹಣದ ಅವಶ್ಯಕತೆ ಇದೆ ಎಂಬುದನ್ನು ನೋಡಿ ಅದಕ್ಕನುಗುಣವಾಗಿ ಪೂರ್ಣ ಪ್ರಮಾಣದಲ್ಲಿ ಸಾಲವನ್ನು ಕೊಟ್ಟರೆ ಅವನು ಬೇರೆ ಕಡೆ ಹಣಕ್ಕೆ ಹೋಗುವುದು ತಪ್ಪುತ್ತದೆ. ಇದರಿಂದ ಅವನು ತನ್ನ ಜಮೀನಿನಲ್ಲಿ ಉತ್ತಮ ಬೆಳೆಯನ್ನು ತೆಗೆದು ಮುಂದುವರಿಯುವುದಕ್ಕೂ ಸಾಧ್ಯವಾಗುತ್ತದೆ ಎಂದು ಹೇಳಬಯಸುತ್ತೇನೆ. ಅದೇರೀತಿ ಸಾಲದ ವಸೂಲಿ ಬಗ್ಗೆಯೂ ಒಂದು ಮಾತನ್ನು ಹೇಳುವುದಾದರೆ ನಾವು ಸಾಲವನ್ನು ಕೊಡುತ್ತೇವೆ, ಸಣ್ಣ ಪುಟ್ಟ ರೈತರು ಹೇಗೋ ಜೀವನ ಮಾಡಿದರೂ ದೊಡ್ಡ ದೊಡ್ಡ ರೈತರು ಟ್ರಿಬ್ಯೂನಲ್ ಅಥವಾ ಕೋರ್ಟ್‌ಗಳಿಗೆ ಹೋಗಿ ಅಲ್ಲಿಂದ ಸ್ಟೇ ತೆಗೆದುಕೊಂಡು ಬರುತ್ತಾರೆ. ಸಾಲದ ವಸೂಲಾತಿ ಸರಿಯಾಗಿ ಆಗುತ್ತಿಲ್ಲ. ನನ್ನ ಸಹಕಾರ ಸಂಘಕ್ಕೆ ಸಂಬಂಧಪಟ್ಟಂತೆ ಒಂದು ನಿದರ್ಶನವನ್ನು ಕೊಡುವುದಾದರೆ, ಒಂದೇ ಒಂದು ಕುಟುಂಬದಲ್ಲಿ ನಾಲ್ಕಾರು ಜನರು ಬೇರೆಬೇರೆಯವರ ಹೆಸರಿನಲ್ಲಿ ಸಾಲಗಳನ್ನು ತೆಗೆದುಕೊಂಡು ಅದನ್ನು ಮರುಪಾವತಿ ಮಾಡಿಲ್ಲ. ಅದಕ್ಕೆ ಸ್ಟೇ ತಂದಿದ್ದಾರೆ. ಆದ್ದರಿಂದ ನಾನು ತಮ್ಮಲ್ಲಿ ಕೇಳಿಕೊಳ್ಳುವುದೇನೆಂದರೆ ರಾಜ್ಯ ಮಟ್ಟದಲ್ಲಿ ಟ್ರಿಬ್ಯೂನಲ್‌ಗಳು ಏನಿವೆ ಅವನ್ನು ಜಿಲ್ಲಾಮಟ್ಟದಲ್ಲಿ ಸ್ಥಾಪನೆ ಮಾಡಿ ಬರತಕ್ಕ ಮನವಿಗಳನ್ನು ವಿಮರ್ಶೆಮಾಡಿ ತೀರ್ಮಾನ ಮಾಡುವುದಕ್ಕೆ ವ್ಯವಸ್ಥೆ ಮಾಡಬೇಕು.

ಇನ್ನು ತಾವು ಕೊಡತಕ್ಕ ಸಾಲದ ಹಣವನ್ನು ೩ ಹಂತದಲ್ಲಿ ಕೊಡುತ್ತಿದ್ದೀರಿ. ಅಪೆಕ್ಸ್ ಬ್ಯಾಂಕ್ ಡಿ.ಸಿ.ಸಿ ಬ್ಯಾಂಕ್ ಮತ್ತು ಸೇವಾ ಸಹಕಾರ ಸಂಘಗಳ ಮುಖಾಂತರ ಕೊಡುತ್ತಿದ್ದೀರಿ. ಇದರಿಂದ ಏನಾಗುತ್ತದೆ ನಾವು ರಿಸರ್ವ್ ಬ್ಯಾಂಕ್‌ನಿಂದ ತರತಕ್ಕ ಹಣದಿಂದ ಸಾಲವನ್ನು ಕೊಟ್ಟರೆ ೪–೫ ಪರ್ಸೆಂಟ್‌ನಷ್ಟು ವ್ಯತ್ಯಾಸವಾಗುತ್ತದೆ. ಇದರಿಂದ ರೈತರ ಶೋಷಣೆಯಾಗುವುದು ಬೇಡ. ಇವತ್ತು ಏನಾಗುತ್ತಿದೆ ಎಂದರೆ ಅಪೆಕ್ಸ್ ಬ್ಯಾಂಕ್ ನಿಂದ ಸಾಲವನ್ನು ಕೊಡಿಸುವಾಗ ಮಧ್ಯವರ್ತಿಗಳು ಬಹಳಷ್ಟು ಹಣವನ್ನು ತಿಂದುಹಾಕಿಬಿಡುತ್ತಾರೆ. ಅದು ತಪ್ಪಿ ತಾವು ಕೊಡತಕ್ಕ ಸಾಲದ ಹಣ ನೇರವಾಗಿ ರೈತನಿಗೇ ಸಿಕ್ಕುವಂತೆ ಮಾಡಬೇಕು. ಇಷ್ಟರಲ್ಲೇ ಪಂಚಾಯಿತಿ ಪರಿಷತ್ ಬಿಲ್ಲನ್ನು ಸಭೆಯ ಮುಂದಿಡುತ್ತೇವೆಂದು ತಾವು ಹೇಳುತ್ತಿದ್ದೀರಿ. ನೀವು ಪಂಚಾಯಿತಿ ಮಂಡಲಗಳ ರಚನೆಯನ್ನುಮಾಡಿ ಭೂ ಅಭಿವೃದ್ಧಿ ಬ್ಯಾಂಕ್‌ನಿಂದ ಬರತಕ್ಕ ಸಾಲವನ್ನು ಕೆಲವು ಸೇವಾ ಸಹಕಾರ ಸಂಘಗಳ ಮುಖಾಂತರ ಕೊಡುವುದಕ್ಕೆ ಅವಕಾಶ ಮಾಡಿಕೊಟ್ಟಿದ್ದೀರಿ. ಅದೇರೀತಿ ನಾವೂ ಮಾಡುತ್ತಿದ್ದೇವೆ. ನಾವು ಇದನ್ನು ಪ್ರಯೋಗ ಮಾಡಬೇಕಾಗಿಲ್ಲ. ಇದನ್ನು ನೇರವಾಗಿ ಅನುಷ್ಠಾನಕ್ಕೆ ಕೊಡಿ. ಒಬ್ಬ ರೈತ ಒಂದು ಸಂಸ್ಥೆಗೆ ಹೋಗಿ ಕೇಳಿದಾಗ ಅಲ್ಪಾವಧಿ ಸಾಲ, ಮಧ್ಯಮಾವಧಿ ಸಾಲ, ಧೀರ್ಘಾವಧಿ ಸಾಲ ಎಲ್ಲಾ ಒಂದೇ ಕಡೆ ಸಿಕ್ಕುವಂತೆ ಮಾಡಿ. ಇದರಿಂದ ರೈತನ ಮನಸ್ಸಿನಲ್ಲೂ ಕೂಡ ನನಗೆ ಒಂದೇಕಡೆ ಎಲ್ಲಾ ವಿಧವಾದ ಸಾಲಗಳೂ ಸಿಕ್ಕುತ್ತವೆ, ಬೇರೆಕಡೆ ಹೋಗಬೇಕಾಗಿಲ್ಲ ಎನ್ನುವ ಭಾವನೆ ಬರುತ್ತದೆ. ನಿಮ್ಮ ಇಂದಿನ ಸೇವಾ ಸಹಕಾರ ಸಂಘಗಳು ಏನಿವೆ ಇವು ಸಹಸ್ರಾರು ಇದ್ದು ಇವುಗಳು ಯಾವ ಹಿಡಿತಕ್ಕೂ ಸಿಕ್ಕುತ್ತಿಲ್ಲ. ಏಕೆಂದರೆ ರಸ್ತೆ ಪಕ್ಕದಲ್ಲಿ ಹೋಗುತ್ತಿರುವಾಗ ಯಾವ ಸಹಕಾರ ಸಂಘಗಳು ಸಿಕ್ಕುತ್ತವೆ ಅಲ್ಲಿಗೆ ರಿಜಿಸ್ಟ್ರಾರ್ ಭೇಟಿ ನೀಡುತ್ತಾರೆ, ಜಾಯಿಂಟ್ ರಿಜಿಸ್ಟ್ರಾರ್ ಭೇಟಿ ನೀಡುತ್ತಾರೆ, ಜಿಲ್ಲಾ ಬ್ಯಾಂಕ್ ಅಧ್ಯಕ್ಷರೂ ಭೇಟಿ ನೀಡುತ್ತಾರೆ, ಸೂಪರ್‌ವೈಸರಗಳೂ ಭೇಟಿ ನೀಡುತ್ತಾರೆ. ಆದರೆ ಯಾವುದೋ ಮೂಲೆಯಲ್ಲಿರತಕ್ಕ ಸಹಕಾರ ಸಂಘಗಳಿಗೆ ಯಾರೂ ಭೇಟಿ ಕೊಡುವುದಿಲ್ಲ. ಈ ರೀತಿ ಇರುವುದರಿಂದ ಇವುಗಳ ಸಂಖ್ಯೆಯನ್ನು ಕಡಿಮೆ ಮಾಡಿದರೆ ಇವುಗಳ ಗುಣಮಟ್ಟವನ್ನೂ ಹೆಚ್ಚು ಮಾಡಬಹುದು. ಜನರಿಗೆ ಇವುಗಳ ಸೇವೆ ಸಿಕ್ಕುತ್ತದೆ. ಈಗ ತಾವು ೩ ಹಂತದ ಸಾಲದ ವಿತರಣೆ

ಯನ್ನು ತೆಗೆದು ೨ ಹಂತದ ವ್ಯವಸ್ಥೆಯನ್ನು ಮಾಡಿದರೆ ಜನ ಸಾಮಾನ್ಯರ ಮೇಲೆ ಏನು ಬಡ್ಡಿ ಹೇರಿಕೆ ಹೆಚ್ಚು ಬಿದ್ದಿದೆ ಅದು ಕಡಿಮೆಯಾಗಿ ರೈತರಿಗೆ ಅನುಕೂಲವಾಗುತ್ತದೆ. ಈ ದಿಸೆಯಲ್ಲಿ ಯೋಚನೆ ಮಾಡಿ ಇದನ್ನು ವಿಮರ್ಶೆ ಮಾಡಿ ತೀರ್ಮಾನ ತೆಗೆದುಕೊಳ್ಳಬೇಕೆಂದು ಹೇಳಬಯಸುತ್ತೇನೆ.

೧–೩೦ ಪಿ. ಎಂ.

ಇನ್ನು ಭೂ ಅಭಿವೃದ್ಧಿ ಬ್ಯಾಂಕ್ ಬಗ್ಗೆ ಹೇಳುವುದಾದರೆ ತಮಗೆ ಗೊತ್ತಿರುವ ಹಾಗೆ ೧೭೭ ಭೂ ಅಭಿವೃದ್ಧಿ ಬ್ಯಾಂಕ್‌ಗಳು ಇದ್ದು ಅವುಗಳಲ್ಲಿ ಅರ್ಧಕ್ಕಿಂತ ಹೆಚ್ಚು ಭಾಗ ಹಣವನ್ನು ಕೊಡತಕ್ಕಂಥ ಮಟ್ಟದಲ್ಲಿಯೇ ಇಲ್ಲ. ಹೀಗಿರುವಾಗ ಅವರು ಏನು ಸಾಲವನ್ನು ಕೊಡುವುದಕ್ಕೆ ಸಾಧ್ಯವಾಗುತ್ತದೆ? ವಸೂಲಾತಿಯೇ ೬೫ ಪರ್ಸೆಂಟ್‌ಗಿಂತ ಕಡಿಮೆ ಆಗುತ್ತಿರಬೇಕಾದರೆ ಮತ್ತೆ ಯಾರು ಸಾಲವನ್ನು ಪಡೆದಿರುತ್ತಾರೋ ಅವರು ಸಾಲವನ್ನು ಕೊಡದಿದ್ದರೆ, ಕಂತುಗಳಲ್ಲಿ ಸಾಲವನ್ನು ತೀರಿಸದಿದ್ದರೆ ಮತ್ತೆ ಸಾಲವನ್ನು ಹೇಗೆ ಕೊಡಲು ಸಾಧ್ಯವಾಗುತ್ತದೆ? ಆದರೆ ಹೊಸ ಸಾಲವನ್ನು ರೈತರು ಪಡೆಯಬೇಕೆಂದರೆ ಕಮರ್ಷಿಯಲ್ ಬ್ಯಾಂಕ್‌ಗಳು ಹೆಚ್ಚಿನ ಸಾಲವನ್ನು ಕೊಡುವುದಿಲ್ಲ, ಅವರು ವಾಪಸ್ ಕೊಡುತ್ತಾರೆ ಎನ್ನುವ ದೃಷ್ಟಿ ಇದ್ದರೆ ಮಾತ್ರ ಸಾಲವನ್ನು ಕೊಡುತ್ತಾರೆ. ಆದ್ದರಿಂದ ರಿಸ್ಟ್ರಿಕ್ಟ್ ಫೈನಾನ್ಸ್ ವ್ಯವಸ್ಥೆ ಏನು ಇರುತ್ತದೆ ಆ ವ್ಯವಸ್ಥೆಯನ್ನು ಮಾಡಬೇಕು. ಭೂ ಅಭಿವೃದ್ಧಿ ಬ್ಯಾಂಕ್‌ಗಳಿಂದ ರಿಸ್ಟ್ರಿಕ್ಟೆಡ್ ಫೈನಾನ್ಸ್ ಕೊನೆಯಪಕ್ಷ ಸರ್ಕಾರದವರು ಕೊಟ್ಟು ಅವರ ಸಹಾಯಕ್ಕೆ ಬರಬೇಕು. ಮತ್ತು ವಸೂಲಾತಿಯ ಬಗ್ಗೆಯೂ ಕೂಡ ಯಾವರೀತಿ ಮಾಡಬೇಕೆಂಬುವರ ಬಗ್ಗೆ ಯೋಚನೆ ಮಾಡಬೇಕು. ಅವರಿಗೆ ಕೊಟ್ಟ ಹಣ ಹಿಂದಿರುಗಿಸಿಕೊಡಲೂ ವ್ಯವಸ್ಥೆಯನ್ನು ತಾವು ಮಾಡಬೇಕು.

ಇನ್ನು ಪುನರ್ ವಿಂಗಡಣೆಯಲ್ಲಿ ಏನು ಮಾಡಿದ್ದಾರೆ ಎಂದರೆ ಹೆಚ್ಚು ಕಡಿಮೆ ಮೂರು ಸೇವಾ ಸಹಕಾರಿ ಸಂಘಗಳೆಂದು ಮಾಡಿ ಅರ್ಧಂಬರ್ಧ ಕಡಿಮೆ ಮಾಡಿದ್ದಾರೆ. ಆದರೆ ಬಹುಶಃ ಈ ಮಟ್ಟದಲ್ಲಿ ಮಾಡಿದರೂ ಕೂಡ ಮೂರು ಸಾವಿರ ಚಿಲ್ಲರೆ ಸೊಸೈಟಿಗಳು ಬರುತ್ತವೆ. ಇದು ಬಹಳ ದೊಡ್ಡ ಸಂಖ್ಯೆಯಲ್ಲಿ ಇರುತ್ತದೆಂದು ಹೇಳಿದಾಗ ಈ ಒಂದು ವ್ಯವಸ್ಥೆಯನ್ನು ಮಂಡಳ್ ಪಂಚಾಯತ್ ಎಂದು ಏನಾದರೂ ರಚನೆ ಮಾಡಿದರೆ ಬಹುಶಃ ಈ ಸೇವಾ ಸಹಕಾರ ಸಂಘಗಳನ್ನು ಕೊಟ್ಟು ಸಾಲಗಳನ್ನು ಅದರ ಮುಖಾಂತರ ಮಾಡಿದರೆ ಒಳ್ಳೆಯದೆಂದು ಹೇಳುತ್ತೇನೆ. ಆಡಳಿತ ನಿರ್ವಹಣೆಯ ಬಗ್ಗೆ ಮತ್ತು ಎಲ್ಲಾ ವ್ಯವಹಾರಗಳನ್ನೂ ಕೂಡ ಅದರ ಮುಖಾಂತರ ಮಾಡಲಿಕ್ಕೆ ಅನುಕೂಲವಾಗುತ್ತದೆ, ಮತ್ತು ಉತ್ತಮ ಸೇವೆಯನ್ನು ರೈತರಿಗೆ ಕೊಡಲಿಕ್ಕೆ ಸಹಾಯವಾಗುತ್ತದೆ ಎನ್ನುವುದನ್ನು ತಮ್ಮ ಗಮನಕ್ಕೆ ತರಬಯಸುತ್ತೇನೆ.

ಇನ್ನು ಮಾರ್ಕೆಟಿಂಗ್ ಫೆಡರೇಷನ್ ಎಂಬುದಾಗಿ ಇರುತ್ತದೆ. ಈ ಮಾರ್ಕೆಟಿಂಗ್ ಫೆಡರೇಷನ್ ಮತಿಯಿಂದ ತಾಲ್ಲೋಕ್ ಮಟ್ಟದಲ್ಲಿರತಕ್ಕಂಥ ಸೊಸೈಟಿಗಳು ಏನು ಇವೆ, ಇವನ್ನು ರಚನೆ ಮಾಡಿದ ಉದ್ದೇಶವಾದರೂ ಕೂಡ ಇಷ್ಟೇ. ಯಾರು ಸಾಲವನ್ನು ಪಡೆದಿರುತ್ತಾರೋ ಅಂಥ ವ್ಯಕ್ತಿ ತಾನು ಬೆಳೆದ ಫಸಲನ್ನು ಒಳ್ಳೆಯ ಧಾರಣೆ ಇಲ್ಲದಂಥ ಪರಿಸ್ಥಿತಿಯಲ್ಲಿ ಅದನ್ನು ಗೋಡೌನ್‌ನಲ್ಲಿ ಸ್ಟಾಕ್ ಮಾಡಿ ಧಾರಣೆ ಬಂದಾಗ ಮಾರಲಿಕ್ಕೆ ವ್ಯವಸ್ಥೆ ಮಾಡಿರತಕ್ಕಂಥ ಸಂಸ್ಥೆಗಳು ಇವು. ಇಷ್ಟು ಉಪಯೋಗಕ್ಕೆ ಮಾಡಿದ್ದರೂ ಕೂಡ ಅದು ಸಮರ್ಪಕವಾಗಿ ನಡೆಯುತ್ತಿದೆಯೇ ಎಂದು ಕೇಳಿದರೆ ೧೦೦ಕ್ಕೆ ೯೯ ಭಾಗ ವ್ಯವಸ್ಥಿತವಾಗಿ ನಡೆಯುತ್ತಿಲ್ಲ. ಹೀಗಾಗಲು ನೌಕರರು ಏನು ಮಾಡುತ್ತಿರುತ್ತಾರೆ, ಡಿಪಾರ್ಟ್‌ಮೆಂಟ್ ಏನು ಮಾಡುತ್ತಿದೆ ಎಂಬುವುದನ್ನು ಹೇಳಲಿಕ್ಕೆ ಯಾರೂ ತಯಾರಿಲ್ಲ ನನಗನ್ನಿಸುತ್ತದೆ ಎಲ್ಲರೂ ಕೂಡ ಅದು ಹೇಗಾದರೂ ನಡೆಯಲಿ, ಅದು ಇದ್ದ ಹಾಗೆ ಇರಲಿ ಎನ್ನುವ ದೃಷ್ಟಿಯಿಂದ ನಡೆಸುತ್ತಿದ್ದಾರೆ. ಕೋಟ್ಯಾಂತರ ರೂಪಾಯಿಗಳನ್ನು ಖರ್ಚುಮಾಡಿ ಗೋಡೌನ್‌ಗಳನ್ನು ಕಟ್ಟಿರುತ್ತಾರೆ. ಅವು ನೂರಕ್ಕೆ ೯೦ ಭಾಗ ಖಾಲಿ ಇರುತ್ತವೆ. ಸರ್ಕಾರದವರು ಸಹಕಾರಿ ಸಂಘಗಳ ಮುಖಾಂತರ ವೆಚ್ಚ ಮಾಡಿರತಕ್ಕಂಥದ್ದು, ಅದರ ಫಲ ರೈತರಿಗೆ ದೊರೆಯಲಿ ಎಂದು. ಆದರೆ ಅದರಿಂದ ಯಾವುದೇ ಪ್ರಯೋಜನ ಈಗ ದೊರೆಯುತ್ತಿಲ್ಲ. ಮಾರ್ಕೆಟಿಂಗ್ ಸೊಸೈಟಿಗಳ ಮುಖಾಂತರ ಗೊಬ್ಬರ ಬೀಜ ಇವೇ ಮುಂತಾದವು ರೈತರಿಗೆ ಬೇಕಾದ ವಸ್ತುಗಳನ್ನು ವಿತರಣೆ ಮಾಡಲಿಕ್ಕೆ ವ್ಯವಸ್ಥೆಯನ್ನು ಮಾಡಿದ್ದರೂ ಕೂಡ ೧೦ ಪರ್ಸೆಂಟ್‌ನಷ್ಟು ಗೊಬ್ಬರವಾಗಲಿ, ಕ್ರಿಮಿಕೀಟ ನಾಶಕ ವಸ್ತುಗಳಾಗಲಿ ದೊರೆಯುತ್ತಿಲ್ಲ. ಇದು ಎಲ್ಲೆಲ್ಲೂ ಕೂಡ ಈರೀತಿಯಾಗಿ ನಡೆಯುತ್ತಿದೆ. ರೈತರಿಗೆ ಸಕಾಲದಲ್ಲಿ ಗೊಬ್ಬರ ವಗೈರೆ ದೊರಕುವಂತೆ ವ್ಯವಸ್ಥೆ ಮಾಡಿದ್ದರೂ ಕೂಡ ಈ ಸಹಕಾರಿ ಗೋಡೌನುಗಳು ಮಾಡುತ್ತಿಲ್ಲ. ರೈತರಿಗೆ ವ್ಯವಸ್ಥಿತವಾಗಿ ಇದರ ಉಪಯೋಗ ದೊರೆಯುತ್ತಿಲ್ಲ. ಆದ್ದರಿಂದ ರೈತರಿಗೆ ಇದೆಲ್ಲಾ ಸಹಕಾರ ದೊರೆಯುವಂಥ ರೀತಿಯಲ್ಲಿ ನಡೆಸಬೇಕೆಂದು ನಾನು ತಮ್ಮ ಮೂಲಕ ಅರಿಕೆ ಮಾಡಿಕೊಳ್ಳುತ್ತೇನೆ.

ಇನ್ನು ಗ್ರಾಹಕರ ಸಹಕಾರಿ ಸಂಘಗಳು—ಇವುಗಳ ಬಗ್ಗೆ ಹೇಳಬೇಕಾದರೆ ಇವುಗಳಲ್ಲಿ ದೊಡ್ಡ ಅವ್ಯವಹಾರವೇ ನಡೆಯುತ್ತಿದೆ. ಇದೊಂದು ಅವ್ಯವಹಾರಗಳ ಕೂಪವೆಂದು ಹೇಳಿದರೆ ತಪ್ಪಾಗಲಾರದು. ಈವತ್ತಿನ ದಿವಸ ರಾಜ್ಯದಲ್ಲಿರುವ ಸಹಕಾರಿ ಸಂಘಗಳನ್ನು ಮೂರು ಹಂತದಲ್ಲಿ ಮಾಡಿರುತ್ತಾರೆ. ಇದನ್ನು ವರದಿಯಲ್ಲಿ ಹೇಳಿದ್ದಾರೆ. ಇವುಗಳನ್ನು ಒಂದು ಅವ್ಯವಸ್ಥಿತ ಕೂಪವೆಂದು ಕರೆಯುವುದಷ್ಟೆ ಅಲ್ಲ, ಇದನ್ನು ಯಾವ ಮಟ್ಟದಲ್ಲಿ ಕರೆದರೂ ಕೂಡ ಕಡಿಮೆಯೇ ಎಂದು ಹೇಳಬೇಕಾಗುತ್ತದೆ. ಜಿಲ್ಲಾ ಮಟ್ಟದಲ್ಲಿ, ರಾಜ್ಯ ಮಟ್ಟದಲ್ಲಿ ಜನತಾ ಬಜಾರ್‌ಗಳನ್ನು ಸ್ಥಾಪನೆ ಮಾಡಿರುತ್ತಾರೆ. ಇಲ್ಲಿ ಖಾಲಿ ಗೋಣಿಚೀಲಗಳು ಕೂಡ ಕಾಣಿಸುತ್ತಿಲ್ಲ. ಮಾನ್ಯ ರಂಗನಾಥ್‌ರವರು ಇದರ ಬಗ್ಗೆ ಟೀಕೆ ಮಾಡಿದ್ದಾರೆ. ಆದರೆ ಹೆಚ್ಚಿನ ಸಂಖ್ಯೆಯಲ್ಲಿ ಇರತಕ್ಕಂಥ ಕರ್ನಾಟಕ ಮಾರ್ಕೆಟಿಂಗ್ ಫೆಡರೇಷನ್‌ರವರು ಐದು ಜನತಾ ಬಜಾರ್‌ಗಳನ್ನು ತುಮಕೂರು, ಮಂಡ್ಯ, ಹುಬ್ಬಳ್ಳಿಯಲ್ಲಿ ನಡೆಸುತ್ತಿದ್ದಾರೆ. ಸಗಟು ಕೇಂದ್ರಗಳು ಹಾಗೆಯೇ ೧ ೪೮೭ ಪ್ರಾಥಮಿಕ ಸಹಕಾರಿ ಸಂಘಗಳು ಇದ್ದು ಅವುಗಳ ಒಟ್ಟು ವ್ಯವಹಾರ ೨೫.೧೮ ಕೋಟಿ ರೂಪಾಯಿಗಳು, ಇಷ್ಟೊಂದು ಸಾರ್ವಜನಿಕ ವ್ಯವಸ್ಥೆ ಇದ್ದರೂ ಕೂಡ ಇಲ್ಲಿ ನಡೆಯತಕ್ಕಂಥ ಅವ್ಯವಹಾರಗಳನ್ನು ನೋಡಿದಾಗ ನಮ್ಮ ಪಕ್ಷದವರೇ ಅಧಿಕಾರ ನಡೆಸುತ್ತಿರಲಿ ಯಾರೇ ನಡೆಸುತ್ತಿರಲಿ ಇದರಲ್ಲಿ ಒಂದು ಪರ್ಸೆಂಟ್ ಸೇವೆಯನ್ನೂ ಕಾಣುತ್ತಿಲ್ಲ. ಈವೊತ್ತು ನಾವು ಹೇಳುವುದಾದರೆ, ಧಾರಣೆವಾಸಿಗಳು ಗಗನಕ್ಕೆ ಏರುತ್ತಿವೆ. ಈವತ್ತಿನದಿವಸ ಸರ್ಕಾರದವರು ಆಹಾರಧಾನ್ಯಗಳನ್ನು ವಿತರಣೆ ಮಾಡಲು ಫೇರ್‌ಪ್ರೈಸ್ ಷಾಪ್‌ಗಳನ್ನು ನಡೆಸಿದರೂ, ಸಹಕಾರಿ ಸಂಘಗಳ ಮುಖಾಂತರ ಆಹಾರಧಾನ್ಯಗಳನ್ನು ವಿತರಣೆ ಮಾಡಿದರೂ ಸಾರ್ವಜನಿಕರಿಗೆ ತೊಂದರೆ ಇದ್ದೇ ಇರುತ್ತದೆ. ಬಡವರು ಹಳ್ಳಿಗಾಡಿನಲ್ಲಿರತಕ್ಕಂಥವರಿಗೆ ದಿನನಿತ್ಯ ಬಳಕೆ ವಸ್ತುಗಳು ದೊರೆಯುತ್ತಲೇ ಇಲ್ಲ. ಬಳಕೆ ವಸ್ತುಗಳ ಬೆಲೆ ಮುಗಿಲನ್ನು ಮುಟ್ಟಿರತಕ್ಕಂಥ ಸಂದರ್ಭದಲ್ಲಿ ಹಳ್ಳಿಗಾಡಿನಲ್ಲಿರತಕ್ಕಂಥ ನ್ಯಾಯಬೆಲೆ ಅಂಗಡಿಗಳಿಗೆ ದವಸಧಾನ್ಯಗಳು ಮುಟ್ಟುತ್ತಲೇ ಇಲ್ಲ. ಸಹಕಾರಿ ಸಂಘಗಳಿಗೆ ಬರಬೇಕಾದ ಅಕ್ಕಿ, ಸಕ್ಕರೆ ಮುಂತಾದ ಆಹಾರ ಪದಾರ್ಥಗಳು ಸರಿಯಾಗಿ ಬರುತ್ತಿದೆಯೇ, ವಿತರಣೆ ಕಾರ್ಯ ಸರಿಯಾಗಿ ನಡೆಯುತ್ತಿದೆಯೇ ಎಂಬುದನ್ನು ತನಿಖೆ ಮಾಡಲು ಅಧಿಕಾರಿಗಳು ಇರುತ್ತಾರೆ, ೨೫ ಸಾವಿರ ಕೋ–ಆಪರೇಟೀವ್ ಸೊಸೈಟಿಗಳು ಈರೀತಿಯಾಗಿ ನಡೆಯುತ್ತಿರಬೇಕಾದರೆ ಅಧಿಕಾರಿಗಳು ಕಣ್ಣು ಮುಚ್ಚಿಕೊಂಡು ಕುಳಿತಿರುತ್ತಾರೆಯೇ ಎಂದು ಕೇಳಬೇಕಾಗುತ್ತದೆ. ಈರೀತಿಯಾಗಿ ಗ್ರಾಹಕರ ಸಹಕಾರಿ ಸಂಘಗಳ ಮುಖಾಂತರ ಕೋಟ್ಯಾಂತರ ರೂಪಾಯಿಗಳ ನಷ್ಟ ಸರ್ಕಾರಕ್ಕೆ ಆಗುತ್ತಿರುತ್ತದೆ. ಗ್ರಾಹಕರ ಸಹಕಾರಿ ಸಂಘಗಳು, ಬಹಳ ಹೆಚ್ಚಿನ ಪ್ರಮಾಣದಲ್ಲಿ ನಡೆಯಬೇಕು. ಯಾವ ಉದ್ದೇಶಕ್ಕಾಗಿ ಈ ಸಹಕಾರಿ ಸಂಘಗಳನ್ನು ಸ್ಥಾಪನೆ ಮಾಡಿದರೆ ಆ ಉದ್ದೇಶ ಸಫಲವಾಗಲು ಸಂಬಂಧಪಟ್ಟ ಅಧಿಕಾರಿಗಳು ಪ್ರಾಮಾಣಿಕತೆಯಿಂದ, ದಕ್ಷತೆಯಿಂದ ಕೆಲಸ ಮಾಡಬೇಕು. ಅಲ್ಲಿ ಕೆಲಸ ಮಾಡತಕ್ಕಂಥ ಅಧಿಕಾರೇತರರೂ ಕೂಡ ಪ್ರಾಮಾಣಿಕವಾಗಿ ಕೆಲಸ ಮಾಡಬೇಕು. ಎಲ್ಲ ಸರಿಯಾಗಿ ನಡೆಯುತ್ತಿದೆ ಎಂದು ಅಧಿಕಾರೇತರ ಅಧ್ಯಕ್ಷರು ಯಾರು ಇರುತ್ತಾರೋ ಅವರು ತಮಗೆ ಕೊಟ್ಟಿರತಕ್ಕಂಥ ಜೀಪ್‌ನ್ನು ತೆಗೆದುಕೊಂಡು ರಜಾದಿನಗಳಲ್ಲಿ ತಮ್ಮ ಕುಟುಂಬ ಸಮೇತ ಪ್ರೇಕ್ಷಣೀಯ ಸ್ಥಳಗಳನ್ನು ನೋಡತಕ್ಕಂಥ ಕೆಲಸ ಮಾಡಬಾರದು. ಆದ್ದರಿಂದ ಎಲ್ಲಿಯವರೆಗೆ ಈ ಕೆಳಮಟ್ಟದ ಸಿಬ್ಬಂದಿಯನ್ನು ಹೆಚ್ಚು ಮಾಡುವುದಿಲ್ಲವೋ ಮತ್ತು ಮತ್ತು ವಿಚಾರಣ ಸಿಬ್ಬಂದಿಯನ್ನು ಹೆಚ್ಚು ಮಾಡುವುದಿಲ್ಲವೋ ಅಲ್ಲಿಯವರೆಗೆ ಈ ವ್ಯವಸ್ಥೆ ಜಯಪ್ರದವಾಗುವುದಿಲ್ಲವೆಂದು ಹೇಳುತ್ತೇನೆ. ಈ ಗ್ರಾಹಕರ ಸೇವಾ ಸಹಕಾರ ಸಂಘಗಳ ಮೇಲ್ವಿಚಾರಣೆಯನ್ನು ದಕ್ಷತೆಯಿಂದ ಮಾಡುವಂತಹ ವ್ಯವಸ್ಥೆಯಾಗಬೇಕೆಂಬುದು ಮಾನ್ಯ ಮಂತ್ರಿಯವರಲ್ಲಿ ಮನವಿ ಮಾಡಿಕೊಳ್ಳುತ್ತೇನೆ.

ಇನ್ನು ಹಣ ದುರುಪಯೋಗದ ಬಗ್ಗೆ ಹೇಳುವುದಾದರೆ, ಇಲ್ಲಿ ಹಣ ದುರುಪಯೋಗದ ಬಗ್ಗೆ ಕೈಕೊಳ್ಳಲಾದ ಕ್ರಮಗಳ ಬಗ್ಗೆ ವಿವರಗಳನ್ನು ಕೊಟ್ಟಿದ್ದಾರೆ. ಈಗ ಪೋಲೀಸ್ ಇಲಾಖೆಯಲ್ಲಿ ಒಟ್ಟು ೯೬೧ ಪ್ರಕರಣಗಳು ಬಾಕಿ ಇವೆ ಎಂದು ಹೇಳಿದ್ದಾರೆ. ಇದೊಂದು ದೊಡ್ಡ ಕತೆ. ಈ ಪೋಲೀಸ್ ಇಲಾಖೆಗೆ ಕಂಪ್ಲೈಂಟ್ ಕೊಟ್ಟರೆ ಅವರು ಬಂದು ವಿಚಾರಣೆ ಮಾಡಬೇಕಾದರೆ ಒಂದು ವರ್ಷ ಇಲ್ಲವೇ ಎರಡು ವರ್ಷಗಳು ಹಿಡಿಯುತ್ತದೆ. ಅಲ್ಲಿಯವರೆಗೆ ಅವರು ಇದಕ್ಕೆ ಸಂಬಂಧಪಟ್ಟ ಪುಸ್ತಕಗಳನ್ನು ತೆಗೆದುಕೊಂಡು ಹೋಗಿ ಇಟ್ಟುಕೊಂಡಿರುತ್ತಾರೆ. ಇದರಿಂದ ಆಡಿಟರ್‌ಗೆ ತನಿಖೆಗಾಗಿ ಈ ಪುಸ್ತಕಗಳು ಸಿಗುವುದೇ ಇಲ್ಲ. ಇದರಿಂದ ಅಲ್ಲಿನ ಕಾರ್ಯದರ್ಶಿಯವರಿಗೆ, ಸಂಬಂಧಪಟ್ಟ ಅಧ್ಯಕ್ಷರಿಗೆ, ಹಾಗೂ ಈ ಮಧ್ಯೆ ಅಲ್ಲಿಗೆ ಭೇಟಿ ಕೊಟ್ಟು ಎಲ್ಲವೂ ಸರಿಯಾಗಿದೆ ಎಂದು ಹೇಳಿ ಸಹಿ ಮಾಡಿ ಬಂದಿರುವ ಅಧಿಕಾರಿಗಳೆಲ್ಲರಿಗೂ ರಕ್ಷಣೆ ಸಿಕ್ಕುತ್ತದೆ. ಇಲ್ಲಿ ಇವರೇಕೊಟ್ಟಿರುವ ಅಂಕಿಅಂಶಗಳ ಪ್ರಕಾರ ೪೫ ಪ್ರಕರಣಗಳನ್ನು ಪೋಲೀಸರು ತನಿಖೆಗಾಗಿ ತೆಗೆದುಕೊಂಡಿದ್ದಾರೆ ಈ ಗತಿಯಲ್ಲಿ ಹೋದರೆ ಎಲ್ಲ ಪ್ರಕರಣಗಳು ತನಿಖೆಯಾಗುವುದು ಯಾವಾಗ? ಇಲ್ಲಿ ದಾಖಲಾದ ಪ್ರಕರಣಗಳೇ ಇಷ್ಟಿವೆ,

ಇನ್ನು ದಾಖಲಾಗದ ಪ್ರಕರಣಗಳು ಸಹಸ್ರಾರು ಇವೆ. ಆದರೂ ತನಿಖೆಗಾಗಿ ಕೇವಲ ೪೫ ಪ್ರಕರಣಗಳನ್ನು ತೆಗೆದುಕೊಂಡಿರುವುದನ್ನು ನೋಡಿದರೆ ಮತ್ತು ಇದು ಇಷ್ಟು ಮಂದಗತಿಯಲ್ಲಿ ಹೋದರೆ ಈ ಅನ್ಯಾಯ ಹಾಗೂ ಅನಾಹುತಗಳನ್ನು ಯಾವ ರೀತಿ ಬಗೆಹರಿಸಬಹುದೆಂಬುದನ್ನು ಮಾನ್ಯ ಸಹಕಾರ ಮಂತ್ರಿಗಳೇ ಯೋಚನೆ ಮಾಡಬೇಕು. ಇಂತಹ ಹಣ ದುರುಪಯೋಗದ ಕೇಸ್‌ಗಳು ಪೋಲೀಸರ ಮೂಲಕ ತನಿಖೆಯಾಗದೆ ನೇರವಾಗಿ ಕೋರ್ಟಿಗೆ ಸಲ್ಲಿಸುವಂತಹ ವ್ಯವಸ್ಥೆ ಜಾರಿಗೆ ಬರಬೇಕು ಇಲ್ಲವೇ ಕಾರ್ಮಿಕ ಇಲಾಖೆಯ ಮೂಲಕ ಇವುಗಳನ್ನು ತನಿಖೆ ಮಾಡಿಸಬಹುದು. ಈಗ ಕೋರ್ಟಿಗೆ ಹೋದಂಥ ಪ್ರಕರಣಗಳ ಬಗ್ಗೆ ಸ್ಥೂಲವಾಗಿ ನೋಡಿದಾಗ ೫೦ ಪ್ರಕರಣಗಳಿಗೆ ಸಂಬಂಧಪಟ್ಟಂತೆ ೬ ಪ್ರಕರಣಗಳಲ್ಲಿ ಶಿಕ್ಷೆ ವಿಧಿಸಲಾಗಿದೆ. ೯ ಪ್ರಕರಣಗಳಲ್ಲಿ ಸಂಬಂಧಪಟ್ಟವರನ್ನು ಖುಲಾಸೆ ಮಾಡಲಾಗಿದೆ ಹಾಗೂ ೧೩ ಪ್ರಕರಣಗಳಲ್ಲಿ 'ಬಿ' ವರದಿಯನ್ನು ನೀಡಲಾಗಿದೆ. ೮ ಪ್ರಕರಣಗಳನ್ನು ಇತರ ರೀತಿಯಲ್ಲಿ ವಿಲೇ ಮಾಡಲಾಗಿದೆ. ಇಲ್ಲಿ ಹಣದ ದುರುಪಯೋಗ ಸೇಲ್ಸ್‌ಮನ್ ಕಡೆಯಿಂದ ಇಲ್ಲವೇ ಪದಾಧಿಕಾರಿಗಳ ಮೂಲಕ ಆಗಿರುವುದಂತೂ ಸರ್ವವೇದ್ಯ. ಆದರೂ ಸಹ ಶೇಕಡಾ ೬೦ ರಿಂದ ೭೦ ಪ್ರಕರಣಗಳಲ್ಲಿ ತಪ್ಪಿಸಿಕೊಳ್ಳಲು ಕಾರಣವೇನು? ಸಂಬಂಧಪಟ್ಟ ಅಧಿಕಾರಿಗಳಲ್ಲಿ ಆಡಳಿತದ ಒಂದು ಅರಿವು ಸಾಕಷ್ಟು ಇಲ್ಲದಿರುವುದೇ ಇದಕ್ಕೆ ಕಾರಣವೆಂದು ನನಗನಿಸುತ್ತಿದೆ. ಇದರಿಂದಲೇ ತಪ್ಪು ಮಾಡಿದವರು ಕಾನೂನಿನ ಹಿಡಿತದಿಂದ ತಪ್ಪಿಸಿಕೊಳ್ಳುತ್ತಿದ್ದಾರೆ. ತಪ್ಪು ಮಾಡಿದರೆ ಇಲ್ಲವೇ ಹಣವನ್ನು ದುರುಪಯೋಗಪಡಿಸಿಕೊಂಡರೆ ಕೋರ್ಟಿನಲ್ಲಿಯೂ ತಪ್ಪಿಸಿಕೊಳ್ಳಬಹುದೆಂದು ಈ ಸಹಕಾರಿ ರಂಗದಲ್ಲಿ ದುಡಿಯುವವರಿಗೆ ತಿಳಿದಾಗ ಅವರು ಎಷ್ಟು ಬೇಕಾದರೂ ಹಣ ಲೂಟಿ ಮಾಡಬಹುದೆಂಬ ಮನೋಪ್ರವೃತ್ತಿ ಅವರಲ್ಲಿ ಬರುತ್ತದೆ. ಆದ್ದರಿಂದ ಇದಕ್ಕೆ ಸೂಕ್ತ ಕ್ರಮ ತೆಗೆದುಕೊಳ್ಳದಿದ್ದರೆ ಮುಂದೆ ಈ ಸಹಕಾರಿ ಆಂಧೋಳನವೇ ಪೂರ್ತಿಯಾಗಿ ನಾಶವಾಗುತ್ತದೆ. ಈ ಕಾರಣದಿಂದ ಪ್ರತಿ ಜಿಲ್ಲೆಯಲ್ಲಿಯೂ ಕಾನೂನು ಸಲಹೆ ಕೊಡಲು ಲೀಗಲ್-ಸೆಲ್‌ನ ವ್ಯವಸ್ಥೆಯನ್ನು ತಮ್ಮ ಕಾಲದಲ್ಲಿಯಾದರೂ ಮಾಡಬೇಕು. ಇವರ ಒಂದು ಸಲಹೆ ಪಡೆದು ಕೇಸ್‌ಗಳನ್ನು ದಾಖಲಾತಿ ಮಾಡಿದರೆ ಯಾರೂ ತಪ್ಪಿಸಿಕೊಳ್ಳಲು ಸಾಧ್ಯವಾಗುವುದಿಲ್ಲ. ಆದ್ದರಿಂದ ಇದನ್ನು ಯೋಚನೆ ಮಾಡಬೇಕೆಂದು ಮಾನ್ಯ ಮಂತ್ರಿಗಳ ಮುಂದೆ ಸಲಹೆ ಮಾಡಲು ಇಷ್ಟಪಡುತ್ತೇನೆ.

ಇನ್ನು ಮುಚ್ಚಲಾದ ಸಹಕಾರ ಸಂಘಗಳ ಬಗ್ಗೆ ಹೇಳಬೇಕಾದರೆ, ತಾ: ೧-೪-೧೯೮೩ರವರೆಗೆ ೪೩೮೯ ಸಹಕಾರ ಸಂಘಗಳು ಮುಚ್ಚುವ ಹಂತದಲ್ಲಿದ್ದವು ಎಂದು ಇಲ್ಲಿ ಹೇಳಿದ್ದಾರೆ. ಇವುಗಳಲ್ಲಿ ವಸೂಲಿಗಾಗಿ ಇದ್ದ ಆಸ್ತಿಯ ಒಟ್ಟು ಮೊಬಲಗು ೫೭೮.೩೮ ಲಕ್ಷ ರೂಪಾಯಿಗಳು ಮತ್ತು ತೀರಿಸಬೇಕಾಗಿರುವ ಸಾಲದ ಮೊಬಲಗು ೭೩೪.೫೬ ಲಕ್ಷ ರೂಪಾಯಿಗಳು ಎಂದು ಹೇಳಿದ್ದಾರೆ. ಇಲ್ಲಿ ಆಸ್ತಿಗಿಂತ ಸಾಲದ ಮೊಬಲಿಗೇ ಜಾಸ್ತಿಯಾದರೆ ಇನ್ನುಳಿದ ಹಣದಗತಿ ಏನಾಯಿತು? ಇದು ಇಲ್ಲಿಯವರೆಗೆ ಬರುವವರೆಗೆ ಸಂಬಂಧಪಟ್ಟ ಅಧಿಕಾರಿಗಳು ಏನು ಮಾಡುತ್ತಿದ್ದರು? ಇಲ್ಲಿ ರಿಜಿಸ್ಟ್ರಾರ್ ಆಗಲೀ ಜಾಯಿಂಟ್ ರಿಜಿಸ್ಟ್ರಾರ್ ಆಗಲೀ, ಡೆಪ್ಯೂಟಿ ರಿಜಿಸ್ಟ್ರಾರ್ ಆಗಲೀ, ಸಿ.ಒ. ಆಗಲೀ, ಬ್ಯಾಂಕ್‌ನ ಅಧ್ಯಕ್ಷರಾಗಲೀ, ಜಿಲ್ಲಾ ಬ್ಯಾಂಕ್‌ನ ಸೂಪರ್‌ವೈಜರ್ ಆಗಲೀ ತನಿಖೆಗೆ ಹೋದಾಗ ಪೂರ್ತಿಯಾಗಿ ವಿವರಗಳನ್ನು ನೋಡದೆ ಮತ್ತು ಆಳವಾಗಿ ಅಭ್ಯಾಸ ಮಾಡದೆ Physical balance found to agree with the book balance ಎಂದು ಗುದ್ದಲಿ ಗುರುತು ಹಾಕಿ ಬಂದುಬಿಡುತ್ತಾರೆ. ತಾವು ತನಿಖೆ ಮಾಡಿದ್ದಕ್ಕೆ ಒಂದು ಗುರುತು ಇರಲಿ ಎಂದು ಸಹಿ ಮಾಡಿ ಬರುತ್ತಾರೆ. ಈ ರೀತಿಯ ತಪಾಸಣೆ ಮಾಡುವುದರಿಂದ ಏನಾಗುತ್ತಿದೆ ಎಂದರೆ, ಇವರು ತಪಾಸಣೆ ಮಾಡಿ ಸಹಿ ಹಾಕಿ ಬಂದ ೬ ತಿಂಗಳಲ್ಲಿಯೇ ಮತ್ತೆ ಅಲ್ಲಿ ಲಕ್ಷಾಂತರ ರೂಪಾಯಿಗಳಷ್ಟು ಹಣದ ದುರುಪಯೋಗವಾಗುತ್ತದೆ. ಹಣದ ದುರುಪಯೋಗದ ಸಂದರ್ಭಗಳಲ್ಲಿ ಸರ್ಕಾರದವರು ಸೆಕ್ಷನ್ ೩೦ರ ಪ್ರಕಾರ ಅಲ್ಲಿನ ಆಡಳಿತ ಮಂಡಲಿ ಮೇಲೆ ಕ್ರಮ ತೆಗೆದುಕೊಳ್ಳುತ್ತಾರೆಯೇ ಹೊರತು "Verified everything found to be correct" ಎಂದು ಬರೆದು ಸಹಿ ಮಾಡಿ ಅಲ್ಲಿನ ಸಿಬ್ಬಂದಿಗೆ ಶಹಭಾಷ್‌ಗಿರಿ ಕೊಟ್ಟು ಬಂದಂಥ ರಾಜ್ಯ ಮಟ್ಟದ ಅಧಿಕಾರಿಗಳ ಮೇಲೆ, ತಾಲ್ಲೂಕ್ ಮಟ್ಟದ ಸಿ.ಒ. ಅವರ ಮೇಲೆ ಹಾಗೂ ಇನ್ನಿತರ ಸಂಬಂಧಪಟ್ಟ ಅಧಿಕಾರಿಗಳ ಮೇಲೆ ತಾವು ಏನು ಕ್ರಮ ತೆಗೆದುಕೊಂಡಿದ್ದೀರಿ? ಈ ಒಂದು ವ್ಯವಸ್ಥೆ ಮಾನ್ಯ ಜಾಲಪ್ಪನವರು ಮಂತ್ರಿಯಾದ ಮೇಲೆ ಜಾರಿಗೆ ಬಂದಿಲ್ಲ. ಬಹಳ ಹಿಂದಿನಿಂದಲೂ ನಡೆದುಕೊಂಡು ಬಂದಿದೆ. ಈ ಕ್ಷೇತ್ರದಲ್ಲಿ ರಾಜಕೀಯ ಪ್ರವೇಶ ಮಾಡಿರುವುದರಿಂದ ಅಧಿಕಾರಕ್ಕೇ ಯಾರೇ ಬರಲಿ, ಈ ಇಲಾಖೆ ಅವರಿಗೆ ಒಂದು ಶಾಪವಾಗಿ ಕಾಣುತ್ತದೆ. ಎಲ್ಲವೂ ನಮ್ಮ ಕಡೆಯಿಂದಲೇ ಆಗುತ್ತಿರುವುದೆಂಬ ಅಪವಾದ ಕೂಡ ಬರುತ್ತದೆ. ಅದೇ ನಾವೇನಾದರೂ ಈ ಕಡೆಯಿಂದ ಆ ಕಡೆ ಬಂದು ಬಿಟ್ಟರೆ ಅನುಕಂಪದ ನುಡಿ ಮಾತುಗಳು ಕೇಳಿ ಬರುತ್ತವೆ. ಇದನ್ನು ತಪ್ಪಿಸಲು ಆ ಕಡೆಯವರೊಬ್ಬರನ್ನು ಈ ಸಹಕಾರಿ ಇಲಾಖೆಯ ಮಂತ್ರಿಗಳನ್ನಾಗಿ ಮಾಡಿ

ಬಿಟ್ಟರೆ ನಮ್ಮನ್ನು ವಕ್ರದೃಷ್ಟಿಯಿಂದ ಮತ್ತು ಅನುಮಾನಾಸ್ಪದವಾಗಿ ನೋಡುವುದು ತಪ್ಪುತ್ತದೆ ನಮಗೆ ಅವರ ಒಂದು ಆಶೀರ್ವಾದವೂ ಸಹ ಸಿಗಬಹುದು. ಒಂದು ಎನ್. ಪಿ. ಸಹ ತೆಗೆದು ಕೊಳ್ಳದೆ ದುಡಿಯತಕ್ಕಂಥ ನಮ್ಮನ್ನು ಯಾವಾಗಲೂ ಆ ಕಡೆಯವರು ಅನುಮಾನದ ಕಣ್ಣಿನಿಂದಲೇ ನೋಡುತ್ತಾರೆ. ಆದರೆ ಕಾರು, ಜೀಪು, ಫೋನ್ ಹಾಗೂ ಕೈಗೊಬ್ಬರಂತೆ ಮತ್ತು ಕಾಲಿಗೊಬ್ಬರಂತೆ ಜವಾನರನ್ನು ಇಟ್ಟುಕೊಂಡಿರುವ ಅಧಿಕಾರಿಗಳು ಯಾವ ರೀತಿ ನಡೆದುಕೊಳ್ಳುತ್ತಿದ್ದಾರೆಂಬುದಕ್ಕೆ ಒಂದು ಉದಾಹರಣೆ ಕೊಡುತ್ತೇನೆ. ನಾನು ಜಿಲ್ಲಾ ಬ್ಯಾಂಕ್‌ನ ಅಧ್ಯಕ್ಷನಾಗಿದ್ದಾಗ ಮೇಲ್ಮಟ್ಟದ ಅಧಿಕಾರಿಯೊಬ್ಬರು ತನಿಖೆಗೆಂದು ಕಾರು ತೆಗೆದುಕೊಂಡು ಬಂದರು. ಇವರು ಈಗ ನಿವೃತ್ತರಾಗಿದ್ದಾರೆ. ಇವರು ಪಿ.ಎಲ್.ಡಿ. ಮುಂತಾದ ಅನೇಕ ಬ್ಯಾಂಕ್‌ಗಳನ್ನು ವಿಜಿಟ್ ಮಾಡುವಂತಹ ಕಾರ್ಯಕ್ರಮವನ್ನು ಇಟ್ಟುಕೊಂಡು ನಮ್ಮ ಜಿಲ್ಲೆಗೂ ಸಹ ಬಂದಿದ್ದರು. ಆದರೆ ಇವರು ನಿಜವಾಗಿಯೂ ಬಂದಿದ್ದು ತಮ್ಮ ಮಗನಿಗೆ ಹೆಣ್ಣು ನೋಡುವುದಕ್ಕಾಗಿ. ಇದೇ ಕಾರಣದಿಂದ ಇವರು ವಿಜಿಟ್ ಹೆಸರಿನಲ್ಲಿ ಅನೇಕ ಜಿಲ್ಲೆಗಳಿಗೆ ಹೋಗಿ ಬಂದರು. ಇವರ ಮಗನಿಗೆ ನಮ್ಮ ಜಿಲ್ಲೆಯಲ್ಲಿಯೇ ಹೆಣ್ಣು ಸಿಕ್ಕಿತೆಂದು ಕಾಣುತ್ತದೆ. ತಪ್ಪು ಮಾಡಿದವರನ್ನು ಹಿಡಿದು ಶಿಕ್ಷೆಗೆ ಗುರಿಪಡಿಸಬೇಕಾದಂಥ ಮೇಲ್ಮಟ್ಟದ ಅಧಿಕಾರಿಯೇ ಈ ರೀತಿ ವರ್ತಿಸಿದರೆ ಈ ನಮ್ಮ ಸಹಕಾರಿ ಆಂಧೋಳನ ಯಾವ ರೀತಿ ಜಯಪ್ರದವಾಗುವುದಕ್ಕೆ ಸಾಧ್ಯವೆಂಬುದನ್ನು ನಾವೆಲ್ಲರೂ ಯೋಚನೆ ಮಾಡಬೇಕಾಗಿದೆ. ಮುಖ್ಯವಾಗಿ ನಾವು ಇದರಲ್ಲಿ ರಾಜಕೀಯ ತರುವುದು ಬೇಡ. ಹಳ್ಳಿಯ ಜನರ ಬಗ್ಗೆ ಅರ್ಥ ಮಾಡಿಕೊಂಡು ಅವರ ಏಳಿಗೆ ಬಗ್ಗೆ ದುಡಿಯತಕ್ಕಂಥ ಜನರೇ ಇದ್ದಾರೆ. ಇವರಿಗೆ ಇಲ್ಲಿ ಏನು ನಡೆಯುತ್ತಿದೆ ಎಂಬುದು ಗೊತ್ತಿದೆ. ಆದ್ದರಿಂದ ನಾವು ಇಲ್ಲಿ ರಾಜಕೀಯದ ಚೆಲ್ಲಾಟವಾಡಿದರೆ ಅದರಿಂದ ನಮಗೆ ಒಳ್ಳೆಯದಾಗುವುದಿಲ್ಲ. ಬಡವರ ಶಾಪಕ್ಕೆ ನಾವು ಗುರಿಯಾಗಬೇಕಾಗುತ್ತದೆ. ಸೇವಾ ಸಹಕಾರಿ ಸಂಘಗಳ ಮೂಲಕ ಬಡವರಿಗೆ ಆರ್ಥಿಕ ನೆರವನ್ನು ಒದಗಿಸಬೇಕೇ ಹೊರತು ಅಲ್ಲಿ ನಾವು ರಾಜಕೀಯದ ಚೆಲ್ಲಾಟ ಆಡಿದರೆ ಇಲ್ಲವೇ ಅಧಿಕಾರಿಗಳು ಹಣವನ್ನು ದುರುಪಯೋಗಪಡಿಸಿಕೊಂಡರೆ ಬಡವರ ಶಾಪಕ್ಕೆ ಒಳಗಾಗಬೇಕಾಗುತ್ತದೆ. ಏಕೆಂದರೆ ಬಡವರ ಹೃದಯದಲ್ಲಿ ದೇವರಿದ್ದಾನೆಂದು ನಾನು ತಿಳಿದುಕೊಂಡಿದ್ದೇನೆ. ಒಳ್ಳೆಯ ಮಾತನಾಡಿದರೆ ಒಳ್ಳೆಯದಾಗಲಿ ಎಂದು ಆಶೀರ್ವಾದ ಮಾಡುತ್ತಾರೆ. ಇಂತಹ ಒಂದು ಮುಗ್ಧಜೀವಿಗೆ ಈ ತರಹ ಭ್ರಷ್ಟಾಚಾರ ಮಾಡಲಿಕ್ಕೆ ಹೊರಟಾಗ ಭ್ರಷ್ಟಾಚಾರಿಗಳ ಶಾಪ ತಟ್ಟಿ ಅವರ ಬಾಳೆ ಕಹಿಯಾಗುತ್ತದೆ. ಆದ್ದರಿಂದ ಅವರ ನ್ಯಾಯಾನ್ಯಾಯಗಳನ್ನು ಪರಿಶೀಲನೆಮಾಡಿ ರೈತರ, ಕೂಲಿಕಾರರ, ಕಾರ್ಮಿಕರ ಸರ್ವರ ಹಿತದೃಷ್ಟಿಯಿಂದ ಈ ಒಂದು ಸಂಸ್ಥೆಯನ್ನು ಯಾವರೀತಿ ಅಭಿವೃದ್ಧಿ ಪಡಿಸಿದರೆ ಒಳ್ಳೆಯದಾಗುತ್ತದೆ ಎನ್ನುವುದನ್ನು ಪುನರ್‌ವಿಮರ್ಶೆಮಾಡಿ ನೋಡಿ ಸಾಮಾನ್ಯ ಜನರಿಗೆ ಬಡ ರೈತರಿಗೆ ಯಾವರೀತಿಯ ಅನುಕೂಲವಾಗುತ್ತದೆ ಅದನ್ನು ಯೋಚನೆ ಮಾಡಿ ಈ ದಿಸೆಯಲ್ಲಿ ಮುಂದುವರಿಯಬೇಕೇ ವಿನಹ ಅವರೊಡನೆ ಚೆಲ್ಲಾಟ ಆಡುವುದು ಬೇಡ ಎನ್ನುವ ಮಾತನ್ನು ತಮ್ಮ ಮುಖಾಂತರ ಸದನದ ಸದಸ್ಯರ ಗಮನಕ್ಕೆ ತರಲಿಚ್ಛಿಸುತ್ತೇನೆ.

ಭೂ ಅಭಿವೃದ್ಧಿ ಬ್ಯಾಂಕುಗಳಲ್ಲಿ ಸಾಲಗಳನ್ನು ಕೊಡುವಾಗ ನನ್ನದೇ ಆದ ಅನುಭವ ಹೇಳುತ್ತೇನೆ, ನಾನು ಭೂ ಅಭಿವೃದ್ಧಿ ಬ್ಯಾಂಕ್ ಅಧ್ಯಕ್ಷನಾಗಿ ಇನ್ನೂ ಇದ್ದೇನೆ, ಬೋರ್‌ವೆಲ್ ತೆಗೆಯಬೇಕಾದರೆ ಯಾವ ಯಾವ ರೀತಿಯ ಅನುಭವಗಳಾಗುತ್ತವೆ ಎನ್ನುವದನ್ನು ಸೂಕ್ಷ್ಮವಾಗಿ ಹೇಳುತ್ತೇನೆ. ಬೋರ್‌ವೆಲ್ ತೆಗೆಯಬೇಕಾದರೆ ಅದಕ್ಕೆ ಜಿಯಾಲಜಿಸ್ಟ್ ಸರ್ಟಿಫಿಕೇಟ್ ಮಾಡಬೇಕು. ಅದರ ಪ್ರಕಾರ ಬಾವಿ ತೋಡಿಸಿಕೊಂಡು ರೈತರು ಭೂಮಿಯಲ್ಲಿ ಬೆಳೆಯನ್ನು ತೆಗೆಯಬೇಕು. ಬೋರ್‌ವೆಲ್ ತೆಗೆಯಬೇಕಾದರೆ ಸಂಬಂಧಪಟ್ಟ ಜಿಯಾಲಜಿಸ್ಟ್ ೨ ತಿಂಗಳಾದರೂ ಬರಲಿಲ್ಲ. ಆ ಜಿಯಾಲಜಿಸ್ಟ್‌ಗಳು ಯಾವರೀತಿ ಇರುತ್ತಾರೆಂದರೆ ೫೦೧ ರೂಪಾಯಿಗಳನ್ನು ಕೊಟ್ಟರೆ ನೀರು ಬರುತ್ತದೆಂದು ಹೇಳುತ್ತಾರೆ, ಹಣ ಕೊಡದಿದ್ದರೆ ನೀರು ಬರುವುದಿಲ್ಲವೆಂದು ಹೇಳಿಬಿಡುತ್ತಾರೆ. ನೀರು ಬರುವುದು ಇದ್ದರೂ, ಸಹ ನೀರು ಬರುವುದಿಲ್ಲವೆಂದು ಹೇಳಿದರೆ ಯಾರೂ ಏನೂ ಮಾಡುವುದಕ್ಕೆ ಆಗುವುದಿಲ್ಲ. ಸುದೈವ ನಾನು ಭೂ ಅಭಿವೃದ್ಧಿ ಬ್ಯಾಂಕ್ ಅಧ್ಯಕ್ಷನಾಗಿದ್ದು ಕೊಂಡು ಶಾಸಕನಾದ ಮೇಲೆ ಸ್ವಲ್ಪ ಶಕ್ತಿಬಂದು ದೂರವಾಣಿಯ ಮೂಲಕ ಹೇಳಿದೆ ಮೊದಲು ಹೇಳುತ್ತಿದ್ದೆ ನಾನು ಫೋನ್‌ಮಾಡಿ ಹೇಳಿದಮೇಲೆ ೨ ತಿಂಗಳಿಂದ ಬರದಿದ್ದ ಜಿಯಾಲಜಿಸ್ಟ್ ಬಂದು ಸ್ಥಳಕ್ಕೆ ಭೇಟಿಮಾಡಿ ನೀರು ಬರುತ್ತದೆಯೋ ಇಲ್ಲವೂ ಎಂದು ಸರ್ಟಿಫಿಕೇಟ್ ಕೊಡುವಾಗ, ಆತ ಸಿಟ್ಟು ಬಂದು ನೋಡಿಸ್ವಾಮಿ ಶಾಸಕರ ಮೂಲಕ ಫೋನ್ ಮಾಡಿಸಿದರೆ ನಡೆಯುತ್ತದೆಯೇ ನೀರು ಬರುತ್ತದೆಂದು ಸರ್ಟಿಫಿಕೇಟ್ ಕೊಡುವುದಕ್ಕಾಗುವುದಿಲ್ಲ, ಏನು ಮಾಡಬೇಕೋ ಅದನ್ನು ಮಾಡಿ. ಏನೂ ಮಾಡಿದರೂ ನೀರು ಬರುವುದಿಲ್ಲ ಏನುಮಾಡಬೇಕು ? ನೀರು ಬರುವುದಿಲ್ಲ ಎಂದು ಸರ್ಟಿಫಿಕೇಟ್ ಕೊಟ್ಟ ಎಂದರೆ, ೧ ರೂಪಾಯಿ ಸಹ ಸಾಲ ಕೊಡುವುದಕ್ಕೆ ಬರುವುದಿಲ್ಲ.

೫೦೦ ರೂಪಾಯಿಗಳನ್ನು ಕೊಟ್ಟರೆ ಸರ್ಟಿಫಿಕೇಟ್ ಕೊಡುತ್ತಾನೆ, ೫೦೦ ರೂಪಾಯಿಗಳನ್ನು ಕೊಡಲಿಲ್ಲ ಎಂದರೆ ಜಿಯಾಲಜಿಸ್ಟ್ ಸರ್ಟಿಫಿಕೇಟ್ ಕೊಡಲಿಲ್ಲ. ರಾಜ್ಯ ಭೂ ಅಭಿವೃದ್ಧಿ ಬ್ಯಾಂಕ್‌ಗೆ ಸಂಬಂಧಪಟ್ಟ ಹಾಗೆ ಹಾಸನದಲ್ಲಿ ಒಂದು ಯಂತ್ರವಿದೆ, ಅದನ್ನು ತರಿಸಿ ಅದರ ಮುಖಾಂತರ ನೋಡಿದರೆ ಅವರು ಸಹ ಮೊದಲಿನವನು ಈ ರೀತಿ ಹೇಳಿದ್ದಾನೆ ಆದ್ದರಿಂದ ಇಲ್ಲಿ ನೀರು ಬರುವುದಿಲ್ಲವೆಂದು ಹೇಳಿದ. ಈ ರೀತಿಯಾದರೆ ರೈತರು ಯಾವರೀತಿ ವ್ಯವಸಾಯವನ್ನು ಮಾಡಬೇಕು ? ಹಿಂದೆ ಒಂದು ವ್ಯವಸ್ಥೆ ಇತ್ತು, ಅದೇನೆಂದರೆ ಜಿಯಾಲಜಿಸ್ಟ್‌ನಿಂದ ಸರ್ಟಿಫಿಕೇಟ್ ತೆಗೆದುಕೊಳ್ಳದೆ ಬಾವಿ ತೋಡಿಸಿ ನೀರು ಬಾರದಿದ್ದರೆ ೭೫ ಪರ್ಸೆಂಟ್ ಪೂರಾ ಹಣವನ್ನು ರೈತರು ಕೊಡಬೇಕು, ಇಂತಹ ಒಂದು ವ್ಯವಸ್ಥೆ ಇತ್ತು. ಸ್ವಂತ ರಿಸ್ಕ್‌ನಲ್ಲಿ ತೋಡಿಸಿದ ಬಾವಿಗಳು ಫೇಲಾದಾಗ ಅದಕ್ಕೆ ಒಂದು ನಿಬಂಧನೆ ಇತ್ತು. ಅಂತ ಒಂದು ನಿಬಂಧನೆಯನ್ನು ಹಾಕಿ ಒಂದು ಅವಕಾಶ ಮಾಡಿಕೊಟ್ಟರೆ ನಡೆಯತಕ್ಕ ಶೋಷಣೆಯನ್ನು ತಪ್ಪಿಸಬಹುದು. ರೈತ ಬಾವಿ ತೋಡಿಸಬೇಕು, ಬೆಳೆ ತೆಗೆಯಬೇಕು, ೮–೧೦ ಎಕರೆ ಭೂಮಿ ಇರುತ್ತದೆ, ಆತ ಅಲ್ಲಿ ಬೆಳೆ ಬೆಳೆಯದಿದ್ದರೆ ಅವನು ಏನು ಮಾಡುವುದಕ್ಕಾಗುತ್ತದೆ ? ಮುಖ್ಯ ಮಂತ್ರಿಗಳೇ ಹೇಳಿದರು ಜಿಯಾಲಜಿಸ್ಟ್‌ಗಳು ಬರುವುದಿಲ್ಲ. ಅವರು ಬಂದರೂ ಏನು ಮಾಡುತ್ತಾರೆಂದರೆ ಅಲ್ಲಿ ಇಲ್ಲಿ ಮಣ್ಣು ತೆಗೆದುಕೊಂಡು ನಮಗೆ ಏನೋ ಒಂದು ಹೇಳುತ್ತಾರೆ. ಅದನ್ನು ನೋಡಿ ಬಿಟ್ಟರೆ ನಗುಬರುತ್ತದೆ. ಡಾಕ್ಟರುಗಳು ಹೆಚ್ಚು ಕಮ್ಮಿ ಮಾಡಿದರೆ ಅವರಿಗೆ ಶಿಕ್ಷೆಯಾಗುತ್ತದೆ, ಅದೇ ರೀತಿ ಜಿಯಾಲಜಿಸ್ಟ್‌ಗೂ ತಪ್ಪು ಮಾಡಿದರೆ ಶಿಕ್ಷೆ ಇರಬೇಕಾದ್ದು ಧರ್ಮ.

ಉಪಾಧ್ಯಕ್ಷರು.—ಮಾನ್ಯ ಸದಸ್ಯರು ತಮ್ಮ ಭಾಷಣ ಬೇಗ ಮುಗಿಸಬೇಕು.

ಶ್ರೀ ಎಚ್. ಎ. ನಾರಾಯಣಗೌಡ.—ಮಾನ್ಯ ಉಪಾಧ್ಯಕ್ಷರೆ ನನಗೆ ಇನ್ನೂ ಅರ್ಧಗಂಟೆ ಸಮಯಬೇಕು. ಇನ್ನು ಆಡಿಟ್ ಬಗ್ಗೆ ಹೇಳುವುದಾದರೆ, ನಾನು ಜಿಲ್ಲಾ ಸಹಕಾರಸಂಘದ ಅಧ್ಯಕ್ಷನಾಗಿದ್ದೇನೆ. ನಾನು ಮೊದಲಿನಿಂದಲೂ ಹೇಳುತ್ತಿದ್ದೇನೆ ಇದು ಇಂಡಿಪೆಂಡೆಂಟ್ ಆಗಬೇಕು. ತಪಾಸಣೆಗೆ ಬಂದ ಅಧಿಕಾರಿಗಳು ಯಾವರೀತಿ ಕೆಲಸ ಮಾಡುವುದಕ್ಕೆ ಆಗುತ್ತದೆ ? ಡೆಪ್ಯುಟಿ ರಿಜಿಸ್ಟ್ರಾರ್ ಮ್ಯಾನೇಜಿಂಗ್ ಕಮಿಟಿಯಲ್ಲಿರುತ್ತಾರೆ, ಅವರ ಕೈಕೆಳಗಿನ ಅಧಿಕಾರಿ ಅಸಿಸ್ಟೆಂಟ್ ರಿಜಿಸ್ಟ್ರಾರ್ ಸೆಕ್ಷನ್ ೪೪೧ರ ಪ್ರಕಾರ ಆಡಿಟ್ ಮಾಡಬೇಕು, ಅವರು ಯಾವ ರೀತಿ ಆಡಿಟ್ ಮಾಡುವುದಕ್ಕಾಗುತ್ತದೆ ? ಇಂಡಿಪೆಂಡೆಂಟ್ ಮಾಡಲಿಕ್ಕೆ ಸರ್ಕಾರ ಯೋಚನೆ ಮಾಡಿ ಅದಕ್ಕೊಂದು ವ್ಯವಸ್ಥೆ ಮಾಡಬೇಕು. ಆಡಿಟ್ ಮಾಡಲಿಕ್ಕೆ ಹೋಗತಕ್ಕ ಆಡಿಟರ್ ಕಾರ್ಯದರ್ಶಿಯ ಹತ್ತಿರ ಹೋಗಬೇಕು. ಅಲ್ಲಿ ಅಧ್ಯಕ್ಷರು ನಾಮಕಾವಸ್ಥೆಗೆ ಇರುತ್ತಾರೆ ಅಲ್ಲಿ ಗಟ್ಟಿಕುಳ ಎಂದರೆ ಸೆಕ್ರೆಟರಿ, ಅಲ್ಲಿ ಅವನು ಪ್ರಭಲ ಮತ್ತು ಸಬಲ ಎಲ್ಲಾ ಆಗಿರುತ್ತಾನೆ. ಅಲ್ಲಿ ಎಷ್ಟು ಹಣ ಹೊಡೆದಿರುತ್ತಾರೆ ಅಷ್ಟುಗಾತ್ರಕ್ಕೆ ಹಣ ಕೊಟ್ಟು, ಆಡಿಟರ್‌ಗಳ ಕೆಲವು ಇಷ್ಟಾರ್ಥಗಳನ್ನು ಈಡೇರಿಸಿದ ಮೇಲೆ, ಇನ್ನೇನು ತೊಂದರೆಯಿಲ್ಲವೆಂದು ಸರ್ಟಿಫಿಕೇಟ್ ಕೊಟ್ಟು ಹೋಗುತ್ತಾನೆ. ಆ ಮೇಲೆ ಯಾರೂ ಮುಟ್ಟುವುದಿಲ್ಲ. ಎಲ್ಲಾ ಸೆಕ್ರೆಟರಿಗಳದ್ದೆ ಆಗಿರುವುದರಿಂದ ಹೆಚ್ಚಿನ ಸಹಕಾರ ಸಂಘಗಳು ನೂರಕ್ಕೆ ೭೫ ಸೊಸೈಟಿಗಳು ಮುಳುಗಿ ಹೋಗಿವೆ. ಆಡಿಟರ್ ಸರ್ಟಿಫಿಕೇಟ್ ಕೊಡುವ ವ್ಯವಸ್ಥೆ ಏನಿದೆ ಅದರಿಂದ ಬಹಳ ಸೊಸೈಟಿ ಹಾಳಾಗಿ ಹೋಗುತ್ತಿವೆ ಆದ್ದರಿಂದ ಉಳಿದಂತಹ ೨೫ ಸೊಸೈಟಿಗಳಾದರೂ ಉಳಿದುಕೊಳ್ಳಲಿಕ್ಕೆ ಆಡಿಟ್ ಮಾಡಿದಮೇಲೆ ಚೆಕ್ ಆಡಿಟ್ ಮಾಡುವ ಒಂದು ವ್ಯವಸ್ಥೆ ಮಾಡಿ. ಕೊನೆಯಪಕ್ಷ ನೂರಕ್ಕೆ ೧೦ ಭಾಗ ಟೆಸ್ಟ್ ಆಡಿಟ್ ಮಾಡತಕ್ಕಂತಹ ಒಂದು ವ್ಯವಸ್ಥೆಯನ್ನು ತಾವು ಮಾಡಬೇಕೆಂದು ಹೇಳುತ್ತೇನೆ. ಈ ತರಹ ಮಾಡಿದರೆ ಎಲ್ಲರಿಗೂ ಸ್ವಲ್ಪ ಭಯವಿರುತ್ತದೆ. ಇದರಿಂದ ಆಗತಕ್ಕಂತಹ ಲಾಭ ಎಂದರೆ ಆಗತಕ್ಕಂತಹ ಅನ್ಯಾಯಗಳನ್ನು ಮತ್ತು ಅಕ್ರಮಗಳನ್ನು ತಪ್ಪಿಸಬಹುದೆಂದು ತಮ್ಮ ಮೂಲಕ ಮಾನ್ಯ ಸಹಕಾರ ಸಚಿವರ ಗಮನಕ್ಕೆ ತರಲಿಚ್ಛಿಸುತ್ತೇನೆ.

ಇನ್ನು ತೂಕ ಮತ್ತು ಅಳತೆ ಇವರ ಬಗ್ಗೆ ಮಾನ್ಯ ರಂಗನಾಥ್‌ರವರು ಹೇಳಿದಂತಹ ಮಾತು ನೂರಕ್ಕೆ ನೂರರಷ್ಟು ಸತ್ಯ. ಈ ಇಲಾಖೆ ನನ್ನ ಜಿಲ್ಲೆಯಲ್ಲೂ ಸಹ ಇದೆ. ಅಲ್ಲಿರತಕ್ಕ ಅಧಿಕಾರಿ ತಿಂಗಳಿಗೊಂದು ಸಾರಿ ಅಟೆಂಡೆನ್ಸ್ ಸಹಿ ಹಾಕಿ ಸಂಬಳ ತೆಗೆದುಕೊಳ್ಳುತ್ತಾರೆ. ಈ ವಿಚಾರ ಪತ್ರಿಕೆಗಳಲ್ಲೂ ಸಹ ಬಂತು, ಅದು ನನ್ನ ಗಮನಕ್ಕೂ ಬಂತು, ಆ ಆಫೀಸ್ ಎಲ್ಲಿದೆ ಎಂದು ಹುಡುಕಿಕೊಂಡು ನಾನು ಅಲ್ಲಿಗೆ ಹೋದಾಗ ಅಲ್ಲಿ ಯಾರೂ ಇಲ್ಲ. ಅಲ್ಲೊಬ್ಬ ಜವಾನ ಇದ್ದ. ಅಟೆಂಡೆನ್ಸ್‌ಗೆ ನಾಲ್ಕೈದು ದಿವಸಗಳಿಂದ ಸಹಿ ಹಾಕಿರಲಿಲ್ಲ, ಜವಾನನನ್ನು ನಿಮ್ಮ ಆಫೀಸರ್ ಎಲ್ಲಿಗೆ ಹೋದರೆಂದು ಕೇಳಿದ್ದಕ್ಕೆ ಆತ ನನಗೆ ಗೊತ್ತಿಲ್ಲ, ಎಲ್ಲೋ ಟೂರ್ ಹೋಗಿರಬೇಕೆಂದು ಹೇಳಿದ. ಆ ಅಧಿಕಾರಿಗಳು ಎಲ್ಲಿಗೂ ಪ್ರೊಗ್ರಾಮ್ ಹಾಕಿರಲಿಲ್ಲ, ಅವರದು ಮೈಸೂರು ಜಿಲ್ಲೆಯಲ್ಲಿ ವಾಸ ಯಾವಾಗಲೋ ಒಂದು ಸಾರಿ ಬಂದು ಅಟೆಂಡೆನ್ಸ್‌ಗೆ ಸಹಿ ಹಾಕಿ ಸಂಬಳ ತೆಗೆದುಕೊಳ್ಳುವುದು. ಅಳತೆ ಮತ್ತು ತೂಕ

ದಲ್ಲಿ ಬಹಳ ಮೋಸ ನಡೆಯುತ್ತಿದೆ ಅದನ್ನು ಸರಿಯಾದ ರೀತಿಯಲ್ಲಿ ನೋಡಿಕೊಳ್ಳಬೇಕು. ನಮ್ಮಲ್ಲಿ ಪೆಟ್ರೋಲ್ ಬಂಕ್ ಮತ್ತು ಅಂಗಡಿಗಳಲ್ಲಿ ಮೋಸ ನಡೆಯುತ್ತಿದೆ. ಆದರ ಇನ್ಸ್‌ಪೆಕ್ಷನ್ ನಡೆಯಬೇಕು. ಸಾರ್ವಜನಿಕರಿಗೆ ಅನ್ಯಾಯವಾಗದಂತೆ ವಿಚಾರಣೆಮಾಡಿ ಅದಕ್ಕೆ ಏನು ಮಾಡಬೇಕೋ ಅದನ್ನು ಮಾಡಿ ಅದಕ್ಕೊಂದು ಕಾಯಕಲ್ಪ ಕೊಟ್ಟು ಚುರುಕುಗೊಳಿಸಬೇಕು ಎನ್ನುವ ಮಾತನ್ನು ಹೇಳುತ್ತೇನೆ. ಇನ್ನೂ ನಾಮಿನೇಷನ್ ವಿಚಾರದಲ್ಲಿ ಹೇಳುವುದಾದರೆ, ೨೫–೩೦ ವರ್ಷ ಅಥವಾ ಸಾಯುವವರೆಗೂ ಮಂತ್ರಿಗಳಾಗಿರಬಹುದು. ಪ್ರಜಾಪ್ರಭುತ್ವದ ನೀತಿಗನುಗುಣವಾಗಿ ಚುನಾವಣೆಯಲ್ಲಿ ಆರಿಸಿ ಬರತಕ್ಕ ಸದಸ್ಯರು ಏತಕ್ಕೆ ಮುಂದುವರಿಯಬಾರದು ? ವಂಶಪಾರಂಪರ್ಯವಾಗಿ ಒಂದೇ ಕುಟುಂಬದವರು ಇರಬೇಕೆನ್ನುವ ಜನ ಅದನ್ನು ಒಪ್ಪಿಕೊಳ್ಳುವಂತಹ ಜನ. ೩೨ ವರ್ಷ ರಾಜ್ಯಭಾರವನ್ನು ಒಂದೇ ಕುಟುಂಬದವರು ರಾಷ್ಟ್ರದಲ್ಲಿ ಮಾಡಬೇಕೆನ್ನುವ ಜನ, ಅವರ ಹಿಡಿತದಲ್ಲಿರಬೇಕೆನ್ನುವ ನೀವು, ಅವರೇ ಬೇಕೆಂದು ಹೇಳತಕ್ಕ ಜನ. ಸಹಕಾರಿ ರಂಗದಲ್ಲಿ ೬ ವರ್ಷದ ಮೇಲೆ ಇರಕೂಡದು ಎಂದು ಯಾವರೀತಿ ಹೇಳುತ್ತೀರಿ ? ಮಾನ್ಯ ಚೌಡಯ್ಯನವರು ಸಹಕಾರಿ ರಂಗದಲ್ಲಿ ಪ್ರಾಮಾಣಿಕವಾಗಿ ದಕ್ಷರಾಗಿ ಅದು ಏನೇ ಇರಲಿ, ಅವರು ಮಂಡ್ಯ ಜಿಲ್ಲೆಯ ಸಹಕಾರಿಬ್ಯಾಂಕ್ ಅಧ್ಯಕ್ಷರಾಗಿದ್ದಾರೆ. ಆರು ವರ್ಷದ ಮೇಲೆ ಅಂತಹವರು ಇರಬಾರದು ಎಂದು ಹೇಳಿದರೆ ಹೇಗೆ ? ಅವರ ಸೇವೆಯಬಗ್ಗೆ ಹೇಳುವುದಾದರೆ ಅವರು ವಸೂಲಿ ವಿಷಯದಲ್ಲಿ ಖಡಾಖಂಡಿತವಾಗಿ ಕೊಡಲೇಬೇಕು ಎಂದು ಸಾರ್ವಜನಿಕ ಸಭೆಯಲ್ಲಿ ಹೇಳಿದ್ದಾರೆ. ಸಾಲವನ್ನು ವಸೂಲಿಮಾಡುವ ಸಂದರ್ಭದಲ್ಲಿ ತಾಳಿಯನ್ನಾದರೂ ಮಾರಿ ಸಾಲವನ್ನು ಕೊಡಬೇಕೆಂದು ಹೇಳಿದ್ದಾರೆ. ಆಮೇಲೆ ಅವರು ಅಲ್ಲಿಂದ ಹಿಂಬಾಗಿಲಿನಿಂದ ಬರಬೇಕಾಯಿತು ಅದು ಬೇರೆ. ಅಷ್ಟು ಕಟ್ಟುನಿಟ್ಟಾಗಿ ಸಹಕಾರ ರಂಗದಲ್ಲಿ ಕೆಲಸ ಮಾಡಿದಂತಹವರನ್ನು ಮೂಲೆಗುಂಪಾಗಿ ಸೇರಿಸಿಬಿಟ್ಟಿದ್ದಾರೆ ರಾಜ್ಯಮಟ್ಟದಲ್ಲಿದ್ದಂತಹ ವಿಶ್ವನಾಥ್‌ರವರು ರಾಷ್ಟ್ರದಲ್ಲಿಯೇ ಖ್ಯಾತಿಯನ್ನು ಗಳಿಸುವಂತಹ ಉತ್ತಮ ಕೆಲಸಗಳನ್ನು ಒಳ್ಳೆಯ ಕಾರ್ಯಗಳನ್ನು ಮಾಡಿಕೊಟ್ಟಿದ್ದಾರೆ, ಅವರು ನಮ್ಮರಾಜ್ಯದ ಭೂ ಅಭಿವೃದ್ಧಿ ಬ್ಯಾಂಕಿನ ಅಧ್ಯಕ್ಷರಾಗಿದ್ದರು.

೨–೦೦ ಪಿ. ಎಂ.

ಮಾನ್ಯ ಅಧ್ಯಕ್ಷರೇ ಈ ಸಹಕಾರ ಸಂಘಗಳಲ್ಲಿ ಯಾರು ಅಧ್ಯಕ್ಷರಾಗಿರುತ್ತಾರೋ ಅವರು ಒಳ್ಳೆಯ ಕೆಲಸ ಕಾರ್ಯಗಳನ್ನು ಮಾಡುವುದಕ್ಕೆ ಆಗುವುದಿಲ್ಲ. ನಮ್ಮಲ್ಲಿ ಬೇಕಾದಷ್ಟು ಸೌಲಭ್ಯಗಳು ಇವೆ. ಮತ್ತು ಒಳ್ಳೆಯ ಸ್ಕೀಂಗಳನ್ನು ಸಹ ಮಾಡಿದ್ದಾರೆ. ಆದರೆ ಚುನಾವಣೆಯ ಪದ್ಧತಿಯನ್ನು ಮಾತ್ರ ಬದಲಾವಣೆ ಮಾಡಿಲ್ಲ. ಈಗಿನ ಪದ್ಧತಿಯಂತೆ ಬಡವರು ಚುನಾವಣೆಯಲ್ಲಿ ಸ್ಪರ್ಧಿಸುವುದಕ್ಕೆ ಆಗುವುದಿಲ್ಲ. ಆದ್ದರಿಂದ ಈ ಪದ್ಧತಿಯನ್ನು ಬದಲಾವಣೆ ಮಾಡಬೇಕು.

ಇನ್ನು ನಾಮಿನೇಷನ್ ಮಾಡುವ ಬಗ್ಗೆ ನಾನು ಒಂದೆರಡು ವಿಷಯಗಳನ್ನು ಈ ಸಂದರ್ಭದಲ್ಲಿ ಪ್ರಸ್ತಾಪ ಮಾಡಬೇಕಾಗುತ್ತದೆ. ಅಲ್ಲಿ ಮೊದಲಿನಿಂದಲೂ ಯಾರು ಅಧ್ಯಕ್ಷರಾಗಿರುತ್ತಾರೋ ಅವರೇ ಮುಂದಿನ ಸಾರಿ ಕೂಡ ಅಧ್ಯಕ್ಷರಾಗುತ್ತಾರೆ ಎನ್ನುವ ಅಭಿಪ್ರಾಯ ಸಾರ್ವಜನಿಕರಲ್ಲಿ ಮೂಡಿ ಬಂದಿದೆ. ಆದ್ದರಿಂದ ನಾನು ಹೇಳುವುದೇನೆಂದರೆ ಯಾರು ನಾಮಿನೇಟೆಡ್ ಮೆಂಬರ್ಸ್ ಇರುತ್ತಾರೋ ಅವರಿಗೆ ತಾವು ಓಟು ಮಾಡುವಂಥ ಹಕ್ಕು ಕೊಡಬೇಕು. ಆ ಒಂದು ಪದ್ಧತಿಯನ್ನು ತಾವು ಜಾರಿಗೆ ತರಬೇಕೆಂದು ನಾನು ಈ ಸಂದರ್ಭದಲ್ಲಿ ಹೇಳಬಯಸುತ್ತೇನೆ. ಮತ್ತೊಂದು ವಿಷಯವನ್ನು ನಾನು ಈ ಸಂದರ್ಭದಲ್ಲಿ ಪ್ರಸ್ತಾಪಿಸುವುದಾದರೆ ಯಾರು ಸೊಸೈಟಿಯಲ್ಲಿ ಸಾಲವನ್ನು ತೆಗೆದುಕೊಂಡು ಪೂರ್ತಿಯಾಗಿ ಸಾಲವನ್ನು ಪಾಪತಿ ಮಾಡಿರುವುದಿಲ್ಲವೋ ಅವರಿಗೆ ಓಟು ಮಾಡುವ ಅಧಿಕಾರ ಇಲ್ಲ. ಆದರೆ ನಾನು ಮಾನ್ಯ ಮಂತ್ರಿಗಳಿಗೆ ಒಂದು ಸಲಹೆಯನ್ನು ಕೊಡುವುದೇನೆಂದರೆ ಯಾರು ಅರ್ಧ ಭಾಗದ ಸಾಲವನ್ನು ತೀರಿಸಿರುತ್ತಾರೋ ಅಂಥವರಿಗೆ ಕೂಡ ತಾವು ಓಟು ಮಾಡುವ ಅಧಿಕಾರವನ್ನು ಕೊಟ್ಟರೆ ಒಳ್ಳೆಯದೆಂದು ನನ್ನ ಭಾವನೆ. ತಾವು ಆ ರೀತಿ ಮಾಡುವುದರಿಂದ ಏನಾಗುತ್ತದೆ ಎಂದರೆ ಯಾವ ಸೊಸೈಟಿಯಲ್ಲಿ ಸಾಲ ವಸೂಲು ಆಗದೆ ಇರುತ್ತದೆಯೋ ಅಂಥ ಸೊಸೈಟಿಗಳವರು ಅರ್ಧ ಭಾಗದ ಸಾಲವನ್ನು ಆದರೂ ಕೂಡ ವಸೂಲು ಮಾಡಿ ಸರ್ಕಾರದ ಬೊಕ್ಕಸವನ್ನು ತುಂಬಿಸುವಂಥ ಕೆಲಸ ಮಾಡಬಹುದೆಂದು ನನ್ನ ಆಸೆ. ಮತ್ತು ಇದರಿಂದ ರೈತರಿಗೂ ಕೂಡ ತಾವು ಸಹಾಯ ಮಾಡಿದಂತೆ ಆಗುತ್ತದೆ ಎನ್ನುವ ಮಾತನ್ನು ನಾನು ಈ ಸಂದರ್ಭದಲ್ಲಿ ಹೇಳಬಯಸುತ್ತೇನೆ.

ಇನ್ನು ನಮ್ಮ ರಾಜ್ಯದಲ್ಲಿ ಸಣ್ಣ ರೈತರು ಮತ್ತು ಅತಿ ಸಣ್ಣ ರೈತರು ಮತ್ತು ದೊಡ್ಡ ರೈತರೆಂದು ಮೂರು ವಿಭಾಗಗಳನ್ನು ಮಾಡಿದ್ದೀರಿ? ಆದರೆ ತಾವು ೧೦ ಎಕರೆಯಿಂದ ಕೆಳಗೆ ಬರತಕ್ಕಂಥ ಎಲ್ಲಾ ರೈತರನ್ನು ಮಧ್ಯಮ ಪ್ರಮಾಣದ ರೈತರೆಂದು ಪರಿಗಣಿಸಿದ್ದೀರಿ. ಆದರೆ ಮಾನ್ಯ ಮಂತ್ರಿಗಳಿಗೆ ನಾನು ಒಂದು ಮಾತನ್ನು ಈ ಸಂದರ್ಭದಲ್ಲಿ ಹೇಳಬಯಸುತ್ತೇನೆ. ಇವತ್ತು ಮಾನ್ಯ ಮಂತ್ರಿಗಳಿಗೆ

ಗೊತ್ತಿದ್ದ ಹಾಗೆ ೧೦ ಎಕರೆ ಜಮೀನು ಇಟ್ಟು ಕೊಂಡಿರುವಂಥ ರೈತನು ಕೂಲಿ ಕೆಲಸ ಮಾಡಿ ಜೀವನ ಸಾಗಿಸುತ್ತಿದ್ದಾನೆ ಆಮೇಲೆ ಸಣ್ಣ ರೈತರಿಗೆ ತಾವು ಶೇಕಡ ೨ ಪರ್ಸೆಂಟ್ ಬಡ್ಡಿಯ ದರದಲ್ಲಿ ಸಾಲವನ್ನು ಒದಗಿಸಿಕೊಡುತ್ತಿದ್ದೀರಿ. ಆದರೆ ಈ ಸಾಲದ ಬಡ್ಡಿಯನ್ನು ಅಲ್ಪಾವಧಿ ಸಾಲಕ್ಕೆ ಕೊಟ್ಟಿಲ್ಲ ಆದರೆ ದೀರ್ಘಾವಧಿ ಸಾಲಕ್ಕೆ ಮಾತ್ರ ಕೊಟ್ಟಿದ್ದೀರಿ? ಆದ್ದರಿಂದ ನಾನು ಹೇಳುವುದೇನೆಂದರೆ ಎಲ್ಲಾ ರೈತರು ಕೂಡ ಸಣ್ಣ ರೈತರೇ ಅವರಿಗೆ ತಾವು ಎಲ್ಲಾ ರೀತಿಯ ಸವಲತ್ತುಗಳನ್ನು ಕೂಡ ಕೊಡಬೇಕೆಂದು ನಾನು ಈ ಸಂದರ್ಭದಲ್ಲಿ ಹೇಳಬಯಸುತ್ತೇನೆ. ಮತ್ತೆ ಸೊಸೈಟಿಗಳ ಮ್ಯಾನೇಜಿಂಗ್ ಡೈರೆಕ್ಟರ್ಸ್‌ಗೆ ಓಟಿನ ಹಕ್ಕು ಕೊಡತಕ್ಕಂಥ ಪದ್ಧತಿ ಸರಿಯಾದುದು ಅಲ್ಲವೆಂದು ನಾನು ಈ ಸಂದರ್ಭದಲ್ಲಿ ಹೇಳಬಯಸುತ್ತೇನೆ. ತಾವು ಓಟಿನ ಅಧಿಕಾರವನ್ನು ಮ್ಯಾನೇಜಿಂಗ್ ಡೈರೆಕ್ಟರ್ಸ್‌ಗೆ ಕೊಟ್ಟರೆ ಅವರು ಅಧ್ಯಕ್ಷರ ಜೊತೆಯಲ್ಲಿ ಹೊಂದಿಕೊಂಡು ಕೆಲಸ ಮಾಡುವುದಿಲ್ಲ. ಕಾರಣ ಆತನಿಗೆ ಓಟಿನ ಹಕ್ಕು ಇರುವುದರಿಂದ. ಆತನು ಅಧ್ಯಕ್ಷರ ಆದೇಶವನ್ನು ಸರಿಯಾಗಿ ಪಾಲನೆ ಮಾಡುವುದಿಲ್ಲ. ಆದ್ದರಿಂದ ಅವರಿಗೆ ಓಟಿನ ಹಕ್ಕು ಕೊಡುವುದು ಸರಿಯಲ್ಲವೆಂದು ನಾನು ಮಾನ್ಯ ಮಂತ್ರಿಗಳಲ್ಲಿ ವಿನಂತಿ ಮಾಡಿಕೊಳ್ಳುತ್ತೇನೆ. ಮತ್ತೆ ಆ ಮ್ಯಾನೇಜಿಂಗ್ ಡೈರೆಕ್ಟರ್ಸ್‌ಗೆ ಬೇಕಾದರೆ ಮೀಟಿಂಗ್‌ನಲ್ಲಿ ನಡೆಯುವ ವಿಷಯಗಳ ಮಟ್ಟಕ್ಕೆ ಅವರಿಗೆ ಓಟಿನ ಹಕ್ಕು ಕೊಡಬೇಡವೆಂದು ಹೇಳುವುದಿಲ್ಲ. ಆದರೆ ಪದಾಧಿಕಾರಿಗಳ ಚುನಾವಣೆ ಮಾತ್ರ ಓಟಿನ ಹಕ್ಕು ಕೊಡುವುದು ಬೇಡವೆಂದು ನಾನು ಈ ಸಂದರ್ಭದಲ್ಲಿ ಮತ್ತೊಮ್ಮೆ ಹೇಳುತ್ತೇನೆ. ಇನ್ನು ಮತ್ತೊಂದು ವಿಷಯವನ್ನು ನಾನು ಈ ಸಂದರ್ಭದಲ್ಲಿ ಹೇಳುವುದಾದರೆ ಅಧಿಕಾರಿಗಳ ಅಲಕ್ಷ ೫ ಲಕ್ಷ ರೂಪಾಯಿಗಳ ಬಕ್ಷಿ ಎಂದು. ಪತ್ರಿಕೆಯಲ್ಲಿ ಬಂದಿದೆ. ಇವತ್ತು ಪ್ರತಿಯೊಂದು ಸೊಸೈಟಿಗಳಲ್ಲಿ ಕೂಡ ಭ್ರಷ್ಟಾಚಾರವೆಂದು ನಡೆದಿದೆ. ಆದರೆ ಯಾರ ಮೇಲೆಯೂ ಹಿಂದಿನ ಸರ್ಕಾರದವರು ಕ್ರಮ ತೆಗೆದು ಕೊಂಡಿದ್ದಾರೋ ನನಗಂತೂ ಗೊತ್ತಿಲ್ಲ. ಆದ್ದರಿಂದ ನಾನು ಹೇಳುವುದೇನೆಂದರೆ ಯಾರು ಪ್ರಾಮಾಣಿಕರು ಇರುತ್ತಾರೋ ಅಂಥವರನ್ನು ತಾವು ನೇಮಿಸಿ, ಅವರು ಅನ್ಯಾಯ ಮಾಡುವುದಿಲ್ಲ. ಆದರೆ ಅಪ್ರಾಮಾಣಿಕರನ್ನು ನೇಮಿಸಿದರೆ ಆ ಸೊಸೈಟಿಯನ್ನು ಅವರು ನಾಶ ಮಾಡುತ್ತಾರೆ. ಆದ್ದರಿಂದ ನಾನು ಹೇಳುವುದೇನೆಂದರೆ ಒಳ್ಳೆಯ ಅಧಿಕಾರಿಗಳನ್ನು ನೇಮಿಸಬೇಕು. ಸಿ.ಸಿ.ಎ. ಪ್ರಕಾರ ಅಧ್ಯಕ್ಷರು ಕ್ರಮ ಜರುಗಿಸುವಂಥ ಒಂದು ಕಾನೂನು ಮಾಡಿದರೆ ಆಗ ಎಲ್ಲಾ ಅಧಿಕಾರಿಗಳು ಕೂಡ ಸರಿಯಾಗಿ ಕೆಲಸ ಮಾಡುತ್ತಾರೆ. ಆದರೆ ಈಗ ಏನಾಗಿದೆ ಎಂದರೆ ಅಧ್ಯಕ್ಷರಿಗೆ ಆ ಒಂದು ಅಧಿಕಾರವಿಲ್ಲ. ಆದ್ದರಿಂದ ಆಯಾ ಬ್ಯಾಂಕ್‌ಗಳ ಅಧ್ಯಕ್ಷರು ನಿಸ್ಸಾಯಕರಾಗಿದ್ದಾರೆ. ಆ ಬ್ಯಾಂಕಿನ ಕಾರ್ಯದರ್ಶಿಗಳು ತಪ್ಪು ಮಾಡಿದಾಗ ಅಥವಾ ರಿಜಿಸ್ಟ್ರಾರ್ ಅಥವಾ ಡೆಪ್ಯುಟಿ ರಿಜಿಸ್ಟ್ರಾರ್ ತಪ್ಪು ಮಾಡಿದಾಗ ಯಾವ ಕ್ರಮವನ್ನೂ ಸಹ ಕೈಗೊಳ್ಳುವುದಕ್ಕೆ ಆಗುವುದಿಲ್ಲ. ಆದ್ದರಿಂದ ನಾನು ಹೇಳುವುದೇನೆಂದರೆ ಅಂಥ ಒಂದು ಅಧಿಕಾರವನ್ನು ಅಧ್ಯಕ್ಷರಿಗೆ ಕೊಡಬೇಕು. ಮತ್ತೆ ಜಿಲ್ಲಾ ಬ್ಯಾಂಕ್‌ಗಳಲ್ಲಿ ಮ್ಯಾನೇಜಿಂಗ್ ಡೈರೆಕ್ಟರ್ಸ್ ಎಂದು ತಾವು ನೇಮಕ ಮಾಡಿದ್ದೀರಿ. ಅವರು ಯಾವ ಕೆಲಸವನ್ನು ಈ ಬ್ಯಾಂಕ್‌ಗಳಲ್ಲಿ ಮಾಡಬೇಕು ಎನ್ನತಕ್ಕಂಥ ಅನುಭವ ಕೂಡ ಅವರಿಗೆ ಇಲ್ಲ. ಅಂಥವರನ್ನು ಇವರು ಅಲ್ಲಿ ಮ್ಯಾನೇಜಿಂಗ್ ಡೈರೆಕ್ಟರ್ ಆಗಿ ನೇಮಕ ಮಾಡುತ್ತಾರೆ. ಆದರೆ ಅವರು ಆ ಬ್ಯಾಂಕಿನ ಅಭಿವೃದ್ಧಿಗೆ ಯಾವ ರೀತಿಯಲ್ಲಿ ಶ್ರಮಿಸುತ್ತಾರೆಂದು ನಾನು ಈ ಸಂದರ್ಭದಲ್ಲಿ ಕೇಳುತ್ತೇನೆ. ಅವರಿಗೆ ಬ್ಯಾಂಕಿನ ವಿಷಯದಲ್ಲಿ ಏನೇನು ಗಂಧವಿರುವುದಿಲ್ಲ. ಅಂಥವರನ್ನು ತಾವು ನೇಮಕ ಮಾಡುತ್ತೀರಿ. ಮತ್ತೆ ಅಲ್ಲಿ ಕೆಲಸ ಮಾಡುವಂಥ ಅಸಿಸ್ಟೆಂಟ್‌ಗಳಿಗೆ ಸರಿಯಾದಂಥ ತರಬೇತಿ ಇರುವುದಿಲ್ಲ. ಆದ್ದರಿಂದ ಅವರಿಗೆ ತರಬೇತಿಯನ್ನು ಕೊಡಬೇಕು. ಮತ್ತು ಪ್ರತಿಯೊಂದು ಜಿಲ್ಲೆಯಲ್ಲಿಯೂ ಕೂಡ ತರಬೇತಿ ಶಾಲೆಗಳನ್ನು ತೆರೆಯಬೇಕೆಂದು ನಾನು ಸಲಹೆ ಮಾಡುತ್ತೇನೆ.

ಇನ್ನು ಜನತಾ ಬಜಾರಿನಲ್ಲಿ ಜನರಲ್ ಮ್ಯಾನೇಜರ್ ಎಂದು ನೇಮಕ ಮಾಡಿದ್ದೀರಿ. ಅವರಿಗೆ ಅದರಲ್ಲಿ ಏನೇನು ಗೊತ್ತಿಲ್ಲ. ನಾನು ಮತ್ತೊಂದು ವಿಷಯವನ್ನು ನಾನು ಈ ಸಂದರ್ಭದಲ್ಲಿ ಹೇಳಬಯಸುತ್ತೇನೆ. ಇವತ್ತು ಜಿಲ್ಲಾ ಬ್ಯಾಂಕ್ ಅಧ್ಯಕ್ಷರಾಗಲು ಒಬ್ಬ ಬಡವನಿಂದ ಸಾಧ್ಯವಿದೆಯೇ? ಖಂಡಿತವಾಗಿ ಸಾಧ್ಯವಿಲ್ಲ ಎನ್ನತಕ್ಕಂಥ ಮಾತನ್ನು ನಾನು ಹೇಳುತ್ತೇನೆ. ಆದ್ದರಿಂದ ಹಳ್ಳಿ ಮಟ್ಟದಲ್ಲಿ, ತಾಲ್ಲೂಕು ಮಟ್ಟದಲ್ಲಿ, ಜಿಲ್ಲಾ ಮಟ್ಟದಲ್ಲಿ ಮಾಡಿದರೆ ಪರವಾಗಿಲ್ಲ. ಜಿಲ್ಲಾ ಮಟ್ಟದಲ್ಲಿ ಆನರರಿಯಂ ೨೦೦ ರೂಪಾಯಿಗಳನ್ನು ಫಿಕ್ಸ್ ಮಾಡಿರುತ್ತಾರೆ. ಆದ್ದರಿಂದ ಬೇರೆ ಕಡೆಗಳಲ್ಲೂ ಸಹ ನಾನಾ ಮಟ್ಟಗಳಲ್ಲಿ ಆನರರಿಯಂ ಕೊಡುವ ವ್ಯವಸ್ಥೆ ಮಾಡಿದರೆ ಬಡವನಿಗೂ ಕೂಡ ಆದರಿಂದ ಅನುಕೂಲವಾಗುತ್ತದೆ. ಜೊತೆಗೆ ಈಗಿರತಕ್ಕಂಥ ಒಂದು ವರ್ಷ ಅವಧಿ ಏನಿದೆ ಅದನ್ನು ಮೂರು ವರ್ಷಗಳಿಗಾದರೂ ಮಾಡಬೇಕು. ಮಾನ್ಯ ಮಂತ್ರಿಗಳು ಕ್ರಾಂತಿಕಾರಕ ಬದಲಾವಣೆ ಮಾಡುತ್ತೇವೆಂದು ಹೇಳಿರುವ ಈ ಸಂದರ್ಭದಲ್ಲಿ ಕೊನೆಯ ಪಕ್ಷ ಈಗಿರತಕ್ಕ ಒಂದು ವರ್ಷವನ್ನು ೩ ವರ್ಷವಾದರೂ ಮಾಡತಕ್ಕಂಥ ವ್ಯವಸ್ಥೆ ಮಾಡಬೇಕೆಂದು ಅತಿ ವಿನಯದಿಂದ ಅರಿಕೆ ಮಾಡಿಕೊಳ್ಳುತ್ತೇನೆ.

ಶ್ರೀ ಕೆ. ಹೆಚ್. ರಂಗನಾಥ್.—ಚುನಾವಣೆ ಒಂದೇ ಸಾರಿಯಾಗಬೇಕು. ಮೂರನೆಯ ಒಂದು ಭಾಗದಿಂದ ಆಗಬಾರದು.

ಶ್ರೀ ಹೆಚ್. ಎ. ನಾರಾಯಣಗೌಡ.—ಮೂರನೆ ಒಂದು ಭಾಗ ಮಾಡಿರುವ ಉದ್ದೇಶ ಎಲ್ಲರೂ ಒಂದೆ ಸಲ ಬಂದರೆ, ಎಲ್ಲರೂ ಹೊಸಬರು, ಅನುಭವಿಗಳು ಬರುತ್ತಾರೆ. ಮೂರನೆ ಒಂದು ಭಾಗ ಮಾಡಿದರೆ ಅದಕ್ಕೆ ಅವಕಾಶವಾಗುವುದಿಲ್ಲ ಎನ್ನುವ ಉದ್ದೇಶದಿಂದ ಮಾಡಿದ್ದಾರೆ.

ಶ್ರೀ ಬಿ. ಎಸ್. ಯಡಿಯೂರಪ್ಪ.—ಹಳಬರು ಜಾಸ್ತಿಯಿದ್ದರೆ ಅವ್ಯವಹಾರ ಜಾಸ್ತಿಯಾಗುತ್ತದೆ.

ಶ್ರೀ ಹೆಚ್. ಎ. ನಾರಾಯಣ ಗೌಡ.—ಆದ್ದರಿಂದ, ಬಹುಶಃ ಮೂರು ವರ್ಷಕ್ಕೆ ಒಂದು ಸಲ ಮೂರನೆ ಒಂದು ಭಾಗ ಚುನಾವಣೆ ಮಾಡಿದರೆ ಒಳ್ಳೆಯದೆಂದು ಹೇಳುತ್ತೇನೆ. ನಮ್ಮ ಸನ್ಮಾನ್ಯ ರಂಗನಾಥ್‌ರವರು ಈ ಬೇಡಿಕೆಯ ಮೇಲೆ ಚರ್ಚೆ ಮಾಡತಕ್ಕ ಸಂದರ್ಭದಲ್ಲಿ ಕೆಲವಾರು ವಿಷಯಗಳನ್ನು ಹೇಳಿದ್ದಾರೆ ಸಂತೋಷ. ಅವರಿಗೆ ಬಹುಶಃ ಆ ಕಡೆ ಹೋದ ಮೇಲೆ ಒಳ್ಳೆಯ ಬುದ್ಧಿ ಬಂದಿದೆ. ಸಹಕಾರಿ ಬಗ್ಗೆ ಅನುಕಂಪ ದಯದಾಕ್ಷಿಣ್ಯ ಬಂದಿದೆ. ಏನು ದುರ್ದೈವವೋ ಇಲ್ಲಿ ಕುಳಿತ ತಕ್ಷಣ ಸಹಕಾರಿ ಸಂಸ್ಥೆಗಳ ಮೇಲೆ ಕೆಂಗಣ್ಣು ಬೀರುತ್ತಿದ್ದಾರೆ. ಈವೊತ್ತಿನ ದಿವಸ ಬೆಂಗಳೂರು ಜಿಲ್ಲಾ ಬ್ಯಾಂಕ್‌ನಲ್ಲಿ ೬೪ನೆಯ ಸೆಕ್ಷನ್ ಪ್ರಕಾರ ಎನ್‌ಕ್ವಯರಿ ಮಾಡಿರುವ ಬಗ್ಗೆ ರಂಗನಾಥ್‌ರವರು ಪ್ರಸ್ತಾಪ ಮಾಡಿದ್ದಾರೆ. ಅಲ್ಲಿ ಮಾಡಿರತಕ್ಕದ್ದನ್ನು ವಿಚಾರಣೆ ಮಾಡಿ ಆಜ್ಞೆಯಾಗಿರತಕ್ಕದ್ದನ್ನು ವರದಿ ಮಾಡಿಯೆಂದು ಹೇಳಿದ್ದಾರೆ. ಅಲ್ಲಿ ಅನಾಹುತಗಳು ಏನು ಆಗಿಲ್ಲವೆನ್ನುವ ರೀತಿಯಲ್ಲಿ ಅವರು ಹೇಳಿದ್ದಾರೆ ಸಹಕಾರಿ ಇಲಾಖೆಯಲ್ಲಿ ಅದನ್ನು ವಿಚಾರಣೆ ಮಾಡತಕ್ಕಂಥ ಅಧಿಕಾರಿಗಳು ಇದ್ದಾರೆ. ವಿಚಾರಣೆ ಮಾಡಿ, ವಿಮರ್ಶೆಮಾಡಿ ಅಲ್ಲಿರತಕ್ಕಂಥ ಅನಾಹುತಗಳನ್ನು ವರದಿ ಮಾಡಬೇಕೆಂದು ಹೇಳಿದ್ದಾರೆ. ಬಹುಶಃ ಅಲ್ಲಿರತಕ್ಕ ಡಿಪಾಸಿಟ್ ಬಗ್ಗೆ ಅವರು ಬಹಳ ಹೇಳಿದರು. ಅವರೂ ಕೂಡ ಸಹಕಾರ ಮಂತ್ರಿಯಾದ ಮೇಲೆ, ಸಾಕಷ್ಟು ಅನುಭವ ತಿಳುವಳಿಕೆಯನ್ನು ಪಡೆದಿದ್ದಾರೆ. ಸೇವಾ ಸಹಕಾರ ಸಂಘಗಳಿರತಕ್ಕಂಥ ಮುಕ್ಕಾಲು ಭಾಗ ಹಣ ೧೨ ಕೋಟಿ ರೂಪಾಯಿಗಳು ಇದೆ, ೩ ಕೋಟಿ ವೈಯಕ್ತಿಕ ಹಣ. ಜೂನ್ ಆಖೈರು ಬಂದರೆ ಅಲ್ಲಿ ಏನು ಇರುತ್ತದೆ ಅದು ಜುಲೈ ಸೆಕೆಂಡ್ ವೀಕ್‌ನಲ್ಲಿ ಇರುವುದಿಲ್ಲ, ಖಾಲಿ. ಇಡೀವರ್ಷ ಎಷ್ಟು ಹಣ ಎಸ್.ಬಿ. ಅಕೌಂಟ್‌ನಲ್ಲಿ ಡಿಪಾಸಿಟ್ ಇಟ್ಟಿರುತ್ತಾರೆ ? ಒಂದು ವರ್ಷದ ಎರಡು ವರ್ಷದ ಅಥವಾ ಮೂರು ವರ್ಷಗಳಲ್ಲಿ ಬಹುಶಃ ಇದರಲ್ಲಿ ೨೫ ಭಾಗ ಕೂಡ ಅಡ್ವಾನ್ಸ್ ಕೊಡುವುದಕ್ಕೆ ಇರುವುದಿಲ್ಲ. ಈ ರೀತಿ ಇರುವ ಬೆಂಗಳೂರು ಜಿಲ್ಲಾ ಬ್ಯಾಂಕ್ ಕ್ರಮಬದ್ಧವಾಗಿದೆ ಎಂದು ಹೇಳಿದರು. ಅದೂ ಕೂಡ ಒಪ್ಪದಿರತಕ್ಕಂಥ ಮಾತು.

ಇನ್ನು ಈ ಇಲಾಖೆಯ ಅಧಿಕಾರಿಗಳು ಕ್ರಮ ತೆಗೆದುಕೊಂಡರೆ ಅದು ಅವರು ಕೊಟ್ಟಿರತಕ್ಕ ನೋಟೀಸ್‌ನಲ್ಲಿ ಅದರ ಅಂಕಿ ಅಂಶಗಳು ಉದ್ದೇಶಪೂರ್ವಕವಾಗಿ ಕೊಟ್ಟಿದ್ದಾರೆಯೋ ಇಲ್ಲವೆ ಎಂಬುದನ್ನು ತೋರಿಸುತ್ತದೆ. ಉದಾಹರಣೆಗೆ, ಅಲ್ಲಿರತಕ್ಕಂಥ ೫ ವಾಹನಗಳಿಗೆ ಲಾಗ್ ಬುಕ್‌ಗಳನ್ನು ಇಟ್ಟಿಲ್ಲ.

ಶ್ರೀ ಕೆ. ಎಚ್. ರಂಗನಾಥ್.—ನಾನು ಹೇಳುತ್ತೇನೆ. ಈ ವಿಷಯ ಮುಕ್ತರೀತಿಯಲ್ಲಿ ಚರ್ಚೆಯಾಗಬೇಕೆಂದು ಅವರಿಗೆ ಎಷ್ಟು ಈ ಇಲಾಖೆಯ ಮೇಲೆ ಕಳಕಳಿ ಇದೆಯೋ ಅಷ್ಟೇ ಕಳಕಳಿ ನನಗೂ ಇದೆ. ಸ್ವಾಮಿ, ಮಂತ್ರಿಗಳೂ ಅದರ ಅಧ್ಯಕ್ಷರಾಗಿದ್ದರು. ಅದಕ್ಕೆ ಹಿಂದೆ ಶ್ರೀ ರಾಮೇಗೌಡರು ಇದ್ದರು. ಅದಕ್ಕೆ ಹಿಂದೆ ಮಾನ್ಯ ರಾಜಗೋಪಾಲರು ಇದ್ದರು, ತದನಂತರ ಜಾಲಪ್ಪ ಬಂದರು. ರಾಜಗೋಪಾಲ್ ನಂತರ ಕೃಷ್ಣಪ್ಪನವರು ಬಂದಿದ್ದಾರೆ. ಇಲ್ಲಿ ವಾಹನದ ಲಾಗ್‌ಬುಕ್ ವಗೈರೆ ಅವರು ಇದ್ದಾಗಲೂ ಇರಲಿಲ್ಲ. ನನ್ನ ಹತ್ತಿರ ಷೋಕಾಸ್ ನೋಟೀಸ್ ಇದೆ. ಅದರ ರಿಪ್ಲೈ ಕೊಟ್ಟಿರತಕ್ಕದ್ದು ಇದೆ, ಆರ್ಡರ್ ಇದೆ ಎಲ್ಲಾ ಓದಲು ಸಮಯ ಅಭಾವದಿಂದ ಓದಿಲ್ಲ.

ಶ್ರೀ ಆರ್. ಎಲ್. ಜಾಲಪ್ಪ.—ಅಧ್ಯಕ್ಷರೇ, ಸನ್ಮಾನ್ಯ ರಂಗನಾಥ್‌ರವರು ಮಂತ್ರಿಯಾಗಿದ್ದಾಗ ನಾನು ಬ್ಯಾಂಕಿನ ಅಧ್ಯಕ್ಷನಾಗಿದ್ದೆ, ಅದು ನಿಜ. ೧೯೭೭ನೇ ಇಸವಿಯಿಂದ ಅವರೇ ಸೆಕ್ಷನ್ ೩೦ ಎ ಪ್ರಕಾರ ಎನ್‌ಕ್ವಯರಿ ಮಾಡಿಸಿದ್ದಾರೆ. ಆಜ್ಞೆಮಾಡಿದ್ದಾರೆ. ಲಾಗ್ ಬುಕ್ ಇಡದಿರುವುದು ಅಪಾದನೆಗಳಲ್ಲಿ ಒಂದಾಗಿದೆ. That was also one of the charges levelled against the Bank. When I was the President during 1977 an

enquiry was held and the Report was sent to the Government. I am prepared to produce everything, Sir.

ಶ್ರೀ ಕೆ. ಹೆಚ್. ರಂಗನಾಥ್.—ಈವೊತ್ತು ಲಾಗ್ ಬುಕ್ ಇಲ್ಲ ಎಂದು ನಮಗೆ ಗೊತ್ತಿದೆ. ನಾನು ಓದಿಲ್ಲ. ತಾವು ಉತ್ತರ ಹೇಳುವಾಗ ನಾನು ಇಲ್ಲಿರುತ್ತೇನೆ. ಪ್ರತಿಯೊಂದಕ್ಕೂ ತಾವು ಏನು ಹೇಳುತ್ತೀರೆಂದು ನಾನು ಕಾದು ನೋಡುತ್ತೇನೆ. ಒಂದು ವೇಳೆ ನಾನು ಹೇಳಿರುವುದು ತಪ್ಪಾಗಿದೆ ಎಂದು ತಾವು ತಿಳಿದುಕೊಂಡಿದ್ದರೆ ನಾನು ತಾವು ಕೇಳಿದ್ದಕ್ಕೆಲ್ಲಾ ರೆಕಾರ್ಡ್ ಇಟ್ಟುಕೊಂಡಿದ್ದೇನೆ. ಇದು ನಡೆದುಕೊಂಡು ಬಂದಿದೆ.

ಶ್ರೀ ಆರ್. ಎಲ್. ಜಾಲಪ್ಪ.—ಆವೊತ್ತಿನ ದಿವಸ ಅಂಡರ್ ಸೆಕ್ಷನ್ ೩೦ಎ ಪ್ರಕಾರ ಎನ್‌ಕ್ವಯರಿಗೆ ಆರ್ಡರ್ ಮಾಡಿದ್ದೀರಿ. ಅದರಲ್ಲಿ ಇದೂ ಒಂದು ಅಪಾದನೆ.

ಶ್ರೀ ಹೆಚ್. ಎ. ನಾರಾಯಣಗೌಡ.—ಅದಕ್ಕೆ ಲಾಗ್ ಬುಕ್ ವ್ಯವಸ್ಥೆ ಸರಿಯಾಗಿ ಇಟ್ಟಿಲ್ಲವೆಂದು ಹೇಳಿದ್ದೀರಿ. ಜೊತೆಗೆ ಅಲ್ಲಿ ಖರ್ಚು ಮಾಡಿದಂಥ ಹಣ ೧ ಲಕ್ಷದ ೮೭ ಸಾವಿರ ರೂಪಾಯಿಗಳು ಜೊತೆಗೆ ೮೭ ಸಾವಿರ ರೆಕವರಿ ಚಾರ್ಜಸ್ ಬಗ್ಗೆ ಸರಿಯಾಗಿ ಲೆಕ್ಕ ಮೆನ್‌ಟೇನ್ ಮಾಡಿಲ್ಲ. ಟ್ರಂಕ್‌ಕಾಲ್ ಚಾರ್ಜಸ್ ರಿಜಿಸ್ಟರ್ ಇಟ್ಟಿಲ್ಲ. ೫ ಲಕ್ಷ ಚಿಲ್ಲರೆ ಡೆಡ್ ಸ್ಟಾಕ್ ಇದೆ. ೨ ಲಕ್ಷ ಚಿಲ್ಲರೆ ಅಡ್ವಾನ್ಸ್ ವಸೂಲ್ಮಾಡಿಲ್ಲ. ಅವರಲ್ಲಿ ಕೆಲವರು ಸೇವೆಯಿಂದ ಹೊರಟುಹೋಗಿದ್ದಾರೆ. ಅದೇ ರೀತಿ ೧೧ ಲಕ್ಷ ೯೦೦ ರೂಪಾಯಿಗಳ ಡಿಮ್ಯಾಂಡ್ ಡ್ರಾಫ್ಟ್ ಹಣವನ್ನು ಕಟ್ಟಿದಮೇಲೆ ಅಪೆಕ್ಸ್ ಬ್ಯಾಂಕ್‌ನಿಂದ ರಿಯಿಂಬರ್ಸ್ ಮಾಡದಿರುವುದರಿಂದ, ಅದಕ್ಕೆ ಬಡ್ಡಿ ೧ ಲಕ್ಷ ೫೫ ಸಾವಿರ ರೂಪಾಯಿಗಳನ್ನು ಹಾಕಿರುತ್ತಾರೆ. ಇದಕ್ಕೆ ಯಾರು ಕಾರಣರು ?

ಶ್ರೀ ಕೆ. ಎಚ್. ರಂಗನಾಥ್.—ಹಾಗೆ ಬಡ್ಡಿ ಹಾಕದೆ ಇರುವುದರಿಂದ ಅಪೆಕ್ಸ್ ಬ್ಯಾಂಕ್‌ನವರೇ ೧೪ ಪರ್ಸೆಂಟ್ ಬಡ್ಡಿ ಹಾಕಿದ್ದಾರೆ. ಮೊನ್ನೆ ಏನಾಗಿದೆ, ಕೋಲಾರ ಜಿಲ್ಲೆಯ ಗೌರಿಬಿದನೂರಿನ ಡ್ರಾಫ್ಟ್ ಆನರ್ ಮಾಡುವಾಗ ಅಪೆಕ್ಸ್ ಬ್ಯಾಂಕ್‌ಗೆ ಅದನ್ನು ಕೊಟ್ಟಿಲ್ಲ. ಅದನ್ನು ಅಲ್ಲಿರತಕ್ಕಂಥ ಅಧಿಕಾರಿಗಳು ತಕ್ಷಣ ಅಪೆಕ್ಸ್ ಬ್ಯಾಂಕ್‌ಗೆ ಕಳಿಹಿಸದಿದುದರಿಂದ ಅವರು ೧೪ ಪರ್ಸೆಂಟ್ ಬಡ್ಡಿ ಹಾಕಿರುತ್ತಾರೆ. ಎಂದರೆ ಅದು ಒಂದು ಲಕ್ಷ ಚಿಲ್ಲರೆಯಾಗುತ್ತದೆ. ಅದು ಬ್ಯಾಂಕ್‌ಗೆ ಹೋಗಿದೆಯೋ ಇಲ್ಲವೋ ಹೇಳಿ ?

ಶ್ರೀ ಆರ್. ಎಲ್. ಜಾಲಪ್ಪ.—ಮಾನ್ಯ ಅಧ್ಯಕ್ಷರೇ, ಕೋಲಾರ ಜಿಲ್ಲಾ ಬ್ಯಾಂಕ್‌ನಿಂದ ದೊಡ್ಡಬಳ್ಳಾಪುರ ಬ್ರಾಂಚ್‌ಗೆ ಸುಮಾರು ೧೧ ಲಕ್ಷ ರೂಪಾಯಿಗಳ ೭-೮ ಡ್ರಾಫ್ಟ್‌ಗಳು ಬಂದಿವೆ. ಪೇಮೆಂಟ್ಸ್ ಮಾಡಿಕೊಟ್ಟರು. ಪೇಮೆಂಟ್ಸ್ ಮಾಡಿದ ಮಾರನೆಯ ದಿವಸ ಅದನ್ನು ಅಪೆಕ್ಸ್ ಬ್ಯಾಂಕ್‌ಗೆ ಕಳುಹಿಸಿ ರಿಯಿಂಬರ್ಸ್ ಮಾಡಿಲ್ಲ. ಇಲ್ಲಿ ಒಂದು ವರ್ಷವಾದರೂ ರಿಯಿಂಬರ್ಸ್ ಮಾಡಿಲ್ಲ. ತಿಂಗಳಿಗೆ ಐದು ಸಾವಿರ ರೂಪಾಯಿಗಳು ಕಾರಿನ ಪೆಟ್ರೋಲ್‌ಗೆ ಖರ್ಚಾಗುತ್ತದೆ. ಅಧ್ಯಕ್ಷರಿಗೆ ಇಷ್ಟು ಖರ್ಚು ಮಾಡಲು ಆಗುತ್ತದೆಯೇ ? ಇವರು ಸರಿಯಾಗಿ ಆಡಳಿತ ನಡೆಸುವುದಕ್ಕೆ ಆಗುವುದಿಲ್ಲವೇ ?

ಶ್ರೀ ಕೆ.ಹೆಚ್. ರಂಗನಾಥ್.—ಮಾನ್ಯ ಮಂತ್ರಿಗಳು ಕೋಪ ಮಾಡಿಕೊಳ್ಳದಿದ್ದರೆ ಒಂದು ಮಾತು ಹೇಳಬಹುದೇ ?

ಶ್ರೀ ಆರ್.ಎಲ್. ಜಾಲಪ್ಪ.—ನಾನು. ಮೊದಲೇ ಹೇಳಿದ್ದೇನೆ, ನಿಮ್ಮ ಬಗ್ಗೆ ನನಗೆ ಕೋಪ ಇಲ್ಲವೆಂದು.

ಶ್ರೀ ಕೆ.ಹೆಚ್. ರಂಗನಾಥ್.—ಕೆಲವು ವಿಚಾರಗಳ ಬಗ್ಗೆ ಮಾತನಾಡುವಾಗ ಅವುಗಳ ವಸ್ತು ಪರಿಸ್ಥಿತಿಯನ್ನು ನೋಡಬೇಕು. ಯಾವುದೇ ಅಧಿಕಾರಿ ತಕ್ಷಣ ಡಿಮ್ಯಾಂಡ್ ಡ್ರಾಫ್ಟ್‌ನ್ನು ಹಾನರ್ ಮಾಡಿ ಅಪೆಕ್ಸ್ ಬ್ಯಾಂಕ್‌ಗೆ ಕಳುಹಿಸಿಕೊಟ್ಟಿದ್ದರೆ ಅವರು ಹಣವನ್ನು ಮರುಪಾವತಿ ಮಾಡುತ್ತಿದ್ದರು. ಕಾರಣಾಂತರಗಳಿಂದ ಅದು ಆಗದೇ ಇದ್ದರೆ, ಅಧ್ಯಕ್ಷರ ಗಮನಕ್ಕೆ ಅದು ಬಾರದೇ ಹೋದರೆ ಅಧ್ಯಕ್ಷರನ್ನು ಇದಕ್ಕೆ ಹೊಣೆಗಾರನನ್ನಾಗಿ ಮಾಡಲಿಕ್ಕೆ ಸಾಧ್ಯ ಇದೆಯೇ ? ಮಾನ್ಯ ಮಂತ್ರಿಗಳು ತಾವು ಕೂಡ ಅಧ್ಯಕ್ಷರಾಗಿದ್ದೀರಿ. ತಾವು ಅನ್ಯಥಾ ಭಾವಿಸಬಾರದು. ತೂಬುಗೆರೆ ಸೊಸೈಟಿಯಲ್ಲಿ ಹಣ ತೆಗೆದುಕೊಂಡು ತಾವು ಡಿಫಾಲ್ಟರ್ ಆಗಿರಲಿಲ್ಲವೇ ? ತಾವು ತೆಗೆದುಕೊಂಡಿದ್ದ ಹಣವೆಷ್ಟು ? ಮೂವತ್ತು ಸಾವಿರ...ಅಲ್ಲ, ಹತ್ತಿರ ಹತ್ತಿರ ಒಂದು ಲಕ್ಷ ರೂಪಾಯಿಗಳನ್ನು ತೆಗೆದುಕೊಂಡಿದ್ದೀರಿ.

ಶ್ರೀ ಬಿ. ದೊಡ್ಡಬೋರೇಗೌಡ.—ಮಾನ್ಯ ಸದಸ್ಯರಿಗೆ ಹೇಳುವುದಕ್ಕೆ ಬೇಕಾದಷ್ಟು ಅವಕಾಶ ಇದೆ. ಅವರು ಮಾತನಾಡುವಾಗ ಮಧ್ಯೆ ಯಾರಾದರೂ ಮಾತನಾಡುತ್ತಾರೆಯೇ? ಎಲ್ಲಾ ವಿಚಾರಗಳಲ್ಲೂ ಭ್ರಷ್ಟಾಚಾರ ಇದೆ. ಸಹಕಾರ ಸಂಘಗಳಲ್ಲಂತೂ ಎಲ್ಲಾ ಹಂತಗಳಲ್ಲೂ ಭ್ರಷ್ಟಾಚಾರ ಆಗಿದೆ.

ಶ್ರೀ ಆರ್.ಎಲ್. ಜಾಲಪ್ಪ.—ಇದು ಭ್ರಷ್ಟಾಚಾರ ಅಲ್ಲ. ಮಾನ್ಯ ರಂಗನಾಥ್ ಅವರು ಹೇಳಿದ ಹಾಗೆ ನಾನು ಸಾಲ ಮಾಡಿದ್ದು ನಿಜ. ನಾನು ಸಾಲ ಮಾಡಿದ್ದು ವ್ಯವಸಾಯಕ್ಕೋಸ್ಕರ ಡಿಫಾಲ್ಟರ್ ಕೂಡ ಆಗಿದ್ದೆ. ರಿಜರ್ವ್ ಬ್ಯಾಂಕಿನಿಂದ ಅಬ್ಸರ್ವೇಷನ್ ಬಂದಿತ್ತು. ಆದರೆ ಆಮೇಲೆ ಹಣವನ್ನು ಪೂರ್ತಿಯಾಗಿ ಪಾವತಿ ಮಾಡಿದ್ದೇನೆ. ನಾನೇನೂ ಮೋಸ ಮಾಡಿಲ್ಲ. I am not ashmed of it. I am a farmer. I did borrow money? Is it a Crime?

ಒಬ್ಬ ಮಾನ್ಯ ಸದಸ್ಯರು.—ರಾಜ್ಯಾಂಗದಲ್ಲಿ ಯಾರೂ ಸಾಲ ಮಾಡಬಾರದು ಎಂದು ಇದೆಯೇ?

ಶ್ರೀ ಆರ್.ಎಲ್. ಜಾಲಪ್ಪ.—ನಾನು ಮಾಡಿದ ಸಾಲಕ್ಕೆ ಕಾರಣಾಂತರಗಳಿಂದ ಮರುಪಾವತಿ ಮಾಡಲಾಗದೆ ಡಿಫಾಲ್ಟರ್ ಆಗಿದ್ದು ನಿಜ. ನಾನು ಮಾಡಿದ ಸಾಲಕ್ಕೆ ನಾನು ಡಿಫಾಲ್ಟರ್ ಆಗದೆ ನನ್ನ ತಂದೆ ಆಗುತ್ತಾರೆಯೇ?

ಶ್ರೀ ಕೆ.ಹೆಚ್. ರಂಗನಾಥ್.—ಅಧ್ಯಕ್ಷರೇ, ನಾನು ಮೋಸ ಮಾಡಿದ್ದರು ಎನ್ನುವ ಶಬ್ಧವನ್ನೇ ಬಳಸಲಿಲ್ಲ. ಈ ವಿಷಯವನ್ನೇ ನಾನು ಪ್ರಸ್ತಾಪ ಮಾಡಿಲ್ಲ.

ಶ್ರೀ ಆರ್. ಎಲ್. ಜಾಲಪ್ಪ.—ನಾನು ತಮ್ಮನ್ನು ಕೇಳುತ್ತಿದ್ದೇನೆ. I am a defaulter, Is it a Crime? Why do you say so many times.

SRI K.H. RANGANATH.—Knowing fully well that you are a defaulter you continue to be the President of that Society. ನಾನು ಪ್ರಸ್ತಾಪ ಮಾಡಿದ್ದು ಏಕೆ ಎಂದರೆ...

ಉಪಾಧ್ಯಕ್ಷರು.—ಈಗ ಲಾಗ್‌ಬುಕ್ ಪ್ರಶ್ನೆ ಬಂದಿದೆ.

ಶ್ರೀ ಕೆ.ಹೆಚ್. ರಂಗನಾಥ್.—ಈ ಪ್ರಸ್ತಾಪವನ್ನು ನಾನು ಏಕೆ ಮಾಡುತ್ತಿದ್ದೇನೆ ಎಂದರೆ, ಅವರು ಹೇಳಿದರು ಯಾವನೋ ಅಧಿಕಾರಿ ದೊಡ್ಡಬಳ್ಳಾಪುರ ಜಿಲ್ಲಾ ಬ್ಯಾಂಕಿನಿಂದ ತತ್‌ಕ್ಷಣ ಡಿಮ್ಯಾಂಡ್ ಡ್ರಾಫ್ಟನ್ನು ಕಳಿಸಿಕೊಟ್ಟಿದ್ದರೆ ಮರುಪಾವತಿಯಾಗುತ್ತಿತ್ತು ಎಂದು ಮತ್ತು ಹದಿನಾಲ್ಕುವರೆ ಪರ್ಸೆಂಟ್ ಬಡ್ಡಿ ಅದರ ಮೇಲೆ ಬರುತ್ತಿರಲಿಲ್ಲ. ಆದರೆ ಅಧ್ಯಕ್ಷರನ್ನು ಮತ್ತು ಕಾರ್ಯಕಾರಿ ಸಮಿತಿಯನ್ನು ಏಕೆ ಇದಕ್ಕೆ ಹೊಣೆಗಾರರನ್ನಾಗಿ ಮಾಡುತ್ತೀರಿ? ಅವರು ಪ್ರಸ್ತಾಪ ಮಾಡಿದ್ದಕ್ಕೆ ನಾನು ಈ ಮಾತನ್ನು ಹೇಳಿದೆ.

SRI R.L. JALAPPA.—I do not understand why the hon. Member compares the inefficiency of the department with the defaulters...

ಶ್ರೀ ಬಿ. ದೊಡ್ಡಬೋರೇಗೌಡ.—ಕಾನೂನು ಆ ರೀತಿಯಲ್ಲಿಲ್ಲ. ಆ ರೀತಿಯಲ್ಲಿದ್ದರೆ ಬಹುತೇಕ ಜನ ಕಾರಾಗೃಹದಲ್ಲಿ ಇರುತ್ತಿದ್ದರು.

ಶ್ರೀ ಬಿ.ಎಸ್. ಯಡಿಯೂರಪ್ಪ.—ಸ್ವಾಮಿ ಹಿಂದೆ ಒಂದು ಸಾರಿ...

ಉಪಾಧ್ಯಕ್ಷರು.—ನಿಮಗೆ ಮಾತನಾಡಲು ಆಮೇಲೆ ಅವಕಾಶ ಇದೆ.

ಶ್ರೀ ಹೆಚ್.ಎ. ನಾರಾಯಣಗೌಡ.—ಮಾನ್ಯ ರಂಗನಾಥ್ ಅವರು ಯಾವ ರೀತಿಯಲ್ಲಿ ಅಧ್ಯಕ್ಷರು ಜವಾಬ್ದಾರರು ಎಂದು ಹೇಳಿದರು. ಅಲ್ಲಿರತಕ್ಕಂಥ ಅಧಿಕಾರಿಗಳಿಗೆ ವ್ಯವಹಾರ ಗೊತ್ತಾಗುತ್ತದೆ ವಿನಹ ಅಧ್ಯಕ್ಷರಿಗೆ ಆ ಮಾಹಿತಿ ಇರಲಿಕ್ಕೆ ಸಾಧ್ಯವಿಲ್ಲವೆಂದು ಅವರು ಹೇಳಿದರು. ಅದಕ್ಕೆ ನಾನು ಉತ್ತರ ಕೊಡುತ್ತೇನೆ. ಅಧ್ಯಕ್ಷರ ಗಮನಕ್ಕೆ ಬರಲಿಲ್ಲ ಎಂದರೆ ಯಾರೇ ಆಗಲಿ, ಪದಾಧಿಕಾರಿಗಳಾಗಿ ಇರಲಿಕ್ಕೆ ಅವರಿಗೆ ಅರ್ಹತೆ ಇದೆಯೇ ಎಂದು ಯೋಚನೆ ಮಾಡಬೇಕಾಗುತ್ತದೆ.

ಒಂದು ತಿಂಗಳು ಅಥವಾ ಎರಡು ತಿಂಗಳು ಗೊತ್ತಾಗುವುದಿಲ್ಲವೆಂದರೆ ಒಪ್ಪಿಕೊಳ್ಳೋಣ. ಅಲ್ಲಿರತಕ್ಕಂಥ ಟ್ರಕ್ಕರ್‌ನ್ನು ಯಾರ ಅಪ್ಪಣೆ ಇಲ್ಲದೇ ಯಾವ ಅನುಮತಿ ಇಲ್ಲದೇ ಕಾರ್ಯದರ್ಶಿಯವರಿಗೆ ಉಪಯೋಗಕ್ಕೆ ಕೊಟ್ಟಿದ್ದಾರೆ. ಅಲ್ಲಿರತಕ್ಕಂಥ ಕಾರು ಒಂದು ಅಪಘಾತದಲ್ಲಿ ಸಿಕ್ಕಿ ಒಡೆದು ಪುಡಿಪುಡಿಯಾಗಿದೆ. ಯಾವ ಕೆಲಸಕ್ಕೂ ಬಾರದ ರೀತಿಯಲ್ಲಿ ಆ ವಾಹನ ಇರುವಾಗ ಏಕೆ ಯಾವ ಕ್ರಮವನ್ನೂ ತೆಗೆದುಕೊಂಡಿಲ್ಲ ? ಯಾವ ರೀತಿಯಲ್ಲಿ ವ್ಯವಹಾರ ಆಗಿದೆಯೋ ಗೊತ್ತಿಲ್ಲ.

ಶ್ರೀ ಕೆ.ಹೆಚ್. ರಂಗನಾಥ್.—ಇನ್‌ಸ್ಪೆಕ್ಷನ್ ಎನ್‌ಕ್ವೈರಿ ಸೆಲ್ ಸೆಕ್ಷನ್ ೪೪ರ ಕೆಳಗಡೆ ಎನ್‌ಕ್ವೈರಿ ಮಾಡುವುದಕ್ಕೆ ಆಗುವುದಿಲ್ಲವೆ ?

ಶ್ರೀ ಹೆಚ್.ಎ. ನಾರಾಯಣಗೌಡ.—ಮೇಲಿಂದ ಆದೇಶ ಬಂದು ಬಿಡುತ್ತದೆ. ತಾವು ಸಹಕಾರ ಸಂಘ ಇಲಾಖೆಯ ಮಂತ್ರಿಯಾಗಿದ್ದಾಗ ಚಿತ್ರದುರ್ಗ ಜಿಲ್ಲಾ ಬ್ಯಾಂಕ್ ಮೇಲೆ ಎಷ್ಟೋ ಹೇಳಿಕೆಗಳನ್ನು ಪತ್ರಿಕೆಯಲ್ಲಿ ಓದಿದ್ದೇನೆ. ಈ ಬ್ಯಾಂಕನ್ನು ಸೂಪರ್‌ಸೀಡ್ ಮಾಡಬೇಕೆಂದು ಬಂದಿದೆ.

ಶ್ರೀ ಕೆ.ಹೆಚ್. ರಂಗನಾಥ್.—ಅಲ್ಲಿ ಡಿಪಾಸಿಟ್ಟೇ ಇಲ್ಲ.

ಶ್ರೀ ಹೆಚ್.ಎ. ನಾರಾಯಣಗೌಡ.—ಈ ಸಹಕಾರಿ ಬ್ಯಾಂಕ್ ಮುಳುಗಿ ಹೋಗಿದೆ, ಸೂಪರ್‌ಸೀಡ್ ಮಾಡಬೇಕೆಂದು ಹೇಳಿದಂತಹ ವ್ಯಕ್ತಿ ಎನ್‌ಕ್ವೈರಿ ನಡೆದಾಗ...

(ಗೊಂದಲ)

ನಾನು ಚಿಕ್ಕಮಗಳೂರು ಜಿಲ್ಲಾ ಬ್ಯಾಂಕ್ ಅಧ್ಯಕ್ಷನಾಗಿದ್ದೆ. ಆಗ ಶ್ರೀ ರಂಗನಾಥ್ ಅವರು ಸಹಕಾರ ಮಂತ್ರಿಗಳಾಗಿದ್ದರು. ೫೧ ಸಾವಿರ ರೂಪಾಯಿಗಳು ಬಡ್ಡಿ ಇಲ್ಲದೆ ಬಾಕಿ ಇದೆ. ಒಂದು ಪೈಸೆ ಕೂಡ ವಸೂಲು ಆಗಿಲ್ಲ. ಸರ್‌ಚಾರ್ಜ್ ಪ್ರೊಸೀಡಿಂಗ್ಸ್‌ನ್ನು ಸಹಕಾರ ಮಂತ್ರಿಗಳು ಏಕೆ ಮಾಡಲಿಲ್ಲ ? ಇನ್ನೊಂದು ಸೊಸೈಟಿ ಬಾಳೂರು ಸೇವಾ ಸಹಕಾರ ಸಂಘ ಐದು ಲಕ್ಷ ರೂಪಾಯಿ ಅವರ ಕೈಯಲ್ಲಿದೆ. ಸುಸ್ತಿಯಲ್ಲಿದ್ದರು ಬಡವರಿಗೆ ತೊಂದರೆಯಾಗಿದೆ ಎಂದು ಕ್ರಮ ತೆಗೆದುಕೊಂಡಿದ್ದಕ್ಕೆ ಮೇಲಿಂದ ಆದೇಶ ಬಂತು–ಅವರ ಮೇಲೆ ಕ್ರಮ ತೆಗೆದುಕೊಳ್ಳಬೇಡಿ ಅಂತ. ೭೨ನೇ ಇಸವಿಯಿಂದ ಒಂದು ಆಣೆ ಕೂಡ ವಸೂಲಾಗಿಲ್ಲ. ಬೇನಾಮಿ ಲೋನ್ ಅನ್ನು ವೇವ್ ಆಫ್ ಮಾಡಬೇಕೆಂದು ಮೇಲಿಂದ ನಿರ್ದೇಶನ ಬಂತು. ಹೇಗಾದರೂ ಮಾಡಿ...

ಶ್ರೀ ಕೆ.ಎಚ್. ರಂಗನಾಥ್.—I want to say something if he yields...... ನಾನು ಆ ರೀತಿ ಆದೇಶ ನೀಡಿದ್ದೇನೆಯೇ ? ಮನ್ನಾ ಮಾಡಬೇಕೆಂದು ಹೇಳಿದ್ದೇನೆಯೇ ?

(ಗೊಂದಲ)

೨–೩೦ ಪಿ.ಎಂ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ಇವರು ರಾಜಕೀಯ ಮಾಡುತ್ತಿದ್ದಾರೆ.

ಶ್ರೀ ಎಚ್.ಎ. ನಾರಾಯಣ ಗೌಡ.—ಸಹಕಾರಿ ಸಂಘಗಳನ್ನು ಮೂಲೆಗೆ ಹಾಕಿ, ಇವತ್ತು ಇವರಿಗೆ ಅಷ್ಟೊಂದು ಅನುಕಂಪ.

ಶ್ರೀ ಕೆ.ಎಚ್. ರಂಗನಾಥ್.—ನಿಮ್ಮಲ್ಲಿ ಆ ರೀತಿಯ ಯಾವುದಾದರೂ ರೆಕಾರ್ಡ್ ಇದ್ದರೆ ಸಭೆಯಲ್ಲಿಡಿ. ಮತ್ತೆ ಬಾಳೂರು ಸೊಸೈಟಿಯ ವಿಚಾರದಲ್ಲಿ ತೆಗೆದುಕೊಂಡಿದ್ದಂತಹ ಸಾಲವನ್ನು ವಸೂಲು ಮಾಡಬಾರದು, ಅದನ್ನು ವೇವ್ ಮಾಡಬೇಕೆಂದು ನಾನು ಆದೇಶವನ್ನು ಕೊಟ್ಟಿದ್ದೇನೆಂಬುದಕ್ಕೆ ತಮ್ಮಲ್ಲಿ ಸಾಕ್ಷ್ಯಾಧಾರಗಳು ಇವೆಯೇ ?

ಶ್ರೀ ಎಚ್.ಎ. ನಾರಾಯಣ ಗೌಡ.—ನೀವು ಎಂದು ಹೇಳಲಿಲ್ಲ. ಸರ್ಕಾರ ಎಂದು ಹೇಳಿದ್ದೇನೆ. ತಾವು ಇಷ್ಟೆಲ್ಲಾ ಹೇಳುತ್ತಿರುವುದನ್ನು ನೋಡಿದರೆ ನೀವೇ ಮಾಡಿಸಿದ್ದೀರಿ ಎಂದು ಕಾಣುತ್ತದೆ. ಬಹುಶಃ ಇರಬಹುದು, ತಾವು ಇಲಾಖೆಯವರಿಗೆ ಹೇಳಿ ಅವರಿಂದ ಮಾಡಿಸಿರಬಹುದು.

(ಗೊಂದಲ)

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ಇಡೀ ರಾಜ್ಯದಲ್ಲಿ ಬೆಳಗಾಂ ಆಗಲಿ, ಧಾರವಾಡ ಆಗಲಿ, ಗುಲ್ಬರ್ಗ ಆಗಲಿ, ಬೆಂಗಳೂರು ಆಗಲಿ ಈ ರೀತಿ ೧೯ ಜಿಲ್ಲೆಗಳಲ್ಲೂ ೧೯ ಜಿಲ್ಲಾ ಬ್ಯಾಂಕುಗಳು ಇವೆ. ಎಷ್ಟು ಬ್ಯಾಂಕುಗಳು ಒಳ್ಳೆಯವುಗಳು ಇವೆ ಎಂಬುದನ್ನು ತಾವು ಹೇಳಿ. ಚೆನ್ನಾಗಿ ನಡೆಯುತ್ತಿರತಕ್ಕಂತಹ ಬೆಳಗಾಂ ಜಿಲ್ಲಾ ಬ್ಯಾಂಕಿನ ಅಧ್ಯಕ್ಷರಿಗೆ ರಾಜಕೀಯವಾಗಿ ನೋಟೀಸ್ ಕೊಟ್ಟಿದ್ದೀರಿ. ತಾವು ಹೋದ ಕಡೆಯಲ್ಲೆಲ್ಲಾ ರಾಜಕೀಯವಾಗಿ ಆ ಬ್ಯಾಂಕಿನ ಅಧ್ಯಕ್ಷರಿಗೆ ನೋಟೀಸ್ ಕೊಡುವುದು ನಡೆಯುತ್ತಿದೆ.

ಶ್ರೀ ಆರ್.ಎಲ್. ಜಾಲಪ್ಪ.—ಬೆಳಗಾಂ ಬ್ಯಾಂಕಿನದು ಇಲ್ಲಿದೆ, ನಾಳೆ ಹೇಳುತ್ತೇನೆ.

ಶ್ರೀ ಬಿ. ಬೈರಪ್ಪಾಜಿ.—ಶ್ರೀಮಾನ್ ನಾರಾಯಣ ಗೌಡರೂ ಕೂಡ ಚಿಕ್ಕಮಗಳೂರು ಜಿಲ್ಲಾ ಬ್ಯಾಂಕಿನ ಅಧ್ಯಕ್ಷರಾಗದಿದ್ದರು ಸದಸ್ಯರಾಗಿದ್ದವರಿಗೆ ಸಾಲ ಕೊಟ್ಟಿದ್ದೂ ಅಲ್ಲದೆ ಅದನ್ನು ಮನ್ನಾ ಮಾಡಬೇಕೆಂಬ ಆದೇಶ ಬಂದಿತ್ತು ಎಂದು ಹೇಳುತ್ತಿದ್ದಾರೆ, ಅದು ಯಾವ ಕಾಲದಲ್ಲಿ ಆದದ್ದು ಎಂಬುದನ್ನು ಹೇಳಬೇಕು? ಅಶೋಕ ಗೃಹ ನಿರ್ಮಾಣ ಸಹಕಾರಿ ಸಂಘದಲ್ಲಿ ಸದಸ್ಯರಾಗದೆ ಇದ್ದಂತಹವರಿಗೆ ಸಾಲವನ್ನು ಕೊಟ್ಟಿದ್ದಾರೆ ಇದಕ್ಕೆ ಯಾರು ಕಾರಣರು? ಆಗ ಮಾನ್ಯ ಜಾಲಪ್ಪನವರು ಅಧ್ಯಕ್ಷರಾಗಿರಲಿಲ್ಲವೇ ?

ಶ್ರೀ ಆರ್.ಎಲ್. ಜಾಲಪ್ಪ.—ದಯಮಾಡಿ ತಾರೀಖನ್ನು ಹೇಳಿ, ನನ್ನಕಾಲದ್ದಲ್ಲ, ನನಗಿಂತ ಹಿಂದೆ ಆದದ್ದು ಅದು.

ಶ್ರೀ ಬಿ. ಬೈರಪ್ಪಾಜಿ.—ಇಂತಹ ಅನೇಕ ಲೋಪದೋಷಗಳು ನೀವು ಅಧಿಕಾರದಲ್ಲಿದ್ದಾಗ ನೀವು ಅಧ್ಯಕ್ಷರಾಗಿದ್ದಾಗ, ಅದೇ ರೀತಿ ಶ್ರೀಮಾನ್ ರಾಮೇಗೌಡರು ಅಧ್ಯಕ್ಷರಾಗಿದ್ದಾಗ ಇವೆಲ್ಲಾ ನಡೆದಿವೆ ಸ್ವಾಮಿ.

ಉಪಾಧ್ಯಕ್ಷರು.—ಈ ರೀತಿಯಾಗುವುದಾದರೆ ನಾನು ಸಭೆಯನ್ನು ನಡೆಸುವುದಕ್ಕಾಗುವುದಿಲ್ಲ. ನಾನು ನಿಂತಿದ್ದೇನೆ ತಾವು ದಯಮಾಡಿ ಕುಳಿತುಕೊಳ್ಳಿ. ಮಾನ್ಯ ಸದಸ್ಯರು ಮಂತ್ರಿಗಳಿಂದ ವಿವರಣೆಯನ್ನು ಕೇಳುತ್ತಾರೆ. ಚರ್ಚೆಯಲ್ಲಿ ಭಾಗವಹಿಸಿದಂತಹ ಸದಸ್ಯರಿಂದಲೇ ವಿವರಣೆಯನ್ನು ಕೇಳುತ್ತಿರುವುದು ನನಗಂತೂ ಅರ್ಥವಾಗುವುದಿಲ್ಲ. ಸಹಕಾರಿ ಇಲಾಖೆಯ ಬೇಡಿಕೆಮೇಲೆ ಚರ್ಚೆಯಾಗುತ್ತಿದೆ. ಮಾನ್ಯ ಸದಸ್ಯರು ಅವರ ಸಲಹೆಯನ್ನು ಕೊಡುತ್ತಿದ್ದಾರೆ.

ಶ್ರೀ ಬಿ. ಶಿವಣ್ಣ.—ಅವರು ಸಲಹೆ ಕೊಡುತ್ತಿಲ್ಲ.

ಉಪಾಧ್ಯಕ್ಷರು.—ನಿಮಗೂ ಆ ಒಂದು ಅವಕಾಶ ಬರುತ್ತದೆ. ಸಲಹೆಗಳನ್ನು ಕೇಳತಕ್ಕಂಥ ಕಾಲಾವಕಾಶ ನಿಮಗೂ ಬರುತ್ತದೆ. ನೀವು ಒಂದು ಹೇಳುವುದಕ್ಕೆ ಅವರು ಒಂದು ಹೇಳುವುದು ಈರೀತಿಯಾದರೆ ಇವತ್ತು ೮ ಗಂಟೆಯಾದರೂ ಚರ್ಚೆ ಪೂರ್ಣವಾಗುವುದಿಲ್ಲ. ನಿಮಗೂ ಅವಕಾಶ ಬಂದಾಗ ಹೇಳಬೇಕಾದ್ದನ್ನು ಹೇಳಿ.

ಶ್ರೀ ಎಚ್.ಡಿ. ಚೌಡಯ್ಯ.—ಮಾನ್ಯ ಉಪಾಧ್ಯಕ್ಷರೆ,

ಉಪಾಧ್ಯಕ್ಷರು.—ಮಾನ್ಯ ಸದಸ್ಯರು ದಯಮಾಡಿ ಕುಳಿತುಕೊಳ್ಳಬೇಕು. ನಂತರ ಹೇಳಬಹುದು.

ಶ್ರೀ ಬಿ.ಎಸ್. ಯಡಿಯೂರಪ್ಪ.—ಸಮಯವನ್ನು ನಿಗದಿ ಮಾಡಿ. ನಾಳೆ ನಮಗೆ ಸಮಯ ಇಲ್ಲ ಎಂದು ಹೇಳಬೇಡಿ ಅಷ್ಟೇ ನನ್ನ ವಿನಂತಿ.

ಒಬ್ಬ ಮಾನ್ಯ ಸದಸ್ಯರು.—ಶ್ರೀಮಾನ್ ನಾರಾಯಣಗೌಡರು ಮಂತ್ರಿಗಳೋ? ಅಥವಾ ಶ್ರೀಮಾನ್ ಜಾಲಪ್ಪನವರು ಮಂತ್ರಿಗಳೋ ಎಂಬುದು ನನಗೆ ಅರ್ಥವಾಗುತ್ತಿಲ್ಲ.

ಶ್ರೀ ಬಿ. ಬೈರಪ್ಪಾಜಿ.—ಮಾನ್ಯ ಉಪಾಧ್ಯಕ್ಷರೆ, ಸದಸ್ಯರಾಗಿಲ್ಲದಿರುವವರಿಗೆ ಸಾಲ ಕೊಟ್ಟಿದ್ದಾರೆ ಅದು ಯಾವಾಗ ಅಂದರೆ ೧೧-೭-೧೯೭೪ರಲ್ಲಿ.

ಶ್ರೀ ಆರ್.ಎಲ್.ಜಾಲಪ್ಪ.—ಆಗ ನಾನು ಅಧ್ಯಕ್ಷನಾಗಿರಲಿಲ್ಲ. He has made some charges and I will prove those charges as they are not correct.

ಅಶೋಕ ಗೃಹ ನಿರ್ಮಾಣ ಸಹಕಾರಿ ಸಂಘದಲ್ಲಿ ಒಬ್ಬರಿಗೆ ೫೦ ಸಾವಿರ ರೂಪಾಯಿಗಳ ಸಾಲವನ್ನು ೧೧-೭-೭೪ರಲ್ಲಿ ಏನು ಕೊಟ್ಟಿದ್ದಾರೆಂದು ಮಾನ್ಯ ಸದಸ್ಯರಾದ ಶ್ರೀ ಬೈರಪ್ಪಾಜಿಯವರು ಹೇಳಿದ್ದಾರೆ ಆಗ ನಾನು ಅಧ್ಯಕ್ಷನಾಗಿರಲಿಲ್ಲ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ನಿಮ್ಮ ಗುರುಗಳು ಅಧ್ಯಕ್ಷರಾಗಿದ್ದರು. ಆಗ ನೀವು ಡೈರೆಕ್ಟರ್ ಆಗಿದ್ದಿರಿ ಎಂದು ಹೇಳಿದರು.

ಶ್ರೀ ಆರ್.ಎಲ್. ಜಾಲಪ್ಪ.-ಶ್ರೀಮಾನ್ ಖರ್ಗೆಯವರು ಕಂದಾಯ ಮಂತ್ರಿಗಳಾಗಿ ಇದ್ದಂಥವರು ಅವರು ಸಹಕಾರಿ ಮಂತ್ರಿಗಳಾಗಿರಲಿಲ್ಲ. ಅವರು ಕಂದಾಯ ಇಲಾಖೆಯಲ್ಲಿ ಎಕ್ಸ್‌ಪರ್ಟ ಆಗಿದ್ದಂತಹವರು.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ನಿಮ್ಮ ಗುರುಗಳು ಆಗ ಅಧ್ಯಕ್ಷರಾಗಿದ್ದರು. ನೀವು ಡೈರೆಕ್ಟರ್ ಆಗಿದ್ದಿರಿ ಎಂದು ಅವರು ಹೇಳಿದರು.

ಶ್ರೀ ಪಿ. ರಾಮದೇವ್.—ಡಿ.ಸಿ.ಸಿ.ಬ್ಯಾಂಕಿನಲ್ಲಿ ಡಿಫಾಲ್ಟರ್ ಆಗಿದ್ದಂತಹವರು ಅದರ ಅಧ್ಯಕ್ಷರಾಗಿದ್ದರು ಎಂಬುದನ್ನೇ ಚರ್ಚೆ ಮಾಡುತ್ತಾ ಹೋದರೆ, ಸಹಕಾರಿ ಇಲಾಖೆಯ ಬೇಡಿಕೆಯನ್ನು ಮುಗಿಸುವುದು ಯಾವಾಗ ? ಆದ್ದರಿಂದ ಸಹಕಾರಿ ಇಲಾಖೆಯ ಬೇಡಿಕೆಯ ಮೇಲೆ ಮಾತನಾಡುವುದು ಒಳ್ಳೆಯದು.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ಡಿಫಾಲ್ಟರ್ ಆಗಿದ್ದಂತಹವರು ಡೈರೆಕ್ಟರ್ ಆಗಿದ್ದರು. ಡಿಫಾಲ್ಟರ್ ಆಗಿದ್ದಂತಹವರು ಅಧ್ಯಕ್ಷರಾಗಿದ್ದರು. ಡಿಫಾಲ್ಟರ್ ಆಗಿದ್ದಂತಹವರು ಇವತ್ತು ಮಂತ್ರಿಗಳಾಗಿದ್ದಾರೆ.........ಹೌದೇ.........

ಶ್ರೀ ಆರ್.ಎಲ್. ಜಾಲಪ್ಪ.—ಯಾವುದೋ ಕಾಲದಲ್ಲಿ ನಾನು ಡಿಫಾಲ್ಟರ್ ಆಗಿದ್ದು ನಿಜ. ಆದರೆ ಇವತ್ತು ನಾನು ಮಂತ್ರಿಯಾಗಿದ್ದೇನೆ. I don't think it is crime......... ಅವತ್ತು ಮಂತ್ರಿಗಳಾಗಿದ್ದಂತಹವರು ನನ್ನನ್ನು ತೆಗೆಯಬಹುದಿತ್ತು. ಯಾರೂ ಬೇಡ ಎಂದು ಹೇಳಲಿಲ್ಲ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ಅದೇ ಕ್ವಾಲಿಫಿಕೇಷನ್ ಎಂದು ತಿಳಿಕೊಂಡಿದ್ದರೆ, ತುಂಬಾ ಸಂತೋಷ. ಇವರನ್ನು ಇನ್ನೂ ದೊಡ್ಡ ಮಂತ್ರಿಗಳನ್ನಾಗಿ ಮಾಡಿ.

ಶ್ರೀ ಆರ್. ಎಲ್. ಜಾಲಪ್ಪ.—ನನ್ನ ಅನುಭವದ ಮೇಲೆ ಮಂತ್ರಿಯಾಗಿದ್ದೇನೆ. ಅಂದು ಡಿಫಾಲ್ಟರ್ ಆಗಿದ್ದಂತಹ ಸಮಯದಲ್ಲಿ ಅನುಭವಿಸಿದ ಸಂಕಟದ ಮೇಲೆ ಇವತ್ತು ರೈತರಿಗೆ ಇಷ್ಟೊಂದು ರಿಯಾಯಿತಿಯನ್ನು ಕೊಡುವುದಕ್ಕಾಗಿ ಮಂತ್ರಿಯಾಗಿದ್ದೇನೆ. ತಮ್ಮ ಮೂಲಕ ನಮ್ಮ ಮಿತ್ರರಾದ ನಾರಾಯಣಗೌಡ ಅವರಿಗೆ ವಂದಿಸುತ್ತೇನೆ. ಏಕೆಂದರೆ ಅವರು ಯೀಲ್ಡ್ ಆಗಿದ್ದಾರೆ. ನನಗೆ ಈ ಡಿಮ್ಯಾಂಡ್ ಮೇಲೆ ಮಾತನಾಡತಕ್ಕ ಅವಕಾಶ ಸಿಕ್ಕುತ್ತದೆಯೋ ಇಲ್ಲವೋ ಗೊತ್ತಿಲ್ಲ. ಇಷ್ಟು ಹೊತ್ತು ನಡೆದ ಗೊಂದಲವನ್ನು ನೋಡಿದರೆ ನನಗೆ ಬಹಳ ಆಶ್ಚರ್ಯವಾಗುತ್ತದೆ.

ಶ್ರೀ ಆರ್.ಎಲ್. ಜಾಲಪ್ಪ.—ಮಾನ್ಯ ಅಧ್ಯಕ್ಷರೇ, ಇಂಥ ಸಹಕಾರಿಗಳಿಗೆ ತಾವು ಅವಕಾಶವನ್ನು ಕೊಡಲೇ ಬೇಕು. ನಾನು ಅವರ ಸಲಹೆಗಳನ್ನು ಸ್ವಾಗತ ಮಾಡುತ್ತೇನೆ.

ಶ್ರೀ ಎಚ್.ಟಿ. ಚೌಡಯ್ಯ.—ಕಳೆದ ಆರು ವರ್ಷದಿಂದ ನೋಡುತ್ತಿದ್ದೇನೆ, ಇಷ್ಟೊಂದು ವಿಫುಲವಾದ ವ್ಯಾಪಕವಾದಂಥ ಚರ್ಚೆ ಇದರ ಮೇಲೆ ಎಂದೂ ಯಾವ ವರ್ಷವೂ ನಡೆದಿರಲಿಲ್ಲ. ಇದನ್ನು ನಾನು ನನ್ನ ಅನುಭವದಿಂದ ಹೇಳುತ್ತಿದ್ದೇನೆ. ನಾವು ಪ್ರೊಸಿಂಡಿಂಗ್ಸ್‌ನ್ನು ನೋಡಿದರೂ ಕೂಡ ಇದು ಗೊತ್ತಾಗುತ್ತದೆ. ಸನ್ಮಾನ್ಯ ನಾರಾಯಣಗೌಡರು ಬಿ.ಡಿ.ಸಿ.ಸಿ. ಬ್ಯಾಂಕ್‌ನ ೬ಳನೆಯ ಎನ್‌ಕ್ವಯರಿ ವಿಷಯದಲ್ಲಿ ಡೈರೆಕ್ಟರ್ ಅವರು ಕಾರ್ಯನಿರ್ವಾಹಕ ಮಂಡಳಿಯವರು ಸದಸ್ಯರಿಗೆ ಷೋಕಾಸ್ ನೋಟೀಸ್ ಕೊಟ್ಟ ವಿಷಯವನ್ನು ಪ್ರಸ್ತಾಪ ಮಾಡಿದ್ದಾರೆ. ಈ ಸಂದರ್ಭದಲ್ಲಿ ನಾನು ಭಾಷಣ ಮಾಡುವುದಕ್ಕೆ ಹೋಗುವುದಿಲ್ಲ. Here are some of the observations

made by the RBI officers. They have addressed a D.O. letter to the Registrar, dated 6-1-1976, which reads thus:

"Inspection conducted by the RBI during May-June 1975 had revealed several irregularities of very serious nature. On account of complete mis-management of the affairs of the Bank, financial position and the working of the Bank had deteriorated considerably and as a result, the Bank did not comply with the provisions of the sections 11,22 (3) (a) of the B.R. Act. We find that some of the directors who were responsible for committing irregularities have been continuing in the Board. For instance, Sri Ramegowda and R.L. Jalappa (President) continued in the Board of management. No steps seems to have been taken against those responsible for committing irregularities and unless the bank complies with the Section 11 of the B-R. Act, we will not be in a position to sanction any limit on behalf of the Bangalore District Central Co-operative Bank".

ಶ್ರೀ ಬಿ. ಬೈರಪ್ಪಾಜಿ.—ಇದಕ್ಕೆ ತಾವು ಉತ್ತರ ಹೇಳಬೇಕು.

ಶ್ರೀ ಆರ್. ಎಲ್. ಜಾಲಪ್ಪ.—ನಾಳೆಯು ದಿವಸವೇ ಇದಕ್ಕೆ ಉತ್ತರ ಕೊಡುತ್ತೇನೆ. ನನ್ನ ಹತ್ತಿರವೂ ವಿವರ ಇದೆ.

ಶ್ರೀ ಬಿ. ಬೈರಪ್ಪಾಜಿ.—೧೩ ವರ್ಷದಿಂದ ಏನೇನು ನಡೆದಿದೆ ಅದೆಲ್ಲವೂ ಇದೆ.

ಶ್ರೀ ಎಚ್. ಜಿ. ಲಕ್ಷ್ಮಯ್ಯ.—ಸಾಲ ಮಾಡತಕ್ಕ ಹಕ್ಕು ಎಲ್ಲರಿಗೂ ಇದೆ. ಆದರೆ ಸರ್ಕಾರದ ಗಂಟನ್ನು ಯಾರೂ ತಿನ್ನಬಾರದು.

ಶ್ರೀ ಎಚ್. ಎ. ನಾರಾಯಣಗೌಡ.—ಸರ್ಕಾರದ ಗಂಟನ್ನು ತಿನ್ನಬಾರದು ಮೋಸ ಮಾಡಬಾರದು. ನಿಯಮಗಳ ಪ್ರಕಾರ ಡಿಫಾಲ್ಟರ್ ಆಗಿದ್ದರು ಎಂದರೆ ಅವರು ಮಂತ್ರಿಯಾಗಬಾರದು. ಎಂದು ಏನೂ ಇಲ್ಲ. ಇದನ್ನೇ ಒಂದು ಡಿಸ್‌ಕ್ವಾಲಿಫಿಕೇಷನ್ ಎಂದು ಹೇಳುವುದು ಯಾವ ಸಹಕಾರಿಗೂ ಉಚಿತವಲ್ಲ. ಅಂಥ ಬಡವರಾಗಿರತಕ್ಕ ಒಬ್ಬ ವ್ಯಕ್ತಿ, ಸಾಲವನ್ನು ಕೊಡದೆ ಇರತಕ್ಕ ಒಬ್ಬ ವ್ಯಕ್ತಿ ಇವತ್ತು ಮಂತ್ರಿಯಾಗಿದ್ದಾರೆಂದು ತಾವುಗಳು ಕನಿಕರ ತೋರಿಸಬೇಕೇ ವಿನಹ ಆಕ್ಷೇಪಣೆ ಎತ್ತಬಾರದು. ದುಡ್ಡು ಮಾಡಿಕೊಂಡು, ಅನ್ಯಾಯ ಮಾಡಿ, ಸರ್ಕಾರದ ಹಣವನ್ನು ಲೂಟಿ ಹೊಡೆದು ಮಂತ್ರಿಗಳಾದರೆ ಅದಕ್ಕೇನು ಹೇಳುತ್ತೀರಿ ತಾವು? ಅದೇನೆ ಇರಲಿ ನಾನು ವಿಷಯಕ್ಕೆ ಬರುತ್ತೇನೆ.

ಶ್ರೀ ಎಂ. ಎಸ್. ಕೃಷ್ಣನ್.—ಸಹಕಾರಿ ಕ್ಷೇತ್ರದಲ್ಲಿ ಸಾಲ ಕೊಡುವುದಕ್ಕೆ ಅವಕಾಶ ಇದೆ' ದುಡ್ಡು ಮಾಡುವುದಕ್ಕೆ ಅವಕಾಶವಿದೆ. ಲೂಟಿ ಹೊಡೆಯುವುದಕ್ಕೆ ಅವಕಾಶವಿದೆ, ಎನ್ನುವುದನ್ನು ನಾರಾಯಣಗೌಡ ಅವರು ಒಪ್ಪಿಕೊಳ್ಳುತ್ತಾರೆಂದ ಹಾಗಾಯಿತು.

ಶ್ರೀ ಎಚ್. ಎ. ನಾರಾಯಣಗೌಡ.—ನಾನು ಜಿಲ್ಲಾ ಬ್ಯಾಂಕ್‌ನ ಅಧ್ಯಕ್ಷನಾಗಿದ್ದಾಗ ಕೆಲವರು ಲಕ್ಷಾಂತರ ರೂಪಾಯಿಗಳ ಸಾಲವನ್ನು ತೆಗೆದುಕೊಂಡು ಸಕಾಲಕ್ಕೆ ಹಣವನ್ನು ತುಂಬುತ್ತಾ ಇರಲಿಲ್ಲ. ಇದಕ್ಕೆ ಮಂತ್ರಿಗಳ ಪ್ರಭಾವ, ಅಧಿಕಾರಿಗಳ ಒತ್ತಡ ಟೆಲಿಫೋನ್ ಮೇಲೆ ತಿಳಿಸುವುದು, ಲಿಖಿತ ಮೂಲಕ ಬರೆದು ಕಳುಹಿಸುವುದು ಮಾಡುತ್ತಿದ್ದರು. ನಾನು ಅದನ್ನು ಅಪ್ರೂವ್ ಮಾಡಲಿಕ್ಕೆ ಸಾಧ್ಯವಿಲ್ಲವೆಂದರೆ ಜಾಯಿಂಟ್ ರಿಜಿಸ್ಟ್ರಾರ್ ಅವರು ಮೇಲಿನಿಂದ ಮಂತ್ರಿಗಳ ಒತ್ತಡ ಇದೆ, ನಾವು ಹಣವನ್ನು ಕೊಡದಿದ್ದರೆ ನಮಗೆ ತೊಂದರೆಯಾಗುತ್ತದೆಂದು ಹೇಳುತ್ತಿದ್ದರು. ಹೀಗಾಗಿ ಬ್ಯಾಂಕ್‌ನ ಲಕ್ಷಗಟ್ಟಲೆ ಹಣ ಇನ್ನೂ ಬೇರೆಯವರ ಕೈಯಲ್ಲಿದೆ ಅದನ್ನು ವಸೂಲಿ ಮಾಡುವುದಕ್ಕೆ ಇನ್ನೂ ಆಗಿಲ್ಲವೆಂದು ವಿಷಾದದಿಂದ ನಾನು ಹೇಳಬೇಕಾಗಿದೆ. ಇಂಥ ಒಂದು ಕೆಟ್ಟ ಪರಿಣಾಮ ಸಹಕಾರಿ ಕ್ಷೇತ್ರದಲ್ಲಿ ಬೀರಿ ಲಕ್ಷಗಟ್ಟಲೆ ಹಣ ಲೂಟಿಯಾಗಿದೆ. ಇದು ಮಾನ್ಯ ರಂಗನಾಥ್ ಅವರು ಮಂತ್ರಿಗಳಾಗಿದ್ದ ಕಾಲದಲ್ಲಿಯೇ ಆಗಿದೆ.

ಶ್ರೀ ಕೆ. ಎಚ್. ರಂಗನಾಥ್.—ನಾನು ಯಾವಾಗ ಹೇಳಿದೆ ಸ್ವಾಮಿ, ನಿಮಗೆ?

ಶ್ರೀ ಎಚ್.ಎ. ನಾರಾಯಣಗೌಡ.—ತಾವು ಮಂತ್ರಿಗಳಾಗಿದ್ದ ಕಾಲದಲ್ಲಿ ಆಗಿದೆ ಎಂದು ಹೇಳಿದೆ. ಆಗ ನೀವು ಹೇಳುವ ಪರಿಸ್ಥಿತಿ ಇರಲಿಲ್ಲ, ನಾವು ಕೇಳುವ ಪರಿಸ್ಥಿತಿಯೂ ಇರಲಿಲ್ಲ. ಈ ರೀತಿಯಾಗಿ ಸುಮಾರು ಒಂಭತ್ತೂವರೆ ಲಕ್ಷ ರೂಪಾಯಿಗಳು ನಿರ್ನಾಮವಾಗಿದೆ. ಇನ್ನು ಜಿಲ್ಲಾ ಸಹಕಾರ ಕೇಂದ್ರ ಬ್ಯಾಂಕ್ ಸುಮಾರು ಆರೂವರೆ ಲಕ್ಷ ರೂಪಾಯಿಗಳ ನಷ್ಟವನ್ನು ಅನುಭವಿಸುತ್ತಿದೆ. ಅಲ್ಲಿರತಕ್ಕ ಸಿಬ್ಬಂದಿ ವರ್ಗದವರು ಸುಮಾರು ನಾಲ್ಕೂವರೆ ಲಕ್ಷ ರೂಪಾಯಿಗಳನ್ನು ತಿಂದು ಹಾಕಿದ್ದಾರೆ. ಶ್ರೀ ಶಿವಾನಂದ ಎನ್ನತಕ್ಕ ಇಲಾಖೆಯ ಅಧಿಕಾರಿ ನಾಲ್ಕೂವರೆ ಲಕ್ಷ ರೂಪಾಯಿಗಳನ್ನು ಜವಾಪಣೆ ಮಾಡಿಕೊಂಡು ಹೋಗಿದ್ದಾನೆ, ಇವರ ಮೇಲೆ ಕೇಸ್ ಹಾಕಿದ್ದಾರೆ, ಇನ್‌ಕ್ವಯರಿ ನಡೆಯುತ್ತಿದೆ ಎಂದು ಕೇಳಿದ್ದೇನೆ. ಈ ಮಧ್ಯೆ ಇವರಿಗೆ ತಾವು ಪ್ರಮೋಷನ್ ಸಹ ಕೊಟ್ಟಿದ್ದೀರಿ ಎಂದು ತಿಳಿದು ಬಂದಿದೆ. ಇಲ್ಲಿ ಏನೇನು ಅನ್ಯಾಯ ಮಾಡಿರುತ್ತಾರೆ, ಎಷ್ಟೆಷ್ಟು ಹಣವನ್ನು ನುಂಗಿ ಹಾಕಿರುತ್ತಾರೆ. ಅದರ ಮೇಲೆ ಶಿಕ್ಷೆ ಕೊಡದೆ ಅವರಿಗೆ ಪ್ರಮೋಷನ್ ಕೊಡುವುದು ನಡೆದುಕೊಂಡು ಬಂದಿದೆ. ಸುಮಾರು ಆರೂವರೆ ಲಕ್ಷ ರೂಪಾಯಿಗಳ ಮಾಲು ಹಾಗೆಯೇ ಇದೆ, ಒಂದೂವರೆ ಲಕ್ಷ ರೂಪಾಯಿಗಳ ಮಾಲನ್ನು ಬಹಿರಂಗವಾಗಿ ಹರಾಜು ಹಾಕಿದ್ದಾರೆ. ಜನರಲ್ ಮ್ಯಾನೇಜರ್ ಅವರು ಅಲ್ಲಿರತಕ್ಕ ಡೆಪ್ಯುಟಿ ರಿಜಿಸ್ಟ್ರಾರ್ ಮತ್ತು ಮ್ಯಾನೇಜಿಂಗ್ ಕಮಿಟಿಯವರು ಮೆಂಜವಾಣಿ ಮಾಡಿ ಸರ್ಟಿಫಿಕೇಟ್ ಕೊಟ್ಟು ಸಹಾಯ ಮಾಡಿದ್ದಾರೆ. ಹೀಗಾಗಿ ಅಲ್ಲಿರತಕ್ಕ ಲಕ್ಷಗಟ್ಟಲೆ ರೂಪಾಯಿಗಳು ಪೋಲ್ ಆಗಿವೆ. ಸಹಕಾರ ಮಂತ್ರಿಗಳು ಬಂದಂಥ ಸಂದರ್ಭದಲ್ಲಿ ಖರ್ಚಾದ ಹಣವನ್ನು ನಾನು ಹಾಗೆಯೇ ಬರೆದಿದ್ದೇನೆ ಬೇರೆ ಖರ್ಚುಗಳಿಗೆ ಸುಮಾರು ಒಂದೂವರೆ ಸಾವಿರ ರೂಪಾಯಿಗಳನ್ನು ವಿಧಿನಿಯಮಗನುಸಾರವಾಗಿಯೇ ಕಾಣಿಸಲಾಗಿದೆ.

ಉಪಸಭಾಧ್ಯಕ್ಷರು.—ಮಾನ್ಯ ಸದಸ್ಯರು, ಅವರು ಮಾಡಿರುವುದನ್ನು ಟೀಕೆ ಮಾಡುತ್ತಿದ್ದೀರೊ ಅಥವಾ ಇದರ ಬಗ್ಗೆ ಸಲಹೆಗಳನ್ನು ಏನಾದರೂ ಕೊಡುತ್ತೀರೋ?

ಶ್ರೀ ಎಚ್.ಎ. ನಾರಾಯಣಗೌಡ.—ಈ ನಷ್ಟ ಯಾವ ಕಾರಣಕ್ಕಾಗಿ ಆಯಿತು, ಹೇಗೆ ಆಯಿತು, ಎನ್ನುವುದಕ್ಕೆ ನಾನು ಇವನ್ನೆಲ್ಲಾ ಹೇಳಬೇಕಾಯಿತು. ಹಿಂದೆ ಮಾತನಾಡಿದ ಮಾನ್ಯ ರಂಗನಾಥ ಅವರು ಸಹಕಾರಿ ಆಂದೋಳನ ಮುಳುಗಿ ಹೋಯಿತು, ಇದು ಬರೀ ಪೇಪರ್‌ನಲ್ಲಿದೆ ಎನ್ನುವುದನ್ನು ಹೇಳಿದ್ದಾರೆ. ಇದು ಮುಳುಗಿ ಹೋಗುವುದಕ್ಕೆ ಯಾರು ಕಾರಣರು, ಹೇಗೆ ಮುಳುಗಿ ಹೋಯಿತು ಇದರಲ್ಲಿ ಯಾರ ಕೈವಾಡ ಇದೆ ಎನ್ನುವುದನ್ನು ತಾವು ಸ್ವಲ್ಪ ಯೋಚನೆ ಮಾಡಬೇಕು. ಅಲ್ಲಿ ಪ್ರಾಮಾಣಿಕವಾಗಿ ಕೆಲಸ ಮಾಡತಕ್ಕವರಿಗೆ ಮೇಲಿನವರು ಮೇಲಿಂದ ಮೇಲೆ ತೊಂದರೆ ಕೊಟ್ಟು ಮಂತ್ರಿಗಳ ಮಟ್ಟದಿಂದ ಹಿಡಿದು ಅಧಿಕಾರಿಗಳ ಮಟ್ಟದಿಂದ ಹಿಡಿದು ಜಿಲ್ಲಾ ಬ್ಯಾಂಕ್ ಅಧ್ಯಕ್ಷರ ಮಟ್ಟದವರಿಗೂ ಒತ್ತಡ ಹಾಕಿದರೆ ಅವರು ಏನು ಮಾಡಬೇಕಾಗುತ್ತದೆ. ಇವರುಗಳು ಕೊಟ್ಟಂಥ ಆದೇಶವನ್ನು ಕೆಳಗಿನವರು ಪಾಲನೆ ಮಾಡಬೇಕೇ ಬಿಡಬೇಕೇ, ಪಾಲನೆ ಮಾಡದಿದ್ದರೆ ಯಾವ ಗತಿಯಾಗುತ್ತದೆ ಎನ್ನುವುದನ್ನೂ ಸಹ ಯೋಚನೆ ಮಾಡಬೇಕಾಗಿದೆ. ಯಾವ ರೀತಿಯಾಗಿ ತಪ್ಪು ಮಾಡುತ್ತಾರೆನ್ನುವುದನ್ನು ಹೇಳುವುದಕ್ಕೆ ನಾನು ಈ ಮಾತನ್ನು ಹೇಳಬೇಕಾಗಿದೆ. ಈ ರೀತಿಯಾಗಿ ಕಳೆದ ಹತ್ತು ವರ್ಷಗಳಿಂದ ನಡೆದುಕೊಂಡು ಬಂದಿದೆ. ಇದನ್ನೆಲ್ಲಾ ನಾನು ಹೇಳಬೇಕು ಎಂದು ಇಲ್ಲಿಯವರೆಗೂ ಕಾದು ಕೊಂಡಿದ್ದೆ. ಆದ್ದರಿಂದ ನಾನು ಇನ್ನೂ ಇದರ ಬಗ್ಗೆ ಹೇಳಬೇಕಾಗಿದೆ, ಇದಕ್ಕೆ ಅವಕಾಶ ಬೇಕು ಎಂದು ತಮ್ಮನ್ನು ಕೇಳುತ್ತಿದ್ದೇನೆ. ಬೆಂಗಳೂರು ಬ್ಯಾಂಕ್ ಬಗ್ಗೆ ಮಾನ್ಯ ರಂಗನಾಥ ಅವರು ಬಹಳ ರೋಷಾವೇಶದಿಂದ ಮಾತನಾಡಿದರು. ಅದೇ ಮಾತನ್ನು ನಾನು ಅವರಿಗೆ ತಿರುಗಿ ಹೇಳಬೇಕಾಗಿದೆ. ಕನ್‌ಸ್ಯೂಮರ್ಸ್ ಸೊಸೈಟಿ, ಜನತಾ ಬಜಾರ್‌ನಲ್ಲಿ ಒಂದೂವರೆ ಲಕ್ಷ ರೂಪಾಯಿಗಳ ಮಾಲು ಬೀದಿಯಲ್ಲಿ ಹರಾಜು ಹಾಕಿದರೆ ಯಾರೂ ತೆಗದುಕೊಳ್ಳಲಿಲ್ಲ. ಅಲ್ಲಿ ಅಧಿಕಾರಿ ವರ್ಗ ಇದೆ, ಮಾಜಿ ಮಂತ್ರಿಗಳು ಇದ್ದಾರೆ, ಎಲ್ಲರೂ ಇದ್ದಾರೆ ಅವರ ಪಕ್ಷದವರು ಇದ್ದಾರೆ, ಅಲ್ಲಿ ಒಂದೂವರೆ ಲಕ್ಷ ರೂಪಾಯಿಗಳ ಮಾಲು ಮಾತ್ರ ಉಳಿದಿದೆ. ಜಿಲ್ಲಾ ಬ್ಯಾಂಕ್‌ನ ಷೇರು ಹಣ ಹತ್ತೂವರೆ ಲಕ್ಷ ರೂಪಾಯಿಗಳು ಎಲ್ಲಿ ಹೋಯಿತು? ಹೀಗೆ ಆಗಬಾರದು. ಅಲ್ಲಿ ಯಾರೇ ಇರಲಿ ತಪ್ಪು ಮಾಡಿದರೆ ತಪ್ಪು ಮಾಡಿದ್ದಾರೆ ಎಂದು ಹೇಳಬೇಕಾಗುತ್ತದೆ. ಮಾನ್ಯ ರಂಗನಾಥ್ ಅವರೇ ಇರಲೀ ನಾರಾಯಣಗೌಡರೇ ಇರಲೀ, ಖರ್ಗೆಯವರೇ ಇರಲೀ ತಪ್ಪು ಮಾಡಿದರೆ ತಪ್ಪೇ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ತಾವು ಹೀಗೆ ಹೇಳುವುದಾದರೆ ಇದರಲ್ಲಿ ಏನಾದರೂ ಅರ್ಥ ಇರುತ್ತದೆ.

ಶ್ರೀ ಎಚ್.ಎ. ನಾರಾಯಣ ಗೌಡ.—ನೀವು ಮಾಡಿರುವುದು ನಾವು ಮಾಡಿರುವುದು ಎಂದಲ್ಲ. ಕಳೆದ ೬-೭ ವರ್ಷಗಳಲ್ಲಿ ಏನೇನು ಆಗಿದೆ ಎನ್ನುವ ಕಥೆಯನ್ನು ನಾನು ಹೇಳುತ್ತಿದ್ದೇನೆ.

ಶ್ರೀ ಎಂ. ಮಲ್ಲಿಕಾರ್ಜುನ ಖಾರ್ಗೆ.— ಆಗ ನಿಮಗೆ ನಾಚಿಕೆ ಬರಲಿಲ್ಲ, ನಿಮ್ಮ ಮಂತ್ರಿಗಳಿಗೆ ನಾಚಿಕೆ ಬರಲಿಲ್ಲ.

ಒಬ್ಬ ಸದಸ್ಯರು.— ನಿಮ್ಮ ಕರ್ಮಕಾಂಡವನ್ನು ಹೇಳುತ್ತಾ ಇದ್ದಾರೆ.

ಶ್ರೀ ಹೆಚ್.ಎ. ನಾರಾಯಣಗೌಡ.— ನಾನು ಹಿಂದಿನದನ್ನು ಕಂಪೇರ್ ಮಾಡಿ ಹೇಳುತ್ತಿದ್ದೇನೆ, ಇದನ್ನು ಹೇಳುವುದಕ್ಕೆ ನಾನು ೧೦ ವರ್ಷಗಳಿಂದ ಕಾಯ್ದುಕೊಂಡಿದ್ದು.

ಶ್ರೀ ಪಂಪಾಪತಿ.— ಮಾನ್ಯ ಅಧ್ಯಕ್ಷರೆ. ಈವತ್ತು ಒಂದು ದಿವಸ ಪೂರ್ತಿ ಅವರು ಮಾತನಾಡಲಿ ಆಮೇಲೆ ನಾಳೆ ನಮಗೆ ಕೂಡ ಎರಡೆರಡು ಗಂಟೆ ಅವಕಾಶ ಕೊಡಿ. ಏಕೆಂದರೆ, ಢಣ ಢಣ ಗಂಟೆ ಹೊಡೆಯುತ್ತೀರಿ, ನಾವು ಏನು ಮಾಡುವುದು ಇಲ್ಲಿ?

ಶ್ರೀ ಹೆಚ್. ಎ. ನಾರಾಯಣಗೌಡ.— ಸನ್ಮಾನ್ಯ ಅಧ್ಯಕ್ಷರೆ, ೬೪ನೇ ನಿಯಮದ ಪ್ರಕಾರ ಎನ್‌ಕ್ವೈರಿ ಇನ್‌ಸಿಸ್ಟ್ ಮಾಡಿದರು ಎಂದರೆ ಮಾನ್ಯ ರಂಗನಾಥ್ ಅವರಿಗೆ ಸಿಟ್ಟು ಬಂತು, ಹಾಗೆ ಮಾಡಬಾರದು.

ಶ್ರೀ ಕೆ. ಹೆಚ್. ರಂಗನಾಥ್.— ನನಗೆ ಸಿಟ್ಟು ಬಂದಿಲ್ಲ, ನನಗೆ ಏಕೆ ಸಿಟ್ಟು ಬರುತ್ತದೆ, ಅದು ಮಾಡಬಾರದ ಕೆಲಸ ಎಂದು ಹೇಳಿದೆ ಅಷ್ಟೆ. ನೋಡಿ ಮಾಡಬೇಕು ಎಂದು ಹೇಳಿದೆ.

ಶ್ರೀ ಹೆಚ್. ಎ. ನಾರಾಯಣಗೌಡ.— ಅದೇ ಒಂದು ಸನ್ನಿವೇಶದಲ್ಲಿ ತುರ್ತುಪರಿಸ್ಥಿತಿಯ ಕಾಲದಲ್ಲಿ ಅಲ್ಲಿ ಗಾಡಿ ೫ ಸಾವಿರ ಚಿಲ್ಲರೆ ರೂಪಾಯಿಗಳಿಗೆ ರಿಪೇರಿಗೆ ಬಂತು. ನಾಲ್ಕು ಸಾವಿರ ಚಿಲ್ಲರೆ ಇನ್‌ಷೂರೆನ್ಸ್‌ನಿಂದ ಬಂತು, ಬ್ಯಾಂಕ್‌ನಿಂದ ಖರ್ಚಾಗಿದ್ದು ಒಂದೂಕಾಲು ಸಾವಿರ. ೧೨೬(ಎ) ಪ್ರಕಾರ ಇದೂ ಒಂದು ನನ್ನ ಮೇಲೆ ಚಾರ್ಜ್. ಇದು ವಿಚಿತ್ರವಾದ ಚಾರ್ಜ್ ಇದೆ. You have attended the All India Congress Committee meeting which is a purely political meeting, for which you have spent the money from the Bank. ಸ್ವಾಮಿ ಇಂಥಾದ್ದು ಮಾಡಬಾರದು, ಯಾವತ್ತೂ ಯಾವ ಅನ್ಯಾಯದ ಮಾತುಗಳನ್ನು ಹೇಳಬಾರದು, ತಾವು ಇಂತಹ ಅಪ್ರಾಮಾಣಿಕವಾದ ಮಾತುಗಳನ್ನು ಹೇಳಬಾರದು. I have attend d the All India Sixth Co-operative Congress meeting. ತುರ್ತು ಪರಿಸ್ಥಿತಿ, ಬಾಯಿ ಬಿಡುವ ಹಾಗಿಲ್ಲ, ಫಂಡಮೆಂಟಲ್ ರೈಟ್ಸ್ ನನಗೆ ಇಲ್ಲ. ಇದನ್ನು ಪ್ರೂವ್ ಮಾಡಲಿ, ನಾನು ರಾಜಿನಾಮೆ ಕೊಡುತ್ತೇನೆ, ಇಲ್ಲದೇ ಹೋದರೆ ಅವರು ಕೊಡುತ್ತಾರೆಯೇ? ಆಗ ಸಂಬಂಧಪಟ್ಟ ಮಂತ್ರಿಗಳಾಗಿದ್ದವರು ಕೊಡುತ್ತಾರೆ. Sixth Co—operative Congress Meeting for which I have been labelled that I have attended a political meeting in Delhi. ಇವರ ನಾಯಕಿ ಶ್ರೀಮತಿ ಇಂದಿರಾ ಗಾಂಧಿಯವರು ಇನ್‌ವೈಟ್ ಮಾಡಿದ್ದರು, ಸಹಕಾರ ಇಲಾಖೆಯವರು ಪರ್ಮಿಷನ್ ಕೊಟ್ಟಿದ್ದರು, ಅದು ಒಂದು ಚಾರ್ಜ್ ನನ್ನ ಮೇಲೆ. ಇನ್ನೊಂದು ಚಾರ್ಜ್ ಏನೆಂದರೆ, ನೀನು ಸಿಬ್ಬಂದಿ ಮೇಲೆ ಕ್ರಮ ತೆಗೆದುಕೊಂಡಿದ್ದೀಯ, ನಿನಗೆ ಹಕ್ಕಿಲ್ಲ ಎಂಬ ಚಾರ್ಜ್. ಜಿಲ್ಲಾ ಬ್ಯಾಂಕ್ ಅಧ್ಯಕ್ಷರಿಗೆ ಬೈಲಾ ಪ್ರಕಾರ ಅವಕಾಶವಿದೆ. ಆದರೂ ಈ ರೀತಿ ಕ್ರಮ ತೆಗೆದುಕೊಳ್ಳುವುದು ತಪ್ಪು ಎಂದು ಹೇಳಿದರು. ಹೀಗೆ ಯಾರೇ ಹೇಳಲಿ, ಅವರ ಆತ್ಮಶೋಧನೆ ಮಾಡಿಕೊಳ್ಳಲಿ. ಆಮೇಲೆ ಸ್ಟಡಿ ಟೂರ್ ಹೋಗಿದ್ದೆವು. ೧೧೮೭ ರೂಪಾಯಿಗಳು ಖರ್ಚು ಹಾಕಿದ್ದೀಯ ಎಂದು ಹೇಳಿದರು. ಪಾಪ ಎಲ್ಲಾ ಡೈರೆಕ್ಟರುಗಳು ಹೋಗಿದ್ದರು. ೧೧೮೭ ರೂಪಾಯಿಗಳು ಖರ್ಚು ಹಾಕಿದ್ದೆವು. ನೀವೂ ಹೋಗಿ ಬನ್ನಿ ಎಂದು ಹೇಳಿದರು. ಇವರು ಪಾಪ ಏನಾದರೂ ಹುಡುಕುತ್ತಾ ಇದ್ದರು, ಮೊಸರಿನಲ್ಲಿ ಕಲ್ಲು ಹುಡುಕಿದ ಹಾಗೆ. ೧೧೮೭ ರೂಪಾಯಿ ಖರ್ಚು ಹಾಕಿದ್ದೀಯ, ಇದು ಬೈಲಾ ಪ್ರಕಾರ ಕಾನೂನುಬಾಹಿರವಾದದ್ದು ಎಂದು ಹೇಳಿ, ಡೈರೆಕ್ಟರುಗಳೆಲ್ಲರನ್ನೂ ಬಿಟ್ಟರು, ನನ್ನನ್ನು ಹಿಡಿದುಕೊಂಡರು ನೀನು ತಪ್ಪಾಗಿ ನಡೆದುಕೊಂಡಿದ್ದೀಯ ಎಂದು ಚಾರ್ಜ್ ಮಾಡಿದರು. ಈ ಒಂದು ವ್ಯವಹಾರ ಗೊತ್ತಾಗುವುದಿಲ್ಲ, ಜಿಲ್ಲಾ ಬ್ಯಾಂಕ್ ಅಧ್ಯಕ್ಷರಿಗೆ ಹೇಗೆ ಗೊತ್ತಾಗುತ್ತದೆ. ಒಂದೂವರೆ ಲಕ್ಷ ರೂಪಾಯಿಗಳು ಕಲೆಕ್ಷನ್ ಮಾಡುವುದಕ್ಕೆ ಒಂದೂವರೆ ವರ್ಷವಾದರೆ ಗೊತ್ತಾಗುವುದಿಲ್ಲ. ಅವರು ಪ್ರಾಮಾಣಿಕರಾದ ಸಹಕಾರಿಯಾಗಿದ್ದರೆ ಆ ಮಾತನ್ನು ಆಡಿದ್ದರೇ ಎಂದು ಆತ್ಮಶೋಧನೆ ಮಾಡಿಕೊಳ್ಳಲಿ. ಅವರು ೩,೫೦೦ ರೂಪಾಯಿಗಳು

ಅಡ್ವಾನ್ಸ್ ಟಿ.ಎ. ಡ್ರಾ ಮಾಡಿದರು. ಅವರು ಆರೀತಿ ಮಾಡಿ ನಮಗೆ ಪಾಠ ಹೇಳುವುದಲ್ಲ. ೩೫೦೦ ಗಳನ್ನು ಡ್ರಾ ಮಾಡಿದ್ದರ ಬಗ್ಗೆ ರಿಸರ್ವ್ ಬ್ಯಾಂಕ್ ಆಫ್ ಇಂಡಿಯಾದವರ ಹತ್ತಿರ ವಿಸಾಟಿಂಗ್ ಮಾಡಿ ಕೊಳ್ಳಬೇಕಾಗಿತ್ತು. ನಾನು ಮತ್ತು ಇನ್ನೊಬ್ಬ ಡೈರೆಕ್ಟರ್ ಅವರು ಇದು ಅಡ್ಜಸ್ಟ್ ಆಗಿಲ್ಲ ಎಂದು ಬಿಲ್ ಕಳಿಸಿದೆವು, ಅಡ್ಜಸ್ಟ್ ಆಗಿಲ್ಲ ಎಂದು ಹೇಳಿದ್ದು ಅಪರಾಧವಾಯಿತು. ಕೇವಲ ೩೫೦೦ ರೂಪಾಯಿಗಳಿಗೆ ಅಪರಾಧ ಎಂದು ಹೇಳುವಂಥ ವ್ಯಕ್ತಿ ಸಹಕಾರ ಮಂತ್ರಿಯಾಗಿದ್ದವರು, ಅವರೇ ಜವಾಬ್ದಾರರು, ಒಂದೂವರೆ ಲಕ್ಷದ ಬಗ್ಗೆ ಹೇಳುವುದಕ್ಕೆ ಹೋದರೆ, ಬೆಂಗಳೂರು ಜಿಲ್ಲಾ ಬ್ಯಾಂಕಿನಲ್ಲಿ ೧೦–೧೨ ಲಕ್ಷ ರೂಪಾಯಿಗಳ ಅವ್ಯವಹಾರ ಬರುತ್ತದೆ. ನಮ್ಮದು ಕೇವಲ ಒಂದು ಸಾವಿರ ರೂಪಾಯಿಗಳು ಬರುತ್ತದೆ, ಅದು ಅವ್ಯವಹಾರ ಎಂದು ಹೇಳಿ ಮಾಡಿದರು. ತುರ್ತು ಪರಿಸ್ಥಿತಿ ಸನ್ನಿವೇಶದಲ್ಲಿ ನನ್ನನ್ನು ೧೫(ಎ) ಪ್ರಕಾರ ೩ ವರ್ಷಗಳ ಕಾಲ ಡಿಬಾರ್ ಮಾಡಿದರು. ಅಂಥಾ ದೊಡ್ಡ ಅಪರಾಧ ನಾನೇನೂ ಮಾಡಿಲ್ಲ. ಅಂತಹ ಅನ್ಯಾಯ ಮಾಡಿಲ್ಲ, ಅಕ್ರಮ ಮಾಡಿಲ್ಲ. ಅಂತಹ ವ್ಯಕ್ತಿಗಳು ಇವತ್ತಿನದಿವಸ ನಮ್ಮ ಮಂತ್ರಿಗಳಿಗೆ ನ್ಯಾಯವಾಗಿ ನಡೆಯತಕ್ಕಂಥ ಬೋಧನೆ ಮಾಡುವುದಕ್ಕೆ ಬಂದಿದ್ದಾರೆ, ಆ ರೀತಿ ಹೇಳತಕ್ಕ ನೈತಿಕ ಶಕ್ತಿ ಅವರಿಗೆ ಇದೆಯೇ ಎನ್ನತಕ್ಕ ಮಾತನ್ನು ಕೇಳುತ್ತೇನೆ, ನಿಮಗೆ ಅನೈತಿಕ ಶಕ್ತಿ ಇದೆ. ಕೊನೆಗೆ ಹಿರಿಯ ಸಹಕಾರಿ ನಮ್ಮ ಸ್ನೇಹಿತರು ಶ್ರೀಮಾನ್ ಬೈರೇಗೌಡರು ಅಲ್ಲಿಂದ ಬಂದು ಒಂದು ಮನವಿ ಕೊಟ್ಟರು, ಆ ಮನವಿ ಬಗ್ಗೆ ಕೇಳತಕ್ಕಂಥ ಸೌಜನ್ಯ ಕೂಡ ಇಲ್ಲದಂಥ ವ್ಯಕ್ತಿ. ತುರ್ತು ಪರಿಸ್ಥಿತಿ ಸನ್ನಿವೇಶದಲ್ಲಿ ನನ್ನನ್ನು ೩ ವರ್ಷಗಳ ಕಾಲ ಇಳಿಸಿಬಿಟ್ಟರು. ಅಂತಹ ಅನ್ಯಾಯ, ಅಕ್ರಮ ಮಾಡಿದಂಥ ವ್ಯಕ್ತಿಗಳಿಗೆ ನ್ಯಾಯವಾಗಿ ಕ್ರಮ ತೆಗೆದುಕೊಳ್ಳತಕ್ಕ ಖಂಡನೆ ಮಾಡತಕ್ಕಂಥ ನೈತಿಕ ಶಕ್ತಿ ಇಲ್ಲ, ಆ ಶಕ್ತಿ ಅವರಿಗೆ ಖಂಡಿತ ಬರುವುದಿಲ್ಲ ಎಂದು ಹೇಳುತ್ತೇನೆ.

ಇನ್ನು ಬ್ಯಾಟರಾಯನಪುರದ ಘಟನೆ ಇದೆ, ಅಲ್ಲಿ ಆಗಬಾರದ ಅನ್ಯಾಯಗಳ, ಅಕ್ರಮಗಳ ಪಟ್ಟಿ ಇದೆ. ಅಲ್ಲಿರತಕ್ಕ ಕೆಲವರು ಸೇರಿಕೊಂಡು ಲಕ್ಷಾಂತರ ರೂಪಾಯಿಗಳನ್ನು ಲೂಟಿ ಮಾಡಿದ್ದಾರೆ. ಅಂಥವರನ್ನು ಭೇಷ್ ಎಂದು ಅವರ ಬೆನ್ನು ತಟ್ಟುತ್ತಾರಲ್ಲ ಆಗ ಸಹಕಾರಿ ಮಂತ್ರಿಗಳಾಗಿದ್ದವರು, ಇದನ್ನು ನೋಡಿದರೆ ನನಗೆ ದುಃಖವಾಗುತ್ತದೆ, ಸಿಟ್ಟು ಬರುವುದಿಲ್ಲ. ರಾಜಕೀಯಕ್ಕೋಸ್ಕರ ಅಂತಹ ವ್ಯಕ್ತಿಗಳಿಗೆ ಬೆನ್ನು ತಟ್ಟುವುದಾದರೆ ಈ ರೀತಿ ಮೊಸಳೆ ಕಣ್ಣೀರು ಏತಕ್ಕೆ ಸುರಿಸಬೇಕು, ಈ ನಾಟಕ ಬೇಡ, ಇದಕ್ಕೆ ಪರದೆ ಎಳೆಯಬೇಕು. ಈ ರೀತಿ ರಾಜಕೀಯ ನಾಟಕ ಆಡುತ್ತಾರೆ, ಈ ಕಡೆ ಬಂದಾಗ ಒಂದು ಮಾತು, ಆ ಕಡೆ ಹೋದಾಗ ಒಂದು ಮಾತು. ಇಂತಹವರಿಗೆ ಬಡವರ ಮೇಲೆ ಕನಿಕರ, ಸಹಕಾರಿಗಳ ಮೇಲೆ ಕನಿಕರ, ಎಲ್ಲರ ಮೇಲೆ ಕನಿಕರ ಏಕೆ? ಈ ಕನಿಕರ ಏಕೆಂದರೆ, ಮತ್ತೆ ಇಲ್ಲಿ ಬಂದು ಕುಳಿತುಕೊಳ್ಳುವುದಕ್ಕೆ ಅಷ್ಟೆ, ಇನ್ನೇನೂ ಇಲ್ಲ. ಮಾನ್ಯ ಅಧ್ಯಕ್ಷರೆ, ನಾನು ಹೆಚ್ಚಿಗೆ ಟೈಂ ತೆಗೆದು ಕೊಳ್ಳುವುದಿಲ್ಲ, ಇನ್ನು ೧೦ ನಿಮಿಷ ಅವಕಾಶ ಕೊಟ್ಟರೆ ಒಳ್ಳೆಯದು.

ಶ್ರೀ ಎಂ. ವೀರಪ್ಪಮೊಯಿಲಿ.— ಇಲ್ಲಿಯವರೆಗೆ ಅವರ ಕತೆ ಹೇಳಿದರು, ಈಗ ದೇಶದ ಕತೆ ಹೇಳುತ್ತಾರೆ.

ಶ್ರೀ ಹೆಚ್. ಎ. ನಾರಾಯಣಗೌಡ.— ನಿಯಮ ೭೪ರ ಪ್ರಕಾರ ಎನ್‌ಕ್ವೈರಿ ಕಂಡಕ್ಟ್ ಮಾಡಿದ್ದಕ್ಕೆ ಅವರಿಗೆ ಸಿಟ್ಟು ಬಂದರೆ ಸಂತೋಷ, ಬರಲೇಬೇಕು. ಆರೀತಿ ಅವರೇ ನಡೆದುಕೊಂಡಿದ್ದರೆ ನಿಜವಾಗಿಯೂ ಅವರನ್ನು ಹೊಗಳುತ್ತಿದ್ದೆವು. ಆದರೆ ಅವರು ಅಧಿಕಾರದಲ್ಲಿದ್ದಾಗ ಸಹಕಾರಿಗಳ ಮೇಲೆ ಮಾಡಬಾರದ್ದು ಮಾಡಿ, ಈಗ ಬೋಧನೆ ಮಾಡುವುದಕ್ಕೆ ಬಂದರೆ, ಬಹುಶಃ ಅದು ಯಾವರೀತಿ ಆಗುತ್ತದೆ ಎಂದರೆ, ಒಬ್ಬಳು ಅತ್ತೆ ಇದ್ದಳಂತೆ.

ಶ್ರೀ ಕೆ.ಹೆಚ್. ರಂಗನಾಥ್.— ನಾನು ಮಾಡಬಾರದು ಏನು ಮಾಡಿದ್ದೇನೆ ಎನ್ನುವುದನ್ನು ಈ ಸಭೆಯ ಮುಂದೆ ಹೇಳಬೇಕು. ಮಾಡಬಾರದು ಮಾಡುವುದು ಎಂದರೆ ಏನು? He can defend himself.

SRI. H.A. NARAYANA GOWDA.— I am not yielding.

SRI K. H. RANGANATH.— Let the concerned file in respect of that particular gentlemen be placed on the table of the House. Let the few members of this August house look into the file. Let that file be placed on the table of the House.

ಸಹಕಾರಿ ಇಲಾಖೆಯಲ್ಲಿ ಬಹಳ ದೊಡ್ಡದಾದ ಒಂದು ಕಡತವಿದೆ ; ಅದನ್ನು ಇಲ್ಲಿ ತಂದು ಇಡಿ; ಅದರ ಬಗ್ಗೆ ಚರ್ಚೆ ಮಾಡೋಣ.

ಶ್ರೀ ಎಚ್. ಎ. ನಾರಾಯಣ ಗೌಡ.—ಅದರ ಬಗ್ಗೆ ಸುಧೀರ್ಘವಾಗಿ ಚರ್ಚೆ ಮಾಡುವುದಕ್ಕೆ ತಯಾರಿದ್ದೇನೆ, ಚರ್ಚೆ ಮಾಡೋಣ, ತಮ್ಮ ಸವಾಲನ್ನು ಅಂಗೀಕರಿಸುತ್ತೇನೆ.

೩–೦೦ ಪಿ. ಎಂ.

ಶ್ರೀ ಕೆ. ಎಚ್. ರಂಗನಾಥ್.—ಫೈಲನ್ನು ತರಿಸಿ ಇಟ್ಟುಕೊಳ್ಳಿ, ಇಲ್ಲಿ ಚರ್ಚೆ ಮಾಡುವುದಕ್ಕೆ ಆಗದಿದ್ದರೆ ಪಿ.ಎ.ಸಿ. ಕಮಿಟಿಯಲ್ಲಿ ಅಥವಾ ಇನ್ನು ಯಾವುದಾದರೂ ಕಮಿಟಿಗೆ ರೆಫರ್ ಮಾಡಿ ಅಲ್ಲಿ ಕೂತು ಚರ್ಚೆ ಮಾಡೋಣ...

(ಗೊಂದಲ ಗಲಾಟೆ...)

ಶ್ರೀ ಎಚ್. ಎ. ನಾರಾಯಣಗೌಡ.—ಲಕ್ಷಾಂತರ ರೂಪಾಯಿಗಳನ್ನು ನುಂಗುವವರು ನುಂಗುತ್ತಿದ್ದರೆ ನೋಡಿಕೊಂಡು ಕೂರಬೇಕಾಗಿತ್ತೇ ? ಆದುದರಿಂದ ಮಾನ್ಯ ಮಂತ್ರಿಗಳವರು ಏನು ಮಾಡಿದ್ದಾರೆ ಅದು ಸರಿಯಾಗಿಯೇ ಇದೆ. ತಪ್ಪು ಮಾಡಿದ್ದರೆ ತಪ್ಪೇ ಎಂದು ಖಂಡಿಸಬೇಕಾಗುತ್ತದೆ ಒಳ್ಳೆಯನ್ನು ಮಾಡಿದರೆ ಮೆಚ್ಚಬೇಕಾಗುತ್ತದೆ. ಮಾನ್ಯ ಶ್ರೀ ಜಾಲಪ್ಪನವರು ಹುಟ್ಟು ಸಹಕಾರಿ ಗಳು... ಅವರು ಇನ್ನೊಬ್ಬರಿಂದ ಸಹಕಾರ ರಂಗದ ಬಗ್ಗೆ ಪಾಠ ಹೇಳಿಸಿಕೊಳ್ಳಬೇಕಾಗಿಲ್ಲ...

ಶ್ರೀ ಕೆ. ಎಚ್. ರಂಗನಾಥ್.—ಯಾರೂ ಹುಟ್ಟು ಸಹಕಾರಿಗಳಾಗುವುದಿಲ್ಲ, ಮೆಂಬರ್ ಶಿಪ್ ಫೀ ೧೧ ರೂಪಾಯಿಗಳನ್ನು ಕೊಟ್ಟ ಮೇಲೆಯೇ ಮತ್ತು ಸದಸ್ಯರಾದ ಮೇಲೆಯೇ ಸಹಕಾರಿಗಳಾಗುವುದು.

ಶ್ರೀ ವಿ. ಧನಂಜಯ ಕುಮಾರ್.—ಹುಟ್ಟು ಸಹಕಾರಿಗಳು ಎಂದು ಹೇಳಿದರು ಸಹಕಾರ ಸಂಘದಲ್ಲಿಯೇ ಅವರು ಹುಟ್ಟಿದರೇ ?

ಶ್ರೀ ಎಚ್. ಎ. ನಾರಾಯಣಗೌಡ.—ಅಧ್ಯಕ್ಷರೇ ಇಷ್ಟು ಮಾತನಾಡಲು ಅವಕಾಶ ಕೊಟ್ಟಿದ್ದ ಕ್ಕಾಗಿ ತಮಗೆ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

† ಶ್ರೀ ಕೆ. ರಾಮಭಟ್ (ಪುತ್ತೂರ್).—ಸನ್ಮಾನ್ಯ ಅಧ್ಯಕ್ಷರೇ, ಈ ಸಹಕಾರ ಇಲಾಖೆಯ ಬೇಡಿಕೆಯ ಮೇಲೆ ನಾಲ್ಕು ಮಾತುಗಳನ್ನು ಆಡಲು ಬಯಸುತ್ತೇನೆ. ಇವತ್ತು ಸಹಕಾರೀ ಚಳುವಳಿ ಏನಾದರೂ ಬದುಕಿ ಉಳಿದಿರಬೇಕಾಗಿದ್ದರೆ ಅದು ದೈವದ ಸಹಾಯದಿಂದಲೇ ಹೊರತು ಮನುಷ್ಯ ಪ್ರಯತ್ನದಿಂದ ಅಲ್ಲವೆಂದು ನನಗೆ ಅರ್ಥವಾಗುತ್ತಿದೆ. ಏತಕ್ಕೆಂದರೆ ಕೆಲವರು ಇದನ್ನು ತಮ್ಮ ಪಿತ್ರಾರ್ಜಿತ ಸ್ವತ್ತು ಎನ್ನುವ ರೀತಿಯಲ್ಲಿ ನಡೆದುಕೊಳ್ಳುತ್ತಿದ್ದಾರೆ. ಶ್ರೀ ಮಲ್ಲಿಕಾರ್ಜುನ ಖಾರ್ಗೆ ಯವರು ನಾವು ಒಟ್ಟಿಗೆ ಇದ್ದವರು. ಆದರೆ ಅವರು ತಮ್ಮ ಸಂಬಂಧ ಸಹಕಾರಿ ಚಳುವಳಿ ಬಗ್ಗೆ ಇದ್ದುದನ್ನು ಹೇಳಿಕೊಂಡಿದ್ದಾರೆ, ಎಂದರೆ ಇಷ್ಟೆಲ್ಲಾ ಅನರ್ಥ ಆಗಬೇಕಾಗಿದ್ದರೆ ಅವರೆಲ್ಲಾ ಸೇರಿ ಮಾಡಿ ದ್ದಾರೆ ಎಂದು ಹೇಳುವಂಥಾದ್ದು ಸ್ಪಷ್ಟವಾಗುತ್ತದೆ.

ಶ್ರೀ ಎಂ. ಮಲ್ಲಿಕಾರ್ಜುನ ಖಾರ್ಗೆ.—ನಾನು ಆ ಅರ್ಥದಲ್ಲಿ ಹೇಳಲಿಲ್ಲ...

ಶ್ರೀ ಕೆ. ರಾಮಭಟ್.—ನಾವು ಹೊಸದಾಗಿ ಬಂದಿದ್ದೆವು, ಅದರಲ್ಲಿ ನಾವು ಪಾಲುದಾರರು ಆಗಿರಲಿಲ್ಲ, ಶಾಸನ ಸಭೆಯ ಸದಸ್ಯರಾಗಿದ್ದೆವು ಮಾತ್ರ...

ಶ್ರೀ ಎಂ. ಮಲ್ಲಿಕಾರ್ಜುನ ಖಾರ್ಗೆ.—ಸಹಕಾರೀ ಕ್ಷೇತ್ರ ಎಂದು ಸ್ವತಂತ್ರವಾಗಿ ನಾವು ಇದ್ದರೂ ಸಹ ಸುಮ್ಮನೇ ನೋಡುತ್ತಿದ್ದವರು, ನಾವು ಆದರೆ ಅಲ್ಲಿ ನಿಜವಾಗಿ ಕೆಲಸ ಮಾಡುವವರು ಬೇರೆ ಇದ್ದರು ಎಂದು ಹೇಳಿದೆ...

---

† ಈ ಚಿನ್ಹೆ ಸಂಬಂಧಪಟ್ಟ ಸದಸ್ಯರು ಟಿಪ್ಪಣಿ ಅಥವಾ ಭಾಷಣವನ್ನು ಪರಿಷ್ಕರಿಸಿಲ್ಲ ಎಂದು ಸೂಚಿಸುತ್ತದೆ.

ಶ್ರೀ ಕೆ. ರಾಮಭಟ್.—ಏತಕ್ಕೆ ಈ ಮಾತನ್ನು ನಾನು ಹೇಳುತ್ತಿದ್ದೇನೆ ಎಂದರೆ ಈ ಹಿನ್ನೆಲೆ ನೋಡಿದರೆ ಅರ್ಥವಾಗುತ್ತದೆ, ಮಾನ್ಯ ಸಹಕಾರ ಸಚಿವರು ಕೆಲವು ದಿವಸಗಳ ಹಿಂದೆ ಒಂದು ಪತ್ರಿಕಾ ಹೇಳಿಕೆಯನ್ನು ಕೊಟ್ಟಿದ್ದಾರೆ. ಅದರಲ್ಲಿ ಅವರು ಏನು ಹೇಳಿದ್ದಾರೆ ಎಂದರೆ ೧೫೦೦ ಕೋಟಿ ರೂಪಾಯಿಗಳ ವ್ಯವಹಾರ ನಡೆಯುತ್ತಿರುವಾಗ ಸುಮಾರು ೫೦೦ ಕೋಟಿ ರೂಪಾಯಿಗಳ ದುರ್ವ್ಯವಹಾರ ನಡೆದರೆ ಅದು ಏನೂ ದೊಡ್ಡ ಸಂಗತಿ ಅಲ್ಲವೆಂದು ಹೇಳಿದ್ದಾರೆ. ಈ ರೀತಿಯ ಮಾತನ್ನು ಮಾನ್ಯ ಸಚಿವರೇ ಹೇಳಿದರೆ ಜನಗಳು ಏನೆಂದು ತಿಳಿದುಕೊಂಡಾರು ? ತಪ್ಪು ಮಾಡುವವರಿಗೆ ತಿನ್ನು, ಲೂಟಿ ಹೊಡೆಯುವನಿಗೆ ಲೂಟಿ ಹೊಡೆಯೆಂದು ಹೇಳುವಂಥ ಅರ್ಥ ಬರುವುದಿಲ್ಲವೇ ? ಇದರ ಬಗ್ಗೆ ಮಾನ್ಯ ಮಂತ್ರಿಗಳವರು ಈ ರೀತಿಯಾದ ಅನುವಾದ ಹೇಳಿಕೆಯನ್ನು ಕೊಟ್ಟಿರುವುದನ್ನು ನೋಡಿದರೆ ನಮಗೆ ನಿಜವಾಗಿಯೂ ಬಹಳ ದುಃಖವಾಗುತ್ತದೆ. ಮಾನ್ಯ ಸಚಿವರು ಈ ರೀತಿಯಾದ ಹೇಳಿಕೆಯನ್ನು ಕೊಟ್ಟಿದ್ದಾರೆಂದು ಪತ್ರಿಕೆಗಳಲ್ಲಿ ಬಂದಿದೆ ಆದರೆ ಅವರು ಆ ರೀತಿಯಾದ ಹೇಳಿಕೆಯನ್ನು ಕೊಟ್ಟಿದ್ದಾರೋ ಇಲ್ಲವೋ ಎಂಬುದನ್ನು ಅವರ ಉತ್ತರದಲ್ಲಿ ತಿಳಿಸಬೇಕು. ಇಲ್ಲದಿದ್ದರೆ ಈ ರೀತಿಯಾದ ಅವರ ಹೇಳಿಕೆಯಿಂದ ನಮ್ಮ ಸಹಕಾರ ಚಳುವಳಿಯ ದಿಕ್ಕನ್ನೆ ಬದಲಾಯಿಸಿ ಯಾರೋ ಕೆಲವು ಜನ ಹಿತಾಶಕ್ತಿಗಳು ವ್ಯಕ್ತಿಗಳು ಇದನ್ನು ತಮ್ಮದಾಗಿ ಮಾಡಿಕೊಂಡು ಸರ್ಕಾರದ ಹತೋಟಿ ಇದರ ಮೇಲೆ ಇಲ್ಲವೆಂದು ಹೇಳುವಂಥಾದ್ದು ಸ್ಪಷ್ಟವಾಗುತ್ತದೆ. ಈ ಸಹಕಾರಿ ಚಳುವಳಿ ಪ್ರಾರಂಭವಾಗಿ ಇಷ್ಟು ವರ್ಷಗಳಾದರೂ ನೀವು ಸಾಧನೆ ಮಾಡಿದ್ದಾದರೂ ಏನು ? ಇದರಲ್ಲಿ ಏನಾದರೂ ಲೋಪವಾಗಿದೆಯೇ ? ಇವತ್ತು ರೈತನ ಸಾಮರ್ಥ್ಯವನ್ನು ಹೆಚ್ಚು ಮಾಡುವಂಥ ಕೆಲಸವಾಗಿಲ್ಲ. ಅವನಿಗೆ ನ್ಯಾಯವಾದ ಬೆಲೆ ಏನು ಸಿಗಬೇಕಾಗಿತ್ತೋ ಅದು ಸಿಗುತ್ತಿಲ್ಲ. ಗ್ರಾಹಕರಿಗೂ ನ್ಯಾಯವಾದ ಬೆಲೆಯಲ್ಲಿ ಅಗತ್ಯ ವಸ್ತುಗಳು ಸಿಗುತ್ತಿಲ್ಲ. ೩೦-೬-೧೯೮೩ ರೊಳಗೆ ಹಿಂದಿನ ಅಸಲನ್ನು ಸಂದಾಯ ಮಾಡಿದವರಿಗೆ ಬಡ್ಡಿ ಮನ್ನಾ ಮಾಡಲಾಗುತ್ತದೆಂದು ಘೋಷಣೆ ಮಾಡಿದ್ದೀರಿ ಆ ರೀತಿಯಾಗಿ ಘೋಷಣೆ ಮಾಡಬೇಕಾದಂಥ ಸ್ಥಿತಿ ಏತಕ್ಕೆ ನಿರ್ಮಾಣವಾಯಿತು ? ನೀವು ನಮ್ಮ ರೈತರನ್ನು ಶಕ್ತಿ ಸಾಮರ್ಥರನ್ನಾಗಿ ಮಾಡುವಲ್ಲಿ ಸಂಪೂರ್ಣವಾಗಿ ವಿಫಲರಾಗಿದ್ದೀರಿ ಎನ್ನುವುದು ಅರ್ಥವಾಗುತ್ತಿದೆ. ಹಿಂದೆ ಶ್ರೀ ಗುಂಡೂರಾಯರ ಸರ್ಕಾರ ಇದ್ದಾಗ ಅನೇಕ ರಿಯಾಯಿತಿಗಳನ್ನು ಘೋಷಣೆ ಮಾಡಬೇಕಾದ ಪರಿಸ್ಥಿತಿ ಬಂದಿತ್ತು. ಈ ರೀತಿಯಾಗಿ ರೈತರಿಗೆ ಅನೇಕ ರಿಯಾಯಿತಿಗಳನ್ನು ಕೊಡಬೇಕಾಗಿ ಬರುವಂಥ ಸ್ಥಿತಿ ಏತಕ್ಕೆ ನಿರ್ಮಾಣವಾಯಿತು ? ಇವತ್ತು ಸಹಕಾರಿ ಸಾಲವನ್ನು ಪಡೆದಂಥ ವ್ಯಕ್ತಿ ಅದನ್ನು ನಿಜವಾಗಿಯೂ ಉಪಯೋಗ ಮಾಡಿಕೊಳ್ಳುತ್ತಿದ್ದಾನೆಯೇ ಎನ್ನುವುದೇ ಮುಖ್ಯವಾದ ಪ್ರಶ್ನೆ. ಎರಡನೆಯದಾಗಿ ಹಾಗೆ ಉಪಯೋಗ ಮಾಡಿದಂಥ ವ್ಯಕ್ತಿ ಯಾವ ಕಾರಣದಿಂದ ಆತನ ಬಡತನ ಹೆಚ್ಚಾಯಿತು ? ಒಂದು ಸಾವಿರ ಸಾಲವನ್ನು ಪಡೆದವನು ಮುಂದಿನ ವರ್ಷ ಪುನಃ ಅವರು ೨ ಸಾವಿರ ೩ ಸಾವಿರ ಸಾಲ ತೆಗೆದುಕೊಂಡರೆ ಅವನು ನಿಜವಾಗಿಯೂ ಏನಾದರೂ ಪ್ರಗತಿ ಹೊಂದಿದ್ದಾನೆಂದು ತಿಳಿದುಕೊಳ್ಳುತೀರಾ ? ಈ ರೀತಿ ಸಾಲ ಪಡೆದವನು, ಪ್ರತಿ ವರ್ಷವೂ ೨ ಸಾವಿರ, ೪ ಸಾವಿರ, ೫ ಸಾವಿರ ಹೀಗೆ ಪಡೆಯುತ್ತಾ ಬುಕ್ ಅಡ್ಜಸ್ಟ್‌ಮೆಂಟ್ ಮಾಡುತ್ತಾ ಹೋಗಿ ಅದನ್ನು ವಾಪಸ್ಸು ಸಹ ಕಟ್ಟದೇ ಕೊನೆಗೇ ಸರ್ಕಾರಕ್ಕೆ ಕಟ್ಟಲು ಆಗುವುದಿಲ್ಲವೆಂದು ಕೈ ಎತ್ತುತ್ತಾನೆ. ಆಗ ಸಂಪೂರ್ಣವಾಗಿ ರಿಯಾಯಿತಿ ಕೊಡಿ ಎಂದು ಕೈ ಎತ್ತಿ ನಿಲ್ಲುತ್ತಾನೆ. ಅಂಥ ಪರಿಸ್ಥಿತಿ ಏತಕ್ಕೆ ಬಂತು ? ಇದಕ್ಕೆ ಕಾರಣವೇನೆಂಬುದನ್ನು ಸಹ ನಾವು ನೋಡಬೇಕಾಗಿದೆ. ಮೊದಲನೆಯದಾಗಿ, ರೈತನಿಗೆ ನ್ಯಾಯವಾದ ಬೆಲೆ ಸಿಗುತ್ತಿಲ್ಲ ಎರಡನೆಯದಾಗಿ, ಅವನ ಸಾಲದ ಬಡ್ಡಿ ಹೆಚ್ಚಿದೆ. ಆದುದರಿಂದ ರೈತನ ಸಾಲದ ಮೇಲಿನ ಬಡಿ ದರವನ್ನು ಕಡಿಮೆ ಮಾಡಿದರೆ ಬಹಳಷ್ಟು ಉಪಕಾರ ಮಾಡಿದಹಾಗಾಗುತ್ತದೆ, ಇದರ ಬಗ್ಗೆ ಸರ್ಕಾರ ಗಂಭೀರವಾಗಿ ಯೋಚನೆ ಮಾಡಬೇಕು.

ಇನ್ನು ಸ್ಟಾಂಪ್ ಡ್ಯೂಟಿಯನ್ನು ನೀವು ಹೆಚ್ಚಿಸಿರುವುದರಿಂದ ಅದರ ಭಾರ ಕೂಡ ರೈತನ ಮೇಲೆಯೇ ಬೀಳುತ್ತಾ ಉಂಟು. ಅವನು ಏನಾದರೂ ವಸ್ತುಗಳನ್ನು ಪ್ಲೆಡ್ಜ್ ಮಾಡಿ ಸಾಲವನ್ನು ತೆಗೆದುಕೊಳ್ಳುವುದಕ್ಕೆ ಹೋದರೆ ೧೭ ೧/೨ ಪರ್ಸೆಂಟ್ ಬಡ್ಡಿ ಬೀಳುತ್ತದೆ. ಹೀಗಾದರೆ ಅವನು ಬದುಕುವುದು ಹೇಗೆ ಈ ವಿಚಾರದ ಬಗ್ಗೆ ಕೂಡ ಆಲೋಚನೆ ಮಾಡಬೇಕಾಗಿದೆ. ಮಾನ್ಯ ಮುಖ್ಯ ಮಂತ್ರಿಗಳವರು ಆಯವ್ಯಯ ಪತ್ರದಲ್ಲಿ ಇದರ ಬಗ್ಗೆ ಪ್ರಸ್ತಾಪ ಮಾಡಿಲ್ಲ, ಇವರಾದರೂ ಪ್ರಸ್ತಾಪ ಮಾಡಿದ್ದಾರೆ ಏನೋ ಎಂದು ನೋಡಿದರೆ ಇವರೂ ಪ್ರಸ್ತಾಪ ಮಾಡಿದ ಹಾಗೆ ಕಾಣಲಿಲ್ಲ.

ಆಯವ್ಯಯ ಪತ್ರದ ಪುಟ ೧೧ ರಲ್ಲಿ ಈ ರೀತಿ ಹೇಳಿದ್ದಾರೆ.

> ''ಸಹಕಾರ ಸಂಸ್ಥೆಗಳ ಪ್ರಜಾಪ್ರಭುತ್ವವಾದಿ ಕಾರ್ಯ ವಿಧಾನವನ್ನು ಬಲಪಡಿಸಿ ಸುಧಾರಿಸುವುದು ನಮ್ಮ ಉದ್ದೇಶ. ಈ ಚಳುವಳಿಯಿಂದ ಅಧಿಕಾರಿಗಳನ್ನು ಆದಷ್ಟು ಹಿಂದಕ್ಕೆ ಪಡೆಯುವುದಕ್ಕಾಗಿ ಈಗಿನ ಸಹಕಾರಿ ಸಂಸ್ಥೆಗಳ ಶಾಸನಕ್ಕೆ ಸೂಕ್ತ ತಿದ್ದು

ಪಡಿಗಳನ್ನು ನಾವು ಸೂಚಿಸುತ್ತೇವೆ. ಅಗತ್ಯವಿರುವಷ್ಟರಮಟ್ಟಿಗೆ ಮಾತ್ರ ಸಹಕಾರಿ ಸಂಸ್ಥೆಗಳ ಜತೆ ಅಧಿಕಾರಿಗಳ ಸಂಬಂಧವಿರುವುದು. ಸಹಕಾರೀ ಬ್ಯಾಂಕು ಗಳಿಂದ ಸಾಲ ಪಡೆಯುವುದರಲ್ಲಿ ಆಗುವ ವಿಳಂಬವನ್ನು ತಪ್ಪಿಸುವುದಕ್ಕಾಗಿ ಭೂಮಿಗೆ ಸಂಬಂಧಿಸಿದ ಪಟ್ಟಿಯ ಎಲ್ಲ ವಿವರ ಎಷ್ಟು ಸಾಲಕ್ಕೆ ಆತ ಅರ್ಹ ಮತ್ತು ಬ್ಯಾಂಕಿನೊಡನೆ ವ್ಯವಹಾರದ ದಾಖಲೆ ಇವನ್ನೆಲ್ಲ ಒಳಗೊಂಡ ಪಾಸ್ ಬುಕ್ಕು ಗಳನ್ನು ರೈತನಿಗೆ ಕೊಡಲಾಗುವುದು. ಸಹಕಾರೀ ಸಂಸ್ಥೆಗಳ ಮೂಲಕ ಕೃಷಿ ಉತ್ಪನ್ನವನ್ನು ಮಾರುವುದೇ ಸಹಕಾರೀ ಚಳವಳಿಯ ಬಲವರ್ಧನೆಗೆ ಸಾಧನ, ಪ್ರೋತ್ಸಾಹವೆನ್ನುವ ದೃಷ್ಟಿಯಿಂದ ಪ್ರಾಥಮಿಕ ಕೃಷಿ ಸಹಕಾರೀ ಸಂಘಗಳ ಮೂಲಕ ತಮ್ಮ ಉತ್ಪನ್ನವನ್ನು ಮಾರುವ ರೈತರಿಗೆ ಬಡ್ಡಿಯ ಸಹಾಯ ದ್ರವ್ಯದ ಉತ್ತೇಜಕವನ್ನು ನೀಡಲು ನಾವು ನಿರ್ಧರಿಸಿದ್ದೇವೆ.''

ಇದರ ಬಗ್ಗೆ ಸಚಿವರು ಎಲ್ಲಿಯಾದರೂ ಏನಾದರೂ ಉಲ್ಲೇಖ ಮಾಡಿದ್ದಾರೆಯೆ ? ಯಾವ ರಿಯಾಯಿತಿ ಕೊಟ್ಟಿದ್ದಾರೆ ? ನಾನು ಅರ್ಥ ಮಾಡಿಕೊಂಡ ಹಾಗೆ ರೈತ ತಾನು ಮಾಡಿದ ಉತ್ಪತ್ತಿ ಯನ್ನು ಕೊಟ್ಟರೆ ಬಡ್ಡಿಯಲ್ಲಿ ರಿಯಾಯಿತಿ ಕೊಡುತ್ತಾರೆ. ಇದರ ಬಗ್ಗೆ ಯಾವುದೇ ಉಲ್ಲೇಖವನ್ನು ಸಚಿವರು ಮಾಡಿದಂತೆ ಕಾಣುವುದಿಲ್ಲ.

ಶ್ರೀ ಆರ್. ಎಲ್. ಜಾಲಪ್ಪ.—ಅದರಲ್ಲಿರುವುದೇ ಉಲ್ಲೇಖ. ನಾವು ಒಪ್ಪಿಕೊಂಡಿದ್ದೇವೆಂದು ಆಯವ್ಯಯ ಭಾಷಣದಲ್ಲಿ ಹೇಳಿದ್ದೇವೆ. ಯಾವ ರೈತನೇ ಆಗಲಿ ತಾನು ಮಾಡಿದ ಸಾಲವನ್ನು ಉಪಯೋಗಿಸಿ ಬೆಳೆ ಬೆಳೆದು ಸಹಕಾರ ಸಂಘಗಳ ಮೂಲಕ ಮಾರಿದರೆ ಮಾರುಕಟ್ಟೆಯ ದರಕ್ಕಿಂತ ೫ ರೂಪಾಯಿಗಳನ್ನು ಹೆಚ್ಚಿಗೆ ಕೊಡುತ್ತೇವೆಂದು ಹೇಳಿದ್ದೇವೆ. ಆ ಪ್ರಕಾರ ನಡೆಯುತ್ತಿದೆ.

ಶ್ರೀ ಕೆ. ರಾಮಭಟ್.—ಇದುವರೆಗೆ ಎಲ್ಲಿಯಾದರೂ ಆ ರೀತಿ ಕೊಟ್ಟಿದ್ದೀರಾ ? ಆ ಒಂದು ಪದ್ಧತಿ ಏಪ್ರಿಲ್ ನಂತರ ಜಾರಿಗೆ ಬಂತು: ಅಂದರೆ ಇಲ್ಲಿಗೆ ೬ ತಿಂಗಳಾಯಿತು. ನಾನು ಇದನ್ನು ಏತಕ್ಕೆ ಹೇಳುತ್ತಿದ್ದೇನೆಂದರೆ ಕೇವಲ ಘೋಷಣೆ ಮಾಡಿದರೆ ಸಾಲದು ಅದನ್ನು ಕಾರ್ಯರೂಪಕ್ಕೆ ತರಬೇಕು.

ಶ್ರೀ ಆರ್. ಎಲ್. ಜಾಲಪ್ಪ.—ಘೋಷಣೆಗಳನ್ನು ಪಾಲಿಸುತ್ತೇವೆ. ೬ ತಿಂಗಳಿನಿಂದ ಈಚೆಗೆ ಬೆಳೆ ಬಂದಿಲ್ಲ. ಶಿವಮೊಗ್ಗದಲ್ಲೋ ಬೆಳೆ ಬಂದಿದೆ, ಆದರೆ ಇದುವರೆಗೆ ಯಾರೂ ಸಹಕಾರ ಸಂಘ ಗಳ ಮೂಲಕ ಮಾರಿಲ್ಲ, ಮಾರಿದರೆ ಅವರಿಗೆ ೫ ರೂಪಾಯಿ ಹೆಚ್ಚಿಗೆ ಕೊಡುತ್ತೇವೆ.

ಶ್ರೀ ಕೆ. ರಾಮಭಟ್.—ಆಯವ್ಯಯ ಭಾಷಣದಲ್ಲಿ ಹೇಳಿದ ಮಾತುಗಳು ಜಾರಿಗೆ ಬಂದಿಲ್ಲ ವೆಂದು ತಮ್ಮ ಗಮನಕ್ಕೆ ತರಬಯಸುತ್ತೇನೆ. ಅದು ಎಲ್ಲಿ ಕಾರ್ಯಾಚರಣೆಯಲ್ಲಿ ಬಂದಿದೆ ? ನೀವು ಏನು ಒಂದು ಪಾಲಿಸಿ ಹೇಳಿದ್ದೀರಿ ಅದನ್ನು ಮಾಡಲಿಲ್ಲ. ಯಾವುದನ್ನು ಕಾರ್ಯಾಚರಣೆಯಲ್ಲಿ ತರುತ್ತಿಲ್ಲ, ನೀವು ಹೇಳಿದಂತೆ ನಡೆದುಕೊಳ್ಳುತ್ತಿಲ್ಲ. ಆದ್ದರಿಂದ, ಬಡ್ಡಿಯನ್ನು ರಿಯಾಯಿತಿ ಮಾಡ ತಕ್ಕ ಪ್ರಸಂಗ ಬಂದಿವೆ ಎಂದು ಹೇಳುತ್ತಿದ್ದೇನೆ. ಇದರ ಬಗ್ಗೆ ಅಮೂಲಾಗ್ರವಾಗಿ ತಾವು ಪರಿಶೀಲನೆ ಮಾಡಬೇಕು.

ಸಹಕಾರ ಚಳುವಳಿಯ ಬಗ್ಗೆ ಸಮಗ್ರವಾದ ಕಾನೂನು ತರುತ್ತೇವೆಂದು ಹೇಳುತ್ತಿದ್ದಾರೆ. ಆದರೆ ಅದು ಹಾಗೆ ಆಗುವುದಿಲ್ಲ. ಅದಕ್ಕೆ ಜನರ ಮನಸ್ಸಿನಲ್ಲಿ ಪರಿವರ್ತನೆ ಆಗಬೇಕಾಗಿದೆ. ಇಷ್ಟು ದಿವಸ ಬೆಳಸಿಕೊಂಡು ಬಂದದ್ದನ್ನು ಬದಲಾವಣೆ ಮಾಡದೆ ಸಾಮಾನ್ಯ ಜನರಿಗೆ ಒಳ್ಳೆಯ ರೀತಿಯಲ್ಲಿ ನಡೆದುಕೊಳ್ಳಿ ಎಂದರೆ ಇದರಿಂದ ಉಪಯೋಗ ಆಗುವುದಿಲ್ಲ. ಈ ದಿಸೆಯಲ್ಲಿ ಅಮೂಲಾಗ್ರವಾಗಿ ಪರಿವರ್ತನೆ ಮಾಡಬೇಕಾಗಿದೆ, ಈ ದಿಸೆಯಲ್ಲಿ ಜನರಿಗೆ ಶಿಕ್ಷಣ ಕೊಡಬೇಕಾಗಿದೆ. ಕಾನೂನು ಬದಲಾವಣೆ ಮಾಡಬೇಕಾದರೆ ಇದನ್ನು ಮೊದಲು ಮಾಡಬೇಕು. ಮತ್ತೊಂದು ಕಡೆ ತಮ್ಮ ಭಾಷಣ ದಲ್ಲಿ ಹೇಳಿದ್ದಾರೆ ''೬೯ ಪ್ರಾಥಮಿಕ ಭೂ ಅಭಿವೃದ್ಧಿ ಬ್ಯಾಂಕುಗಳ ಪೈಕಿ ೩೯ರಲ್ಲಿ ಮಾತ್ರ ೭.೧೧ ಕೋಟಿ ರೂಪಾಯಿಗಳ ಲಾಭವಾಗಿದೆ'' ಎಂದು ಇದು ಸಾಮಾನ್ಯವಾದ ಸಂಗತಿ ಅಲ್ಲ. ಹೀಗಾದರೆ ಸಹಕಾರ ಚಳುವಳಿ ಹೇಗೆ ಬೆಳೆಯಬೇಕು ? ಇದನ್ನು ಉಳಿಸುವುದಕ್ಕೆ ಸಾಧ್ಯತೆ ಇದೆಯೆ ? ಮಾನ್ಯ ಸಚಿವರು ಇದರ ಬಗ್ಗೆ ಸಂತೃಪ್ತ ಮನೋಭಾವನೆ ತಾಳದೆ ಬಹಳ ಜಾಗ್ರತೆಯಿಂದ ಈ ವಿಷಯದಲ್ಲಿ ವ್ಯವಹಾರ ಮಾಡಬೇಕೆಂದು ಹೇಳುತ್ತೇನೆ.

ಈ ವಿಷಯವನ್ನು ಇಲ್ಲಿಗೆ ಬಿಟ್ಟು ಮಾರುಕಟ್ಟೆಯ ವಿಷಯವಾಗಿ ಎರಡು ಮಾತುಗಳನ್ನು ಹೇಳ ಬಯಸುತ್ತೇನೆ. ಇವತ್ತು ಶೇಕಡ ೨ ರಷ್ಟು ಸೆಸ್ ಏನು ವಸೂಲ್ಮಾಡುತ್ತಾರೆ ಆ ಹಣ ಏತಕ್ಕೆ ಖರ್ಚಾಗಿದೆ ? ಇದರ ಬಗ್ಗೆ ಮಾಹಿತಿ ಕೊಡಬೇಕು. ನಮ್ಮ ಜಿಲ್ಲೆಯಲ್ಲಿ ೯೦ ಲಕ್ಷ ರೂಪಾಯಿಗಳ ಉತ್ಪತ್ತಿ ಇದೆ ಎಂದು ತಿಳಿದಿದ್ದೇನೆ, ನಾನು ಪುತ್ತೂರಿನ ಮಾರುಕಟ್ಟೆಯ ವಿಚಾರವಾಗಿ ಪ್ರಶ್ನೆ ಕೇಳಿದ್ದೇನೆ. ಅಲ್ಲಿ ಕಟ್ಟಡ ಕಟ್ಟಿ ೨ ವರ್ಷವಾದರೂ ಇದುವರೆಗೆ ಕಾರ್ಯ ಪ್ರಾರಂಭವಾಗಿಲ್ಲ. ಈವತ್ತು ಶೇಕಡ ಅರ್ಧ ಭಾಗದಷ್ಟು ಹಣವನ್ನು ಕೂಡ ರೈತರಿಗೆ ಪ್ರಯೋಜನವಾಗುವಂಥ ಕೆಲಸ ಗಳಿಗೆ ಉಪಯೋಗ ಮಾಡುತ್ತಿಲ್ಲ. ಹೀಗಾಗಿ ಲಕ್ಷಗಟ್ಟಲೆ ಹಣದ ಸದುಪಯೋಗವಾಗುತ್ತಿಲ್ಲ. ವಿಶ್ವ ಬ್ಯಾಂಕಿನಿಂದ ದೊರೆತ ೧೦ ಕೋಟಿ ರೂಪಾಯಿಗಳ ಹಣ ಏನಾಯಿತು ? ಇವತ್ತಿನ ದಿವಸ ಪುತ್ತೂರಿ ನಲ್ಲಿ ಕೆಮ್ಕೋ ಎಂಬ ಸಂಸ್ಥೆ ಕೆಲಸ ಮಾಡುತ್ತಿದೆಯೋ ಎಂಬ ಸಂಶಯ ಇದೆ. ಅದಕ್ಕೆ ಸರ್ಕಾರ ಏನು ಕೆಲಸ ಮಾಡಿದೆ ? ಕೇರಳ ಸರ್ಕಾರದವರು ಕರೆದು ಆ ಸಂಸ್ಥೆಯನ್ನು ನಮ್ಮಲ್ಲಿ ಮಾಡಿ, ನಾವು ನಿಮಗೆ ಎಲ್ಲ ರೀತಿಯ ಸಹಾಯ ಕೊಡುತ್ತೇವೆಂದು ಹೇಳಿದರು. ಆದರೆ ಅದಕ್ಕೆ ಅವರು ಒಪ್ಪದೆ ಎಂಟೂವರೆ ಕೋಟಿ ರೂಪಾಯಿಗಳ ಅಂದಾಜಿನಲ್ಲಿ ನಮ್ಮ ಪುತ್ತೂರಿನಲ್ಲಿ ಕಟ್ಟಡ ಕೆಲಸ ನಡೆಯುತ್ತಿದೆ. ಅದಕ್ಕೆ ಸರ್ಕಾರ ಏನು ಸಹಾಯ ಸಹಕಾರ ನೀಡುತ್ತಿದೆ ? ಇದರ ಬಗ್ಗೆ ವಿಚಾರ ಮಾಡಬೇಕೆಂದು ಹೇಳುತ್ತೇನೆ. ಟಿಎಪಿಸಿಎಂಎಸ್. ನವರು ಹೇಗೆ ಗ್ರಾಹಕರಿಗೆ ತೊಂದರೆ ಕೊಡುತ್ತಾರೆಂದರೆ, ಅಕ್ಕಿ ಯನ್ನು ರಿಲೀಸ್ ಮಾಡುವಾಗ ಅವರಿಗೆ ಮುಂಗಡವಾಗಿ ಹಣ ಪಾವತಿ ಮಾಡಬೇಕು. ಒಂದು ವೇಳೆ ಒಂದೆರಡು ಲಕ್ಷ ರೂಪಾಯಿಗಳೇನಾದರೂ ಬಾಕಿ ಆಗಿದ್ದಲ್ಲಿ ಅದು ಸಿಗುವವರೆಗೂ ಅಕ್ಕಿಯನ್ನು ಕೊಡುವಂತಿಲ್ಲ. ಅದನ್ನು ತೀರಿಸುವ ಸಲುವಾಗಿ ಏನಾದರೂಸಾಲ ತೆಗೆದುಕೊಂಡರೆ ಅದಕ್ಕೆ ೧೬ ಪರ್ಸೆಂಟ್ ಬಡ್ಡಿ ಕೊಡಬೇಕು. ಇಂಥ ಇಕ್ಕಟ್ಟಿನ ಪರಿಸ್ಥಿತಿಯಲ್ಲಿ ಸಹಕಾರ ಸಂಸ್ಥೆಗಳು ಬದುಕುವ ಬಗೆಯಾದರೂ ಹೇಗೆ ಎಂಬುದನ್ನು ಸರ್ಕಾರ ಯೋಚನೆ ಮಾಡಬೇಕು. ೧,೫೦೦ ಕೋಟಿ ರೂಪಾಯಿ ಗಳ ವ್ಯವಹಾರ ಮಾಡತಕ್ಕ ಸಂಸ್ಥೆಗಳಿಗೆ ಕರ್ನಾಟಕ ಕೋ–ಆಪರೇಟೀವ್ ಸರ್ವೀಸ್ ಆಫೀಸರ್ಸ್ ಎಂಬ ಹೊಸ ಹುದ್ದೆಗಳನ್ನು ಏತಕ್ಕೆ ನಿರ್ಮಾಣ ಮಾಡಬಾರದು ? ಬಾಂಬೆಯಲ್ಲಿರುವ ಹಾಗೆ ಇಲ್ಲಿಯೂ ಕೂಡ ಅಂಥ ಅಧಿಕಾರಿಗಳ ಹುದ್ದೆಗಳನ್ನು ನಿರ್ಮಾಣ ಮಾಡಬೇಕೆಂಬ ವಿಚಾರವನ್ನು ಸರ್ಕಾರದ ಮುಂದೆ ಇಡಬಯಸುತ್ತೇನೆ. ವ್ಯವಸಾಯ ಸಹಕಾರ ಸಂಘಗಳಲ್ಲಿ ವ್ಯವಸಾಯಗಾರರು ಮಾತ್ರ ಸದಸ್ಯ ರಾಗಿರಬೇಕು. ಆದರೆ ಅಂಥ ಸಂಘಗಳಲ್ಲಿ ಬೀಡಿ ಕಟ್ಟುವವರೂ ಸಹ ಸದಸ್ಯರು, ಯಾರ್ಯಾರೋ ಸದಸ್ಯರಾಗಿದ್ದಾರೆ. ನಿಜವಾದ ರೈತನನ್ನು ಕೇಳುವ ಸ್ಥಿತಿ ಇಲ್ಲ. ಆದ್ದರಿಂದ, ಇದನ್ನು ಸ್ವಲ್ಪ ಹತೋಟಿಯಲ್ಲಿಟ್ಟು ವ್ಯವಸಾಯಗಾರರು ಮಾತ್ರ ರೈತ ಸೇವಾ ಸಹಕಾರ ಸಂಘಗಳಲ್ಲಿ ಸದಸ್ಯರಾಗ ಬೇಕೆಂಬ ನಿಲುವನ್ನು ಸರ್ಕಾರ ತೆಗೆದುಕೊಳ್ಳಬೇಕೆಂದು ಹೇಳುತ್ತೇನೆ. ಡೈರೆಕ್ಟರನ್ನು ನೇಮಕ ಮಾಡ ತಕ್ಕ ಸಂದರ್ಭದಲ್ಲಿ ರಾಜಕಾರಣ ಮಾಡಬಾರದೆಂದು ಹೇಳುವವರಲ್ಲಿ ನಾನು ಒಬ್ಬ. ಮಡಕೇರಿಯಲ್ಲಿ ಎಪಿಎಂಸಿ.ಗೆ ಚುನಾವಣೆ ನಡೆಯಿತು. ಚುನಾವಣೆ ನಡೆದಾಗ ನಮ್ಮ ಬಿ.ಜೆ.ಪಿ. ಯವರು ೫ ಜನ ಬಂದರು. ಮೂರು ಜನ ಜನತಾ ಪಕ್ಷದಿಂದ ಆಯ್ಕೆಯಾದರು. ಆದರೆ ಮುಂದೆ ಏನು ಮಾಡಿದರು ಎಂಬುದನ್ನು ನೋಡಿ. ನಾವು ಇಲ್ಲಿ ಸರ್ಕಾರಕ್ಕೆ ಏತಕ್ಕೆ ಬೆಂಬಲ ಕೊಡುತ್ತಿದ್ದೇವೆ ? ಜನರ ಇಚ್ಛೆ ಏನಿತ್ತು ಎಂದು ನೋಡಿ ಅವರು ಕಾಂಗ್ರೆಸ್ ವಿರುದ್ಧವಾಗಿ ಮತ ಕೊಟ್ಟಿರುವುದರಿಂದ ಜನತಾ ಸರ್ಕಾರಕ್ಕೆ ನಾವು ಬೆಂಬಲ ಕೊಡುತ್ತಿದ್ದೇವೆ. ಆದರೆ ಇವರು ಅಲ್ಲಿ ಏನು ಮಾಡಿದರು ಎಂದರು ಬಿ.ಜೆ.ಪಿ. ಪಕ್ಷದ ವರು ಅಧ್ಯಕ್ಷರಾಗಿ ಬರಬಾರದು ಎಂದು ಮೂರು ಜನ ಇವರಿಗೆ ಬೇಕಾದವರನ್ನು ನೇಮಕ ಮಾಡಿದರು. ಎಂದರೆ ಜನರ ಇಚ್ಛೆಗೆ ವಿರುದ್ಧವಾಗಿ ಈ ಕೆಲಸ ಮಾಡಿದ್ದಾರೆ. ನಾವು ಬಹುಮತ ಇದ್ದಾಗ್ಯೂ ಕೂಡ ತೆಗೆದುಹಾಕಿ ನಮ್ಮನ್ನು ಅಲ್ಪಸಂಖ್ಯಾತರನ್ನಾಗಿ ಮಾಡಿದರು. ಆದರೂ ನಾವು ಸಮಬಲರಾದೆವು. ಆದರೆ ದುರ್ದೈವ ಏನಾಯಿತೆಂದರೆ ಲಾಟರಿ ತೆಗೆದಾಗ ನಾವು ಸೋತೆವು. ಇವರು ರಾಜಕಾರಣ ಹೇಗೆ ಮಾಡುತ್ತಾರೆ ಎಂಬುದಕ್ಕೆ ಇದನ್ನು ಹೇಳುತ್ತಿದ್ದೇನೆ. ಕಾಂಗ್ರೆಸ್ ನವರು ಮೊದಲು ಮಾಡಿದ್ದನ್ನು ನಾವು ಖಂಡನೆ ಮಾಡುತ್ತಿದ್ದರೂ ಅದೇ ಆಟವನ್ನು ಇವರು ಆಡಿದ್ದಾರೆ. ಈ ರೀತಿ ಆಟ ಆಡಬಾರದು. ನಮ್ಮನ್ನು ಸರಿಯಾಗಿ ಅರ್ಥ ಮಾಡಿಕೊಳ್ಳಲಿಲ್ಲ ಎಂದು ಎಚ್ಚರಿಕೆಯ ದೃಷ್ಟಿಯಿಂದ ಈ ಮಾತನ್ನು ಹೇಳುತ್ತಿದ್ದೇನೆ. ನಮ್ಮಲ್ಲಿ ಕೆಲವು ಸೊಸೈಟಿಗಳುಂಟು. ಇದು ಎಷ್ಟೋ ಜನರಿಗೆ ಗೊತ್ತೇ ಇರಲಿಕ್ಕಿಲ್ಲ. ತಾಲ್ಲೂಕು ಲೆವೆಲ್ ಟ್ರೈಬಲ್ ಡೆವಲಪ್‌ಮೆಂಟ್ ಸೊಸೈಟಿ ಎಂದು ಸೊಸೈಟಿ ಉಂಟು. ಅದು ಹೆಸರಿಗೆ ಮಾತ್ರ ಉಂಟು. ಅದರ ಲಾಭ ಮಾಡು ವವರು ಯಾರು ಎಂದರೆ ಕಂಟ್ರಾಕ್ಟರ್‌ಗಳು. ಇವರಿಗೆ ಕೆಲವು ಕಾಡುತ್ಪತ್ತಿಯನ್ನು ಕೊಡುತ್ತಾರೆ. ಸಂಪೂರ್ಣವಾಗಿ ಇದನ್ನು ಅವರಿಗೆ ಕೊಟ್ಟು ಅವರೇ ಸಂಪೂರ್ಣವಾಗಿ ಲಾಭ ಮಾಡಿಕೊಳ್ಳುವಂತೆ ಮಾಡಿದ್ದಾರೆ. ನಾನು ಈ ಸಂದರ್ಭದಲ್ಲಿ ಮಾನ್ಯ ಸಚಿವರಿಗೆ ವಿನಂತಿ ಮಾಡಿಕೊಳ್ಳುತ್ತೇನೆ, ಎಲ್ಲೆಲ್ಲಿ ತಾಲ್ಲೂಕ್ ಲೆವೆಲ್ ಟ್ರೈಬಲ್ ಡೆವಲಪ್ಮೆಂಟ್ ಸೊಸೈಟಿ ಉಂಟೋ ಅದರ ಬಗ್ಗೆ ಆಮೂಲಾಗ್ರವಾಗಿ

ತನಿಕೆ ನಡೆಸಿ ಸರಿಯಾಗಿಲ್ಲದಿರುವ ಕಡೆ ಅದನ್ನು ಮುಚ್ಚಿ. ಬೀಡಿ ಕಾರ್ಮಿಕರ ಸಹಕಾರ ಸಂಘದ ಬಗ್ಗೆ ಪ್ರಶ್ನೆ ಕೇಳಿದ್ದೆ. ಅದೇನಾಯಿತೋ ಗೊತ್ತಿಲ್ಲ. ಈ ರೀತಿ ಆಮೆ ಗತಿಯಲ್ಲಿ ಹೋದರೆ ಕೆಲಸ ಆಗುವುದಲ್ಲ. ಯಾರು ಯಾರು ದೊಡ್ಡ ದೊಡ್ಡ ಮಾಲೀಕರು ಸರ್ಕಾರದ ಮೇಲೆ ಒತ್ತಡ ತರುತ್ತಾರೋ ಅವರ ಕಡೆ ಗಮನ ಕೊಟ್ಟು ಬಡಜನರ ಮೇಲೆ ನೋಡುತ್ತಿಲ್ಲ. ಈ ವಿಷಯದಲ್ಲಿ ಮಾನ್ಯ ವೀರಪ್ಪ ಮೊಯಿಲಿ ಅವರಿಗೆ ಶಹಬಾಸ್‌ಗಿರಿ ಕೊಡಬೇಕು. ಅವರು ಮಂತ್ರಿಯಾಗಿರುವಾಗ ಬೀಡಿ ಕಾರ್ಮಿಕರ ಸಹಕಾರ ಸಂಘ ಪ್ರಾರಂಭವಾಯಿತು. ಸಹಕಾರ ಸಂಘ ಮಾಡಿದ ಉದ್ದೇಶ ವಾದರೂ ಏನು ? ಕಾರ್ಮಿಕರ ಮೇಲೆ ನಡೆಯುತ್ತಿರುವ ಶೋಷಣೆ ನಿಲ್ಲಬೇಕು, ಸುಲಿಗೆ ನಿಲ್ಲಬೇಕು. ಅವರು ನ್ಯಾಯವಾಗಿ ಜೀವನ ನಡೆಸುವುದಕ್ಕೆ ಅವಕಾಶ ಮಾಡಿಕೊಡಬೇಕು ಎಂಬ ದೃಷ್ಟಿಯಿಂದ ಪ್ರಾರಂಭ ಮಾಡಿದರು. ಆದರೆ ಆ ಉದ್ದೇಶದ ಬಗ್ಗೆ ಒಂದು ಅಂಗುಲ ಕೂಡ ಮುಂದೆ ಹೋಗಿಲ್ಲ. ಇನ್ನಾದರೂ ಇದರ ಮಹತ್ವವನ್ನು ಅರಿತು ಆದಷ್ಟು ಜಾಗ್ರತೆ ಕಾರ್ಯ ಪ್ರವೃತ್ತ ರಾಗಬೇಕೆಂದು ಕೇಳಿಕೊಳ್ಳುತ್ತೇನೆ. ಅದಕ್ಕೆ ಜೀವಕಳೆ ತುಂಬುವಂಥ ಕೆಲಸ ಬೇಗ ಮಾಡಬೇಕು. ಬ್ರಹ್ಮಾವರದಲ್ಲಿ ಸಕ್ಕರೆ ಕಾರ್ಖಾನೆ ಪ್ರಗತಿಯಾಗುತ್ತಿದೆ. ಅದರ ಬಗ್ಗೆ ನಾನು ಹೇಳುವುದಿಲ್ಲ. ರಾಜ್ಯದಲ್ಲಿ ರೇಷ್ಮೆ ಬಗ್ಗೆ ಹೇಳುವುದಾದರೆ 90 ಸಾವಿರ ರೇಷ್ಮೆ ನೇಯ್ಗೆ ಕಾರ್ಮಿಕರಿದ್ದಾರೆ. ಅವರ ಸಹಕಾರ ಸಂಘದ ಬಗ್ಗೆಯೂ ಏನಾಯಿತೋ ಗೊತ್ತಿಲ್ಲ. ಹಿಂದಿನ ಅಧಿವೇಶನದಲ್ಲೇ ಈ ಬಗ್ಗೆ ಪ್ರಸ್ತಾಪ ಮಾಡಲಾಗಿತ್ತು, ನೇಯ್ಗೆ ಕಾರ್ಮಿಕರು ಯಾರಿದ್ದಾರೆ ಅವರ ಬಗ್ಗೆ ಏನು ಮಾಡಿದ್ದೀರಿ? ಅವರ ಸಹಕಾರ ಸಂಘ ಏನಾಯಿತು, ಅವರು ಯಾವ ಸ್ಥಿತಿಯಲ್ಲಿದ್ದಾರೆ ಎಂಬುದನ್ನು ಹೇಳಬೇಕು. ಅದೇ ರೀತಿಯಲ್ಲಿ ಮೀನುಗಾರರ ಸಹಕಾರ ಸಂಘ ಏನಾಗಿದೆ ಎಂಬುದನ್ನು ಹೇಳಬೇಕು. ಆಮೇಲೆ ಶಿರ್ಸಾಡಿ ವಿಷಯ ಎಲ್ಲಾ ಹಳೆಯದಾಯಿತು. ಅದನ್ನು ಹೇಳುವುದಕ್ಕೆ ಹೋಗುವುದಲ್ಲ. ಇದು ಇವರು ಬಂದನಂತರ ಆದದ್ದಲ್ಲ. ಆದ್ದರಿಂದ ಇವರ ತಲೆ ಮೇಲೆ ಅದರ ಆರೋಪ ಹೊರಿಸುವುದಿಲ್ಲ. ಒಂದು ವಿಷಯವನ್ನು ಮಾನ್ಯ ಮಂತ್ರಿಗಳ ಗಮನಕ್ಕೆ ತರಲಿಕ್ಕೆ ಇಚ್ಛಿಪಡುತ್ತೇನೆ. ಹಿಂದಿನಿಂದ ಇದ್ದಂಥ ಕೆಲವು ಖದೀಮರು ನಿಮ್ಮಿಂದ ರಕ್ಷಣೆ ಹೊಂದುವುದಕ್ಕೆ ಪ್ರಯತ್ನ ಮಾಡುತ್ತಿದ್ದಾರೆ. ಅವರ ಬಗ್ಗೆ ಜಾಗೃತರಾಗಿದ್ದು ಕಾರ್ಯ ಮಾಡಿ. ತಾವು ಯಾವುದಾದರೂ ಮೀಟಿಂಗ್‌ಗೆ ಹೋದರೆ ಯಾವುದಾದರೂ ಕಾರ್ಯಕ್ರಮಕ್ಕೆ ಹೋದರೆ ತಮ್ಮ ಹಿಂದೆ ಮುಂದೆ ತಿರುಗಾಡುವವರೆಲ್ಲಾ ಅವರೇ. ಯಾರೇ ಮಂತ್ರಿಯಾಗಲಿ ಅವರು ಒಟ್ಟಿಗೆ ಇರುತ್ತಾರೆ.

ಶ್ರೀ ಎಂ.ಎಸ್. ಕೃಷ್ಣನ್.—ಚಿಕನ್ ಬಿರಿಯಾನಿ ತಿನ್ನಿಸುವವರೂ ಅವರೆ.

ಶ್ರೀ ಆರ್.ಎಲ್. ಜಾಲಪ್ಪ.—ನಿಮ್ಮ ಜಿಲ್ಲೆಗೆ ಬಂದಾಗ ಸಭೆಯಲ್ಲಿ ಅವರನ್ನು ಡೈರೆಕ್ಟಾಗಿ ಅಟ್ಯಾಕ್ ಮಾಡಿರುವುದು ತಮಗೆ ಗೊತ್ತಿದೆ.

ಶ್ರೀ ಕೆ. ರಾಮಭಟ್.—ಆದರೆ ಅವರ ರುಚಿಯಾದ ಮಾತಿಗೆ ಬಲಿ ಬೀಳಬೇಡಿ. ದಾಕ್ಷಿಣ್ಯಕ್ಕೆ ಒಳಗಾಗಬೇಡಿ. ವಿಟ್ಲಾ ಕ್ಷೇತ್ರದಲ್ಲಿ ಒಂದು ಬ್ಯಾಂಕ್ ಉಂಟು. ಅಲ್ಲಿ ಲಕ್ಷಗಟ್ಟಲೆ ತಿಂದುಹಾಕಿದ್ದರೂ ಏನು ಕ್ರಮ ತೆಗೆದುಕೊಳ್ಳಲಿಲ್ಲ. ತನಿಖೆ ನಡೆದಿದೆ, ಆದರೆ ಯಾವ ಕ್ರಮವನ್ನೂ ತೆಗೆದುಕೊಂಡಿಲ್ಲ. ಹಿಂದೆ ಡೈರೆಕ್ಟರನ್ನು ಸಸ್ಪೆಂಡ್ ಮಾಡಿದಾಗ ಹಿಂದಿನ ಸಹಕಾರ ಮಂತ್ರಿಗಳು ಸ್ಟೇ ಕೊಟ್ಟರು. ಆರೀತಿ ನೀವು ಮಾಡಬೇಡಿ ಎಂದು ಹೇಳುತ್ತಿದ್ದೇನೆ. ಪ್ರಜಾಪ್ರಭುತ್ವ ರೀತಿಯಲ್ಲಿ ಇದು ನಡೆಯ ಬೇಕು. ಅಧಿಕಾರಿಗಳ ರಾಜ್ಯಭಾರ ಸಹಕಾರಿ ಚಳುವಳಿಯಲ್ಲಿ ನಡೆಯಬಾರದು ಎಂದು ಎಲ್ಲಾ ಭಾಷಣಕಾರರೂ ಹೇಳುತ್ತಾರೆ. ಅಧಿಕಾರಿಗಳನ್ನು ನೇಮಕ ಮಾಡುವಾಗ ಕೂಡ ಸಹಕಾರಿ ಸಂಸ್ಥೆಗಳ ಉಸಿರು ಕಟ್ಟುವಂತೆ, ಅವರದೇ ಕಾರುಭಾರು ಇರುವಂತೆ ಮಾಡಬೇಡಿ. ಆ ರೀತಿ ಮಾಡಿದರೆ ಪ್ರಜಾಪ್ರಭುತ್ವ ನೀರಿನಲ್ಲಿ ಹೋಮ ಮಾಡಿದಂತೆ ಆಗುತ್ತದೆ. ಅದರಿಂದ ಚಿಕ್ಕಾಸಿನ ಪ್ರಯೋಜನವೂ ಆಗುವುದಿಲ್ಲ, ಮಾನ್ಯ ಮಂತ್ರಿಗಳು ಜಾಗ್ರತೆಯಿಂದ ಸಹಕಾರಿ ಕ್ಷೇತ್ರದಲ್ಲಿ ಕಾಲಿಡಬೇಕು. ಅಲ್ಲಿ ಬಹಳ ಗಂಡಾಂತರಗಳುಂಟು. ಅನೇಕ ಹೊಂಡಗಳಿವೆ. ಕತ್ತಲೆಯಲ್ಲಿ ಕಾಲಿಟ್ಟರೆ ನಾವು ನೀವು ಒಟ್ಟಿಗೆ ಕೆಳಗೆ ಬೀಳುತ್ತೇವೆ. ಆ ರೀತಿ ಮಾಡಬೇಡಿ ಎಂದು ಹೇಳಿ ನನಗೆ ಇಷ್ಟು ಹೊತ್ತು ಮಾತನಾಡಲು ಅವಕಾಶ ಕೊಟ್ಟಿದ್ದಕ್ಕಾಗಿ ಅಧ್ಯಕ್ಷರಿಗೆ ವಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

† ಶ್ರೀ ಎಂ. ಮಹದೇವ್ (ನಂಜನಗೂಡು).—ಸಭಾಧ್ಯಕ್ಷರೆ, ಸಹಕಾರ ಇಲಾಖೆಯ ಬೇಡಿಕೆಯನ್ನು ನಾನು ವಿರೋಧಿಸಿ ಮಾತನಾಡುತ್ತೇನೆ. ಪ್ರಜಾಪ್ರಭುತ್ವದ ತಳಹದಿಯ ಮೇಲೆ ಈ

---

† ಈ ಚಿನ್ಹೆ ಸಂಬಂಧಪಟ್ಟ ಸದಸ್ಯರು ಟಿಪ್ಪಣಿ ಅಥವಾ ಭಾಷಣವನ್ನು ಪರಿಷ್ಕರಿಸಿಲ್ಲ ಎಂದು ಸೂಚಿಸುತ್ತದೆ.

ಸಹಕಾರ ಕ್ಷೇತ್ರ ನಡೆಯುತ್ತಿದೆ. ಇದರ ತತ್ವ ಬಹಳ ಒಳ್ಳೆಯದು. ಆದರೆ ಅನುಷ್ಠಾನದಲ್ಲಿ ಮಾತ್ರ ವ್ಯತ್ಯಾಸವಿದೆ. ಅದಕ್ಕೆ ಕೆಲವು ಸಹಕಾರಿಗಳೂ ಕಾರಣ, ಕೆಲವು ಅಧಿಕಾರಿಗಳೂ ಕಾರಣ. ವ್ಯವಸಾಯ ಸೇವಾ ಸಹಕಾರ ಸಂಘಗಳು ಏನು ಹಳ್ಳಿಗಾಡಿನಲ್ಲಿವೆ ಅವು ಸರಿಯಾಗಿ ನಡೆದುಕೊಂಡು ಬಂದರೆ ಅಥವಾ ರೈತನಿಗೆ ಅದರಿಂದ ನ್ಯಾಯಯುತವಾಗಿ ಅನುಕೂಲವಾದರೆ ಸಹಕಾರ ಚಳುವಳಿಯ ಉದ್ದೇಶ ಯಶಸ್ವಿಯಾಗುತ್ತದೆ. ಲೋಪದೋಷಗಳು ಹಳ್ಳಿಗಳಲ್ಲಿರುವ ಪ್ರೈಮರಿ ಸಹಕಾರ ಸಂಘದಿಂದ ಪ್ರಾರಂಭವಾಗಿ ರಾಜ್ಯ ಮಟ್ಟದವರೆಗೆ ಹರಡಿಕೊಂಡಿರುತ್ತವೆ. ಲೋಪವನ್ನು ತಿದ್ದಬೇಕಾದರೆ ಹಿಂದೆ ಏನು ಸಹಕಾರಿ ಕಾನೂನು ರಚನೆಯಾಗಿದೆ ಅದನ್ನು ಈಗಿನ ಸಮಾಜಕ್ಕೆ ತಕ್ಕ ಹಾಗೆ ಬದಲಾಯಿಸಬೇಕಾಗುತದೆ. ಆಗ ಮಾತ್ರ ಬಡರೈತ ಉಳಿಯುತ್ತಾನೆ ಮತ್ತು ಸಹಕಾರ ಸಂಘದ ಮೂಲ ಉದ್ದೇಶ ನೆರವೇರುತ್ತದೆ ಬಹುಶಃ ಸಹಕಾರದ ಕಾನೂನು ಹೇಗಿದೆ ಎಂದರೆ ಇಲ್ಲಿ ತಿನ್ನುವುದಕ್ಕೂ ಅವಕಾಶವಿದೆ, ಕ್ರಮ ತೆಗೆದುಕೊಳ್ಳುವುದಕ್ಕೂ ಅವಕಾಶವಿದೆ.

ಉಪಾಧ್ಯಕ್ಷರು.—ತಿಂದಿದ್ದನ್ನು ಜೀರ್ಣಿಸಿಕೊಳ್ಳುವುದಕ್ಕೂ ಅವಕಾಶ ಇದೆ.

ಶ್ರೀ ಎಂ. ಮಹದೇವ್.—ತಿನ್ನುವುದಕ್ಕೆ, ಜೀರ್ಣಿಸಿಕೊಳ್ಳುವುದಕ್ಕೆ ಮತ್ತು ಕ್ರಮ ತೆಗೆದುಕೊಳ್ಳುವುದಕ್ಕೆ ಮೂರಕ್ಕೂ ಅವಕಾಶವಿದೆ.

ಶ್ರೀ ಪಂಪಾಪತಿ.—ತಾವು ಯಾವ ಅವಕಾಶವನ್ನು ಉಪಯೋಗಿಸಿಕೊಂಡಿದ್ದೀರಿ ?

ಶ್ರೀ ಎಂ. ಮಹದೇವ್.—ನಾನು ಯಾವುದನ್ನೂ ಉಪಯೋಗಿಸಿಕೊಂಡಿಲ್ಲ. ಜನತಾ ಪಕ್ಷದವರು ಮೂರು ಅಂಶಗಳನ್ನು ಮಾಡಿಕೊಂಡಿದ್ದಾರೆ. ಯಾರಾದರೂ ಕಾಂಗ್ರೆಸ್‌ನಿಂದ ಗೆದ್ದರೆ ಅವರನ್ನು ಇಂಡಿಪೆಂಡೆಟಾಗಿ ಕೂರಿಸುವುದು; ನಂತರ ತಮ್ಮ ಪಕ್ಷಕ್ಕೆ ಸೇರಿಸಿಕೊಳ್ಳುವುದು. ಹೀಗೆ ಸಹಕಾರ ಚಳುವಳಿಯಲ್ಲಿ ಮೂರು ಅಂಶಗಳನ್ನು ಅಳವಡಿಸಿಕೊಂಡಿದ್ದಾರೆ.

೩-೩೦ ಪಿ.ಎಂ.

ಈಗ ಸ್ವಲ್ಪ ದಿವಸ ತ್ರೀ ಟೈರ್ ಸಿಸ್ಟಮ್ ಇದೆ. ಕಾನೂನು ಎಲ್ಲಾ ಒಂದೇ. ಇವತ್ತು ಯಾರು ರೈತರು ಸಾಲ ಪಡೆಯುತ್ತಾರೆ ಅವರಿಗೆ ಜಿಲ್ಲಾ ಬ್ಯಾಂಕಿನವರೇ ನೇರವಾಗಿ ಸಾಲವನ್ನು ಹಂಚಿದರೆ ಅನುಕೂಲವಾಗುತ್ತದೆ. ತಮಗೆ ತಿಳಿದಹಾಗೆ ರೈತರು ಮುಗ್ಧರು. ಅವರಲ್ಲಿ ವಿದ್ಯಾವಂತರು ಬಹಳ ಕಡಿಮೆ. ಆದ್ದರಿಂದಲೇ ಅಲ್ಲಿ ಸಹಕಾರ ಸಂಘಗಳು ಸ್ಥಾಪನೆಯಾಗುತ್ತವೆ. ಅವರು ಸಾಲವನ್ನು ಕೊಡುತ್ತಾರೆ. ಈ ರೈತರಿಗೆ ಸಾಲ ಕೊಡುವಾಗ ಆ ರೈತನ ಕೆಪಾಸಿಟಿಯನ್ನು ಈಗ ಯಾವ ರೀತಿ ಅಳತೆ ಮಾಡುತ್ತಾರೆ ಅದು ಸ್ವಲ್ಪ ಬದಲಾವಣೆ ಆಗಬೇಕು. ಇವತ್ತು ರೈತನ ಕೆಪಾಸಿಟಿ ರೆಕಾರ್ಡ್ ಮಾಡುವುದು ಹೇಗೆ? ಈಗ ಒಬ್ಬ ರೈತನ ಹತ್ತಿರ ಮಳೆ ಬಂದರೆ ಬೆಳೆ ಆಗುವ ೫ ಎಕರೆ ಖುಷ್ಕಿ ಜಮೀನು ಇರುತ್ತದೆ. ಇವರ ವರಮಾನ ಎಷ್ಟು ಎಂದು ಲೆಕ್ಕಕ್ಕೆ ತೆಗೆದುಕೊಳ್ಳುತ್ತೀರಿ? ಈತ ಒಂದು ಎಕರೆಯಲ್ಲಿ ೮ ಅಥವಾ ೧೦ ಕ್ವಿಂಟಾಲ್ ಜೋಳ ಬೆಳೆದರೆ ಸರಾಸರಿ ೪೦ ಕ್ವಿಂಟಾಲ್ ಜೋಳ ಬೆಳೆಯುತ್ತಾನೆ. ಇಂತಹ ಮನುಷ್ಯ ಎಷ್ಟು ಸಾಲವನ್ನು ತೆಗೆದುಕೊಳ್ಳಲು ಅರ್ಹ? ನಮ್ಮ ಜನರಲ್ಲಿ ಸಾಲ ಸಿಕ್ಕುತ್ತದೆಂದರೆ ಎಲ್ಲರೂ ಅರ್ಜಿ ಹಾಕುತ್ತಾರೆ. ನಂತರ ತೀರಿಸುವ ಬಗ್ಗೆ ಯೋಚನೆಯೇ ಇಲ್ಲ, ಮೂಲಭೂತವಾಗಿ ತಪ್ಪು ಇಲ್ಲೇ ಪ್ರಾರಂಭ ಆಗುತ್ತದೆಂದು ನಾನು ಹೇಳುತ್ತೇನೆ. ಈ ೪೦ ಕ್ವಿಂಟಾಲ್ ಭತ್ತದ ಬೆಲೆ ಬಹುಶಃ ೪ ಸಾವಿರ ರೂಪಾಯಿಗಳು ಆಗಬಹುದು. ಇದರಲ್ಲಿ ಆತನ ಕುಟುಂಬದ ಜೀವನಕ್ಕೆ ಬೇಕಾದ ಜೀವನ ವೆಚ್ಚ, ಹಬ್ಬಹರಿದಿನಗಳ ವೆಚ್ಚ, ಮಕ್ಕಳ ವಿದ್ಯಾಭ್ಯಾಸದ ವೆಚ್ಚವನ್ನು ಎಲ್ಲಾ ಕಳೆದರೆ ಉಳಿಯುವುದು ಎಷ್ಟು? ಇದರಿಂದ ಈತನಿಗೆ ವರ್ಷದಲ್ಲಿ ೫೦೦ ರೂಪಾಯಿಗಳಿಂದ ೧,೦೦೦ ರೂಪಾಯಿಗಳು ಉಳಿದರೆ ಹೆಚ್ಚು. ಇವತ್ತು ಒಬ್ಬ ಸಾಲಕ್ಕೆ ಅರ್ಜಿ ಹಾಕಿದರೆ ಅವನ ಕೆಪಾಸಿಟಿ ಬಗ್ಗೆ ಆಡಳಿತ ಮಂಡಲಿಯವರಾಗಲೀ, ಸೊಸೈಟಿಯವರಾಗಲೀ, ಸೂಪರ್‌ವೈಸರ್‌ರವರಾಗಲೀ, ನೋಡಿ ಸಾಲವನ್ನು ಕೊಟ್ಟರೆ ಸಾಲ ಸದುಪಯೋಗ ಆಗುತ್ತದೆಂದು ಹೇಳುತ್ತೇನೆ. ಕೇವಲ ೫೦೦ ರೂಪಾಯಿಗಳು ಉಳಿತಾಯ ಮಾಡುವವನಿಗೆ ೫೦೦೦ ರೂಪಾಯಿಗಳ ಸಾಲ ಕೊಟ್ಟರೆ ಆತ ಮರುಪಾವತಿ ಮಾಡಲು ಹೇಗೆ ಸಾಧ್ಯ? ಇನ್ನೊಂದು ಲೋಪದೋಷ ಏನಿದೆ ಎಂಬ ಬಗ್ಗೆ ಹೇಳಬೇಕಾಗುತ್ತದೆ. ಮೇ, ಜೂನ್ ತಿಂಗಳಲ್ಲಿ ಬಹುಶಃ ಮಳೆ ಬರುತ್ತದೆ. ಎಂದರೆ ಖುಷ್ಕಿ ಜಮೀನಿನಲ್ಲಿ ಮಾರ್ಚಿ, ಏಪ್ರಿಲ್‌ನಲ್ಲಿ ಬಿತ್ತನೆ ಹಾಕುತ್ತಾರೆ. ಈ ಜಮೀನಿನ ಮೇಲೆ ಸಾಲ ಕೊಡಲು ಜೂನ್, ಜುಲೈ, ಆಗಸ್ಟ್‌ನಲ್ಲಿ ರೆಕಾರ್ಡ್ ಮಾಡುತ್ತಾರೆ. ಈ ರೈತನಿಗೆ ಬಿತ್ತನೆ ಮಾಡಲು, ಉಳುಮೆ ಮಾಡಲು ಸಾಲ ಬೇಕಾಗಿದ್ದು ಏಪ್ರಿಲ್‌ನಲ್ಲಾದರೆ ಈತನಿಗೆ

ಆಗಸ್ಟ್‌ನಲ್ಲಿ ಸಾಲ ಸಿಗುತ್ತದೆ. ಇಷ್ಟು ಹೊತ್ತಿಗೆ ಆತ ಬೇರೆಯವರಿಂದ ಸಾಲ ಮಾಡಿದ್ದು ಈ ಹಣದಿಂದ ಆ ಸಾಲವನ್ನು ತೀರಿಸಿ ಬರಿಗೈಯಾಗುತ್ತಾನೆ. ಈ ಸಾಲ ಕೊಟ್ಟಿದ್ದು ಸಾರ್ಥಕವಾಯಿತೇ? ಈತನಿಗೆ ಸಾಲ ಕೈಗೆ ಬಂದಾಗ ಅದನ್ನು ತೆಗೆದುಕೊಳ್ಳಲು ಹೋದಾಗ ಆತನ ಹಿಂದೆ ೮–೧೦ ಜನ ಸ್ನೇಹಿತರು. ಇವರಿಗೆಲ್ಲಾ ಕೊಟ್ಟು ಅವನ ಕೈಲಿ ಉಳಿಯುವುದು ನೂರೋ ಇನ್ನೂರೋ ರೂಪಾಯಿಗಳು. ಕೊನೆಗೆ ಮಳೆ ಕೈ ಕೊಡುತ್ತದೆ. ನಂತರ ಸಹಕಾರ ಸಂಘದವರು ರಿಕವರಿಗೆ ಬರುತ್ತಾರೆ. ಇವರು ರಿಕವರಿ ಮಾಡುವುದು ಎಲ್ಲಿಂದ ಬಂತು? ಸಹಕಾರಿ ಸಂಘಗಳವರು ಇಷ್ಟು ಪರ್ಸೆಂಟ್ ಹಣ ರಿಕವರಿ ಮಾಡಿದರೆ ಮಾತ್ರ ಅವರಿಗೆ ಸಾಲ ಕೊಡುವುದಾಗಿ ಜಿಲ್ಲಾ ಬ್ಯಾಂಕಿನವರು ಹೇಳುತ್ತಾರೆ. ನೀವು ೪೦ ಪರ್ಸೆಂಟ್ ಹಣ ರಿಕವರಿ ಮಾಡಿದರೆ ಮಾತ್ರ ನಿಮಗೆ ಸಾಲ ಕೊಡುವುದಾಗಿ ಜಿಲ್ಲಾ ಬ್ಯಾಂಕಿನವರಿಗೆ ಅಪೆಕ್ಸ್ ಬ್ಯಾಂಕಿನವರು ಹೇಳುತ್ತಾರೆ. ನಿಮ್ಮದು ರಿಕವರಿ ಪರ್ಸೆಂಟೇಜ್ ಬಹಳ ಕಡಿಮೆ ಇದೆ, ಜಾಸ್ತಿ ಮಾಡಿಕೊಳ್ಳದಿದ್ದರೆ ನಿಮಗೆ ಕೊಡುವ ಹಣವನ್ನು ನಿಲ್ಲಿಸುತ್ತೇವೆಂದು ಅಪೆಕ್ಸ್ ಬ್ಯಾಂಕ್‌ನವರಿಗೆ ರಿಸರ್ವ್ ಬ್ಯಾಂಕ್‌ನವರು ಹೇಳುತ್ತಾರೆ. ಸಹಕಾರ ಸಂಘಗಳ ಒಂದು ಕಾರ್ಯ ಇಲ್ಲಿ ಶುರು ಆಗುತ್ತದೆ. ಇಂತಹ ಸಂದರ್ಭದಲ್ಲಿ ಇವರು ಏನು ಮಾಡುತ್ತಾರೆ? ಜಿಲ್ಲಾ ಬ್ಯಾಂಕಿನವರು ಸೊಸೈಟಿಗಳಿಗೆ ಒತ್ತಾಯ ಮಾಡುತ್ತಾರೆ. ಆಗ ಪ್ರಾರಂಭವಾಗುತ್ತದೆ ಅಧ್ಯಾಯ. ರೈತ ತೆಗೆದುಕೊಂಡ ಸಾಲವನ್ನು ವಾಪಸ್ ಮಾಡುವುದಿಲ್ಲ. ೪೦ ಪರ್ಸೆಂಟ್ ಹಣ ಜಿಲ್ಲಾ ಬ್ಯಾಂಕುಗಳಿಗೆ ಜೂನ್ ತಿಂಗಳೊಳಗೆ ತಲುಪಬೇಕು. ಮತ್ತೆ ೧ ತಿಂಗಳೋ ಅಥವಾ ೧೫ ದಿವಸದಲ್ಲಿಯೋ ಏನೋ ೪೦ ಕೋಟಿ ರೂಪಾಯಿಗಳು ವಸೂಲು ಆಯಿತು ಎಂದಿದ್ದಾರೆ. ಇದು ಹೇಗೆ ವಸೂಲು ಆಯಿತು? ಇಷ್ಟು ದುಡ್ಡು ಹೇಗೆ ಬಂತು? ಎಲ್ಲಾ ರೆಕಾರ್ಡ್ ಅಡ್ಜಸ್ಟ್‌ಮೆಂಟ್ ಅಷ್ಟೇ. ೨ ಸಾವಿರ ರೂಪಾಯಿಗಳ ಸಾಲ ತೆಗೆದುಕೊಂಡಿದ್ದರೆ 2½ ಸಾವಿರ ರೂಪಾಯಿಗಳ ಬಡ್ಡಿ ಸೇರಿಸಿ ಲೆಕ್ಕ ತೋರಿಸುತ್ತಾರೆ ಮತ್ತೆ ಸ್ವಾಮಿ, ಪ್ರಡ್ಯೂಸ್ ಲೋನ್ ಎಂದು ಬರುತ್ತದೆ. ಮನೆಗಳಲ್ಲಿ ಅಥವಾ ಗೋಡನ್‌ನಲ್ಲಿ ಬತ್ತ ಇರಲಿ ಅಥವಾ ಇಲ್ಲದಿರಲಿ; ಜೋಳ ಇರಲಿ ಅಥವಾ ಇಲ್ಲದಿರಲಿ ಪ್ರಡ್ಯೂಸ್ ಲೋನ್ ಕೊಡುವುದು. ಆಹಾರ ಧಾನ್ಯ ಇದೆಯೋ ಇಲ್ಲವೇ ಎಂದು ರಿಸರ್ವ್ ಬ್ಯಾಂಕ್‌ನವರು ನೋಡುವುದಕ್ಕಾಗುವುದಿಲ್ಲ. ಅಂತಹ ಬೀಗಗಳನ್ನು ಅಲ್ಲಿ ಗೋಡೋನ್‌ಗಳಿಗೆ ಹಾಕಿರುತ್ತಾರೆ. ಹೀಗೆ ೧ ಲಕ್ಷ, ೨ ಲಕ್ಷ ರೂಪಾಯಿಗಳ ಪ್ರಡ್ಯೂಸ್ ಲೋನ್ ಕೊಡಲಾಗುತ್ತದೆ. ರೈತರಿಗೆ ಏನೂ ಗೊತ್ತಿರುವುದಿಲ್ಲ. ಆತ ಸುಮ್ಮನೆ ಸಹಿ ಹಾಕಿರುತ್ತಾನೆ. ಇಲ್ಲಿ 'ಎ' ಕಾಂಪೊನೆಂಟ್, 'ಬಿ' ಕಾಂಪೊನೆಂಟ್ ಎಂದು ಎರಡು ರೀತಿ ಇದೆ. 'ಎ' ಕಾಂಪೊನೆಂಟ್ ಎಂದರೆ ಕ್ಯಾಷ್. ಮತ್ತೆ ಭತ್ತ, ಜೋಳ ಗೋಡನ್‌ನಲ್ಲಿ ಇರಲಿ ಅಥವಾ ಇಲ್ಲದಿರಲಿ ಇಷ್ಟು ದಾಸ್ತಾನು ಇದೆ ಎಂದು ತೋರಿಸುವುದು. ಇದಕ್ಕೆ ನಿದರ್ಶನಗಳು ಇವೆ. ಮೊನ್ನೆ ನಂಜನಗೂಡು ತಾಲ್ಲೂಕಿನ ಹುಲ್ಲಹಳ್ಳಿಯಲ್ಲಿ......

ಒಬ್ಬ ಮಾನ್ಯ ಸದಸ್ಯರು.—ಅನುಭವಿಸಿ ಹೇಳುತ್ತಿದ್ದೀರೋ ಅಥವಾ ಪ್ರತ್ಯಕ್ಷ ನೋಡಿ ಹೇಳುತ್ತಿದ್ದೀರೋ?

ಶ್ರೀ ಎಂ. ಮಹದೇವ್.—ಈ ಅಧ್ಯಾಯ ಮೊನ್ನೆ ಜನವರಿ ತಿಂಗಳಿನಿಂದ ಶುರುವಾಯಿತು.

ಶ್ರೀ ಬಿ.ಎಸ್. ಯಡಿಯೂರಪ್ಪ.—ಭತ್ತ, ಜೋಳ ಇಲ್ಲದಿದ್ದರೆ ಹೋಗಲಿ, ಗೋಡೋನ್ ಆದರೂ ಇದೆಯಲ್ಲಾ?

ಶ್ರೀ ಎಂ. ಮಹದೇವ್.—ಇನ್ನು ಒಂದೂವರೆ ಲಕ್ಷ ರೂಪಾಯಿಗಳ ಪ್ರೊಡ್ಯೂಸ್ ಲೋನ್‌ಗೆ ಹೋಗುತ್ತದೆ. ಮತ್ತೆ ಗೊಬ್ಬರ ಬರುತ್ತದೆ. ಈ ಗೊಬ್ಬರವನ್ನು ಮಾರಾಟ ಮಾಡಬೇಕು. ಈ ಗೊಬ್ಬರ ಮಾರಾಟ ಮಾಡಿದರೆ ೨ ಲಕ್ಷ ರೂಪಾಯಿಗಳು ಬರುವುದಕ್ಕೆ ಸಾಧ್ಯವಿದೆ. ಇಲ್ಲದಿದ್ದರೆ ಸಾಧ್ಯವಾಗುವುದಿಲ್ಲ. ಈ ಗೊಬ್ಬರವನ್ನು ಯಾರೂ ತೆಗೆದುಕೊಳ್ಳುವುದಿಲ್ಲ. ಇದನ್ನು ೧೫ ರಿಂದ ೨೦ ರೂಪಾಯಿಗಳವರೆಗೆ ಕಡಿಮೆಗೆ ಮಾರಾಟ ಮಾಡಬೇಕಾಗುತ್ತದೆ. ಕೆಲವು ಏಜೆಂಟರು ಇದನ್ನೇ ಕಾಯುತ್ತಿರುತ್ತಾರೆ. ಇಷ್ಟು ಕಡಿಮೆ ಬೆಲೆಗೆ ಕೊಟ್ಟರೆ ಇಷ್ಟು ಟನ್ ತೆಗೆದುಕೊಳ್ಳುತ್ತೇವೆಂದು ತೆಗೆದುಕೊಂಡು ಹೋಗುತ್ತಾರೆ. ಹೀಗೆ ಇಲ್ಲಿ ೨ ಲಕ್ಷ ರೂಪಾಯಿಗಳ ಅಡ್ಜಸ್ಟ್‌ಮೆಂಟ್ ಮಾಡುತ್ತಾರೆ. ಇದರಿಂದ ಯಾರಿಗೆ ಸ್ವಾಮಿ ನಷ್ಟ? ಇದರಿಂದಾಗಿ ಬಡ ರೈತರು ಬದುಕುವುದಕ್ಕಾಗುತ್ತದೆಯೇ? ಈ ಅಡ್ಜೆಸ್ಟ್‌ಮೆಂಟನ್ನು ಏನಾದರೂ ಮಾಡಿ ತಪ್ಪಿಸಬೇಕೆಂದು ನಾನು ಹೇಳುತ್ತೇನೆ. ಈ ಅಡ್ಜೆಸ್ಟ್‌ಮೆಂಟು ಮಾಡಿದರೆ ಜಿಲ್ಲಾ ಬ್ಯಾಂಕುಗಳಲ್ಲಿ ಪರ್ಸಂಟೇಜ್ ಹೆಚ್ಚಾಗುತ್ತದೆ. ಈ ರೀತಿ ಜಿಲ್ಲಾ ಬ್ಯಾಂಕುಗಳಲ್ಲಿ ಆದರೆ ಯಾವ ಸಹಕಾರ ಸಂಘ ಉದ್ಧಾರ ಆಗುವುದಕ್ಕೆ ಸಾಧ್ಯವಾಗುತ್ತದೆ? ನೀವು ಯಾವುದೇ ಕಾನೂನು ತಂದರೂ ಇದನ್ನು ತಪ್ಪಿಸುವುದಕ್ಕಾಗುವುದಿಲ್ಲ. ಸಹಕಾರ ಸಂಘಗಳಲ್ಲಿ ಕೆಲಸ ಮಾಡುವವರೆಲ್ಲರಿಗೂ ಇದು ಗೊತ್ತುಂಟು. ಈ ಪಕ್ಷ, ಆ ಪಕ್ಷದವರು ಎಂದು ನಾನು ಹೇಳು

ವುದಕ್ಕೆ ಹೋಗುವುದಿಲ್ಲ. ನಾವು ವಿರೋಧ ಪಕ್ಷದಲ್ಲಿ ಇದ್ದೇನೆಂದು ಈ ವಿಷಯವನ್ನು ಹೇಳುವುದಕ್ಕೆ ಹೋಗುತ್ತಿಲ್ಲ. ವಾಸ್ತವಾಂಶ ಏನು ಎಂಬುದನ್ನು ನಾನು ಹೇಳುತ್ತಿದ್ದೇನೆ. ಇದನ್ನು ತಾವೂ ಒಪ್ಪಿಕೊಳ್ಳಬೇಕು, ನಾವೂ ಒಪ್ಪಿಕೊಳ್ಳಬೇಕು. ಇದು ಓಪನ್ ಸೀಕ್ರೆಟ್ಸ್, ಸಹಕಾರಿ ಕ್ಷೇತ್ರದಲ್ಲಿ ಒಡಾಡುವವರೆಲ್ಲರಿಗೂ ಇದು ಗೊತ್ತಾಗಿಟು. ಆದರೆ ಇದನ್ನು ತಪ್ಪಿಸುವುದರ ಬಗ್ಗೆ, ಈ ತಾರತಮ್ಯವನ್ನು ತಪ್ಪಿಸುವುದರ ಬಗ್ಗೆ ಯಾವುದೇ ಸರ್ಕಾರದವರು ಪ್ರಯತ್ನ ಮಾಡಿಲ್ಲ. ಇದರ ಗಂಭೀರತೆಯ ಬಗ್ಗೆ ನಾನು ಹೇಳುತ್ತಿದ್ದೇನೆ. ಸಹಕಾರ ತತ್ವ ಕೆಡೋದೇ ಇಲ್ಲಿಂದ. ಜಿಲ್ಲಾ ಬ್ಯಾಂಕಿನ ಅಧ್ಯಕ್ಷರುಗಳು ಯಾವ ಮಂತ್ರಿಗಳಿಗಿಂತಲೂ ಕಡಿಮೆ ಇಲ್ಲ. ಕೆಲವರು ಪ್ರಾಮಾಣಿಕತೆಯಿಂದ ಕೆಲಸ ಮಾಡುತ್ತಾರೆ. ಅವರ ಅಸದಳವನ್ನು ಹೇಳುವುದಕ್ಕೆ ಸಾಧ್ಯವಿಲ್ಲ. ಯಾವ ಪಕ್ಷದ ಸರ್ಕಾರ ಅಧಿಕಾರಕ್ಕೆ ಬರುತ್ತದೋ ಆ ಕಡೆ ಈ ಜನಹೋಗುತ್ತಾರೆ. ಜಿಲ್ಲಾ ಬ್ಯಾಂಕಿನ ಚುನಾವಣೆಯಲ್ಲಿರುವ ಲೋಪದೋಷಗಳನ್ನು ತಪ್ಪಿಸಬೇಕಾದರೆ ಚುನಾವಣಾ ಕಾನೂನಿಗೆ ತಿದ್ದುಪಡಿ ಮಾಡಬೇಕು. ತಾಲ್ಲೂಕು ಸೇವಾ ಸಹಕಾರ ಸಂಘಗಳಿಗೆ ಡೈರೆಕ್ಟರ್‌ಗಳಿಗೆ ಚುನಾವಣೆ ಮಾಡುತ್ತೀರಿ. ಇವತ್ತು ಸಹಕಾರ ಕ್ಷೇತ್ರದಲ್ಲಿ ಯಾರು ಪಳಗಿರುತ್ತಾರೆ ಯಾರು ಬುದ್ಧಿವಂತರಿರುತ್ತಾರೆ? ೫೦ ಸಹಕಾರ ಸಂಘಗಳು ಇದ್ದರೆ; ೩೦ ಸಹಕಾರ ಸಂಘಗಳು ಇದ್ದರೆ; ಅವುಗಳಲ್ಲಿ ೧೦ನ್ನು ಕಮರ್ಷಿಯಲ್ ಬ್ಯಾಂಕಿಗೂ ಇನ್ನು ಹತ್ತು ಇನ್ನೊಂದು ಕಡೆಗೋ ಸೇರಿಸಿ, ಕೊನೆಗೆ ತಾವು ಮೂರು ಇಟ್ಟುಕೊಂಡು ಇದ್ದೇ ಇರುತ್ತಾರೆ. ಅವು ಯಾವಾಗಲೂ ಡಿಫಾಲ್ಟರ್ ಆಗಿದ್ದರೂ ಒಂದರಲ್ಲಿ ಮಾತ್ರ ಇವರು ಪ್ರತಿನಿಧಿಯಾಗಿರುತ್ತಾರೆ. ಇದಕ್ಕೆ ಆಡಳಿತ ಮಂಡಲ್ಲಿಯ ಸಹಕಾರ ಕೂಡ ಇರುತ್ತೆ. ಅದು ಮಾತ್ರ ಡಿಫಾಲ್ಟರ್ ಇರುವುದಿಲ್ಲ. ಇನ್ನು ಮಹಾ ಬುದ್ಧಿವಂತರು ಜಾಯಿಂಟ್ ಫಾರ್ಮಿಂಗ್ ಸೊಸೈಟಿ ಎಂದು ರಿಜಿಸ್ಟರ್ ಮಾಡಿಸಿಕೊಂಡು, ಅಲ್ಲಿ ಸಾಲ ತೆಗೆದುಕೊಳ್ಳುವಂತೆಯೇ ಇಲ್ಲ: ಅಲ್ಲಿಂದ ಪ್ರತಿನಿಧಿಯಾಗಿ ಬರುತ್ತಾನೆ. ರೈತನಿಗೆ ಆರ್ಥಿಕವಾಗಿ ಸಹಾಯ ಮಾಡುವಂಥ ಅವಕಾಶ ಇಲ್ಲ. ಈ ವಿಚಾರದಲ್ಲಿ ಏನು ಎನ್ನುವುದೇ ಗೊತ್ತಿರುವುದಿಲ್ಲ. ಆದರೂ ಇವರು ಚುನಾಯಿತರಾಗಿ ಬರುತ್ತಾರೆ.

ಇನ್ನು ಜಿಲ್ಲಾ ಭೂ ಅಭಿವೃದ್ಧಿ ಬ್ಯಾಂಕ್‌ಗಳಲ್ಲಿ ಚುನಾವಣೆ ನಡೆಯುತ್ತದೆ. ಅಲ್ಲಿ ಬಾರೋಯರ್ಸ್ ಮತ್ತು ನಾನ್‌ಬಾರೋಯರ್ಸ್ ಎಂದು ಎರಡು ವರ್ಗ ಇದೆ ಅಲ್ಲಿರತಕ್ಕ ಚುನಾವಣಾ ಪದ್ಧತಿಯನ್ನು ನಾನು ಒಪ್ಪಿಕೊಳ್ಳುತ್ತೇನೆ. ಸಾಲ ಪಡೆದವರ ಕ್ಷೇತ್ರವೂ ಇದೆ, ಸಾಲ ಪಡಿಯದವರ ಕ್ಷೇತ್ರವೂ ಇದೆ, ಅಲ್ಲಿನ ಮತದಾರ ಓಟುಕೊಟ್ಟು ಅಭ್ಯರ್ಥಿಗಳನ್ನು ಚುನಾಯಿಸುತ್ತಾನೆ. ಅದೇ ರೀತಿಯ ಕಾನೂನನ್ನು ತಂದರೆ ಇರತಕ್ಕ ಲೋಪದೋಷವನ್ನು ತಪ್ಪಿಸುವುದಕ್ಕೆ ಅನುಕೂಲವಾಗುತ್ತದೆ. ಇದರಿಂದ ಸೇವಾ ಸಹಕಾರ ಸಂಘದ ಸದಸ್ಯನಾಗಿ, ಜಿಲ್ಲಾ ಬ್ಯಾಂಕ್ ಡೈರೆಕ್ಟರ್ ಆಗಿ ಪ್ರಜಾಪ್ರಭುತ್ವ ಪದ್ಧತಿಯ ಮೇಲೆ ಚುನಾವಣೆಯ ಮೂಲಕ ಬಂದು ರೈತರ ಕಷ್ಟಸುಖಗಳನ್ನು ಬಗೆಹರಿಸುವುದಕ್ಕೆ ಸಾಧ್ಯವಾಗುತ್ತದೆ. ಸರ್ಕಾರದವರು ಇಂಥ ಒಂದು ಕಾನೂನನ್ನು ಜಾರಿಗೆ ತರಬೇಕೆಂಬುದು ಹೇಳುತ್ತೇನೆ. ನಾನು ಆಗಲೇ ಹೇಳಿದಹಾಗೆ ಸಹಕಾರ ಸಂಘಗಳಿಗೆ ಡೈರೆಕ್ಟರ್‌ರಾಗುವವರು ಅವರು ಯಾವ ಪಕ್ಷದ ಸರ್ಕಾರ ಅಧಿಕಾರದಲ್ಲಿರಲಿ, ತಮ್ಮ ಪ್ರಭಾವ ಬೀರಿ ಡೈರೆಕ್ಟರ್‌ಷಿಪ್ ಉಳಿಸಿಕೊಳ್ಳುವುದಕ್ಕೆ ಪ್ರಯತ್ನ ಮಾಡುತ್ತಾರೆ. ರೈತರಿಂದ ನೇರವಾಗಿ ಚುನಾಯಿತರಾಗಿ ಬಂದರೆ, ಕ್ಷೇತ್ರಗಳಿಗೆ ಹೋದಾಗ, ಜಿಲ್ಲಾ ಬ್ಯಾಂಕಿನಲ್ಲಿ ತಾವು ಏನು ಮಾಡಿದ್ದೀರಿ? ಇಷ್ಟು ಅನ್ಯಾಯಗಳು ನಡೆಯುತ್ತಿದ್ದರೂ ತಾವು ಸುಮ್ಮನೆ ಇರುವುದಕ್ಕೆ ಕಾರಣ ಏನು? ನಿಮಗೆ ಸರಿಯಾಗಿ ಸಾಲ ಕೊಡುತ್ತಿಲ್ಲ ಎಂದು ಒತ್ತಾಯ ಮಾಡುತ್ತಾರೆ, ರೈತರ ಹಿಡಿತ ಇರಬೇಕಾದುದು ಒಳ್ಳೆಯದೆಂದು ಹೇಳುತ್ತೇನೆ. ಇರುವಂಥ ಪದ್ಧತಿಯನ್ನು ಬದಲಾವಣೆ ಮಾಡಿದರೆ ಮಾತ್ರ ಸಹಕಾರ ಚಳುವಳಿ ಯಶಸ್ವಿಯಾಗುತ್ತದೆ. ಇನ್ನು ಸಾಲ ಕೊಡುವಾಗಲೂ ತಾರತಮ್ಯ ಇದೆ. ಅವರಿಗೆ ಬೇಕಾದ ಸಹಕಾರ ಸಂಘಗಳಿಗೆ ಯಾವ ನಿಯಮವೂ ಇಲ್ಲದೇ ಸಾಲ ಬಿಡುಗಡೆ ಮಾಡುತ್ತಾರೆ. ಬೇಕಿಲ್ಲದ ಸಹಕಾರ ಸಂಘಗಳಿಗೆ ೫–೧೦ ಸಾವಿರ ರೂಪಾಯಿ ಕಡ್ಡಾಯವಾಗಿ ಕಟ್ಟಿ ಹಣ ಬಿಡುಗಡೆ ಮಾಡಿಸಿಕೊಂಡು ಹೋಗಬೇಕಾದ ಪರಿಸ್ಥಿತಿ ಇದೆ. ಈ ಒಂದು ತಾರತಮ್ಯ ಏತಕ್ಕೆ ಎಂದು ನಾನು ಕೇಳುತ್ತೇನೆ. ಮೈಸೂರು ಜಿಲ್ಲೆಯಲ್ಲಿರತಕ್ಕ ಜಿಲ್ಲಾ ಸಹಕಾರ ಬ್ಯಾಂಕ್‌ನಲ್ಲಿ ಬರೀ ವಾಹನಗಳ ಓಡಾಟದ ಖರ್ಚು ಅಂದರೆ ಪೆಟ್ರೋಲ್‌ಗಾಗಿ ಖರ್ಚು ಮಾಡಿರುವುದು ಸುಮಾರು ೧೦ರಿಂದ ೧೨ ಸಾವಿರ ರೂಪಾಯಿಗಳವರಗೂ ಲೆಕ್ಕ ಇಟ್ಟಿದ್ದಾರೆ. ಪ್ರತಿ ತಿಂಗಳು ಇಷ್ಟೊಂದು ಖರ್ಚು ಮಾಡುತ್ತಿದ್ದಾರೆ.

ಶ್ರೀ ಎಸ್.ಆರ್. ಲಕ್ಷ್ಮಯ್ಯ.—ಇತ್ತೀಚೆಗೆ ಇದು ಜಾಸ್ತಿಯಾಯಿತೋ?

ಶ್ರೀ ಎಂ. ಮಹದೇವ್.—ಜನವರಿಯಿಂದ ಈಚೆಗೆ ೧೦,೦೦೦ ಆಗುತ್ತಿದೆ. ಅದಕ್ಕೆ ಮುಂಚೆ ೫ ಸಾವಿರ ರೂಪಾಯಿ ಆಗುತ್ತಿತ್ತು. ಬಡ ಬೋರೇಗೌಡನ ಹಣವನ್ನು ಏತಕ್ಕೆ ಖರ್ಚು ಮಾಡ ಬೇಕೆಂದು ಕೇಳುತ್ತೇನೆ, ಜೊತೆಗೆ ರಿಸರ್ವ್ ಬ್ಯಾಂಕ್ ಆದೇಶವನ್ನು ಉಲ್ಲಂಘನೆ ಮಾಡಿ, ಹಳೇ ಕಾರನ್ನು ಆಧುನಿಕ ಗೊಳಿಸಿ, ಬೇರೆಯವರ ಹೆಸರಿನಲ್ಲಿ ೬೦,೦೦೦ ರೂಪಾಯಿಗಳಿಗೆ ಮಾರಾಟ ಮಾಡಿದ್ದಾರೆ. ಇದು ನ್ಯಾಯವೇ? ಇದರ ಅವಶ್ಯಕತೆ ಇತ್ತೇ? ಹಳೇ ಕಾರುಗಳನ್ನೇ ಏತಕ್ಕೆ ಇಟ್ಟು ಕೊಳ್ಳಬಾರದಾಗಿತ್ತು?

ಅಧ್ಯಕ್ಷರೇ, ಮತ್ತೊಂದು ವಿಚಾರ ಹೇಳಬೇಕೆಂದರೆ, ರಿಸರ್ವ್ ಬ್ಯಾಂಕ್ ಆದೇಶ ಕೊಟ್ಟಿದೆ, ಏನೆಂದರೆ ಜಿಲ್ಲಾ ಸಹಕಾರ ಬ್ಯಾಂಕ್‌ನವರು ನೀವು ಕಾನೂನು ಉಲ್ಲಂಘನೆ ಮಾಡಿ ರೆಕವರಿ ಮಾಡುತ್ತೀರಿ ಮತ್ತೆ ಅಡ್ವಾನ್ಸ್ ಮಾಡುತ್ತೀರಿ ಎಂದು ಹೇಳಿದ್ದಾರೆ. ಅವುಗಳನ್ನೆಲ್ಲಾ ಹೇಳುತ್ತಾ ಹೋದರೆ ಸಮಯ ಆಗುತ್ತದೆ. ಇವೊತ್ತು ಪೆಟ್ರೋಲ್‌ಗೆ ಖರ್ಚು ಮಾಡಿರುವಂಥಾದ್ದು, ಮತ್ತೆ ಹಳೆಯ ಕಾರನ್ನು ಹೊಸ ನಮೂನೆಯಲ್ಲಿ ಮಾರಾಟ ಮಾಡಿರುವಂಥಾದ್ದು ಈ ತರಹ ಅನೇಕ ಲೋಪ ದೋಷ ಗಳು ಇವೆ. ೩೮ ಜನರನ್ನು ಅಪಾಯಿಂಟ್‌ಮೆಂಟ್ ಮಾಡಿಕೊಳ್ಳುವಾಗ ಭ್ರಷ್ಟಾಚಾರ ನಡೆದಿದೆ. ಇದರ ಬಗ್ಗೆ ಸಿಬಿಐ ತನಿಖೆ ಮಾಡಬೇಕು. ರಾಜಕೀಯ ಉದ್ದೇಶಕ್ಕೋಸ್ಕರ ಇದೊಂದು ಬೆಳವಣಿಗೆ ಯಾಗಿದೆ ಇದನ್ನು ತಾವು ತಡೆಗಟ್ಟಬೇಕು.

ಇನ್ನು ಗೋಡೌನ್‌ಗಳನ್ನು ಕಟ್ಟಿಸುತ್ತಿರುವ ಬಗ್ಗೆ ಹೇಳಿ ನನ್ನ ಮಾತನ್ನು ಅಲ್ಲಿಗೆ ಸೀಮಿತ ಮಾಡುತ್ತೇನೆ. ಸಹಕಾರ ಸಂಘಗಳ ಗೋಡೌನ್ ಕಟ್ಟಡಗಳು ಮಂಜೂರು ಆಗುತ್ತವೆ. ಅವು ಮಂಜೂರಾದ ಕೂಡಲೇ ಆ ಕಟ್ಟಡಗಳನ್ನು ಪೂರ್ತಿ ಮಾಡಬೇಕು. ಅವುಗಳನ್ನು ಪೂರ್ತಿ ಮಾಡದೇ ೩,೪,೫ ವರ್ಷಗಳ ಕಾಲ ಹಾಗೆ ಬಿಟ್ಟು ಬಿಟ್ಟರೆ ಮೆಟೀರಿಯಲ್ ಕಾಸ್ಟ್ ಎಷ್ಟು ಹೆಚ್ಚಾಗುತ್ತದೆ? ಆಯಾ ವರ್ಷಗಳಲ್ಲಿಯೇ ಆ ಗೋಡನ್‌ಗಳನ್ನು ಕಟ್ಟಿ ಮುಗಿಸಬೇಕು ತಾವು ನಮ್ಮ ರಾಜ್ಯದಲ್ಲಿ ವರ್ಷಕ್ಕೆ ೧೦೦೦ ಗೋಡೌನ್ ಕಟ್ಟುವುದಕ್ಕೆ ಸಾಧ್ಯವಿಲ್ಲ ಎಂದರೆ ೫೦೦ ಗೋಡೌಗಳನ್ನು ಕಟ್ಟಿ, ಅದೂ ಸಾಧ್ಯ ವಾಗದಿದ್ದರೆ ೨೫೦ ಗೋಡೌನ್‌ಗಳನ್ನು ಕಟ್ಟಿ ಅಂದರೆ ಅವು ಆಯಾ ವರ್ಷದಲ್ಲಿಯೇ ಮುಗಿಯಬೇಕು. ಈಗ ನಾನು ನಮ್ಮ ತಾಲ್ಲೂಕಿನಿಂದ ಬಂದಿರತಕ್ಕ ಅಧಿಕೃತ ಮಾಹಿತಿ ಪ್ರಕಾರ ಹೇಳುವುದಾದರೆ ನಮ್ಮಲ್ಲಿ ೧೮ ಸೇವಾ ಸಹಕಾರ ಸಂಘಗಳಿಗೆ ಗೋಡೌನ್‌ಗಳು ಮಂಜೂರಾಗಿತ್ತು. ಆದರೆ ಯಾವ ಗೋಡನ್ ಗಳೂ ಕಂಪ್ಲೀಟ್ ಆಗಿಲ್ಲ. ಈಗ ಅವು ಫೌಂಡೇಷನ್‌ನಲ್ಲಿ, ಬೇಸ್‌ಮೆಂಟ್ ಲೆವಲ್‌ನಲ್ಲಿ, ಪ್ಲಿಂತ್ ಲೆವಲ್‌ನಲ್ಲಿ, ಇನ್ನೂ ಪ್ರಾರಂಭ ಆಗದೇ ಇರುವ ರೀತಿಯಲ್ಲಿವೆ. ಒಂದು ಕೂಡ ಕಂಪ್ಲೀಟ್ ಆಗಿಲ್ಲ.

ಉಪಾಧ್ಯಕ್ಷರು.—ಮಾನ್ಯ ಸದಸ್ಯರು ತಮ್ಮ ಭಾಷಣವನ್ನು ಬೇಗ ಮುಗಿಸಬೇಕು.

ಶ್ರೀ ಎಂ. ಮಹದೇವ್.—ಅಧ್ಯಕ್ಷರೆ, ನಾನು ಎಲ್ಲೆಲ್ಲಿ ಲೋಪದೋಷ ಇದೆ ಅದನ್ನು ಹೇಳು ತ್ತಿದ್ದೇನೆ. ನಾನು ಆ ಒಂದು ಚೌಕಟ್ಟಿನಲ್ಲಿಯೇ ಮಾತನಾಡುತ್ತಿದ್ದೇನೆ ಆ ಒಂದು ಚೌಕಟ್ಟು ಬಿಟ್ಟು ಹೋದಾಗ ತಾವು ಕುಳಿತುಕೊಳ್ಳಿ ಎಂದು ಹೇಳಿದ ತಕ್ಷಣ ಕುಳಿತುಕೊಳ್ಳುತ್ತೇನೆ. ತಾವು ಇದ್ದಾಗಲೇ ನಮಗೆ ಭಾಷಣ ಮಾಡಲಿಕ್ಕೆ ಅವಕಾಶ ಸಿಕ್ಕುವುದು. ಆದ್ದರಿಂದ, ಇದೊಂದು ವಿಚಾರ ಹೇಳಿ ಮುಗಿಸಿ ಬಿಡುತ್ತೇನೆ. ಈ ಗೋಡನ್ ಕಂಪ್ಲೀಟ್ ಮಾಡಿಸತಕ್ಕ ವಿಚಾರದಲ್ಲಿ ಸರ್ಕಾರ ಆಸಕ್ತಿ ವಹಿಸಬೇಕಾಗು ತ್ತದೆ. ಏಕೆಂದರೆ ಮಾರ್ಚಿ ತಿಂಗಳಲ್ಲಿ ಇದಕ್ಕೆ ಇಟ್ಟ ಹಣ ಹೊರಟು ಹೋಗು ತ್ತದೆ, ಪುನಃ ಮಂಜೂ ರಾತಿ ತೆಗೆದುಕೊಳ್ಳಬೇಕಾದರೆ ಪ್ರೋಸೆಸ್‌ನಿಂದ ಕಷ್ಟವಾಗುತ್ತದೆ. ಇದು ರಿಜಿಸ್ಟ್ರಾರ್ ಇಂದ ಡೆಪ್ಯುಟಿ ರಿಜಿಸ್ಟ್ರಾರ್‌ಗೆ ಹೋಗುವುದು ಅನಂತರ ಅಸಿಸ್ಟೆಂಟ್ ರಿಜಿಸ್ಟ್ರಾರ್‌ಗೆ ಹೋಗುವ ಒಂದು ಪ್ರೋಸೆಸ್ ಏನಿದೆ ಇದನ್ನು ತೆಗೆದು ಹಾಕಬೇಕಾದರೆ, ಇದನ್ನೇ ಒಂದು ಸಪರೇಟ್ ಇಲಾಖೆಗೆ ಕೊಟ್ಟು, ರಾಜ್ಯದಲ್ಲಿ ಎಷ್ಟು ಗೋಡನ್‌ಗಳು ಮಂಜೂರಾಗಿರುತ್ತವೆ ಅವುಗಳನ್ನು ಅಷ್ಟು ಅವಧಿಯಲ್ಲಿ ಕಂಪ್ಲೀಟ್ ಮಾಡ ಲಿಕ್ಕೆ ಸಿಬ್ಬಂದಿ ನೇಮಕ ಮಾಡಿದರೆ, ಪ್ರತಿಯೊಂದು ಗ್ರಾಮಗಳಲ್ಲಿಯೂ ಒಂದೊಂದು ಗೋಡನ್ ಆಯಿತು ಎಂದರೆ ಅನುಕೂಲವಾಗುತ್ತದೆ. ಈ ಒಂದು ಸಲಹೆ ನಾನು ಕೊಡುತ್ತೇನೆ. ಇನ್ನು ತಾಲ್ಲೂಕು ಮಾರ್ಕೆಟಿಂಗ್ ಸೊಸೈಟಿಗಳು ಏನಿವೆ ಇವು ಲಾಸ್‌ನಲ್ಲಿ ಬರಲಿಕ್ಕೆ ಕಾರಣ ಏನು? ಇದರಲ್ಲಿ ರಿಜಿಸ್ಟ್ರಾರ್ ಕಾರ್ಯದರ್ಶಿಯಾಗಿರುತ್ತಾರೆ. ಅಸಿಸ್ಟೆಂಟ್ ರಿಜಿಸ್ಟ್ರಾರ್ ಕೂಡ ಅಲ್ಲಿ ಇರುತ್ತಾರೆ. ಡೆಪ್ಯೂಟಿ ರಿಜಿಸ್ಟ್ರಾರ್ ಮೇಲ್ವಿಚಾರಣೆಯಲ್ಲಿ ಇರುತ್ತಾರೆ. ಆಡಳಿತ ಮಂಡಲಿ ಕೂಡ ಇರುತ್ತದೆ. ತಾಲ್ಲೂಕು ಮಾರ್ಕೆಟಿಂಗ್ ಸೊಸೈಟಿ ನಿಜವಾಗಿ ಚೆನ್ನಾಗಿ ಕೆಲಸ ಮಾಡಿದರೆ ಎಲ್ಲಾ ಸೊಸೈಟಿಗಳಿಗಿಂತಲೂ ಹೆಚ್ಚು ಲಾಭ ಸಂಪಾದನೆ ಮಾಡಬಹುದು. ಮೂಲತಃ ಪ್ಯಾಡಿ ಪ್ರಕ್ಯೂರ್‌ಮೆಂಟ್ ಆಯಾ ಪ್ರದೇಶಕ್ಕನು ಗುಣವಾಗಿ ತಾಲ್ಲೂಕು ಮಾರ್ಕೆಟಿಂಗ್ ಸೊಸೈಟಿಗೆ ಕೊಡುತ್ತಾರೆ ಆಯಾ ಸೊಸೈಟಿಯಲ್ಲಿ ಪ್ರಕ್ಯೂರ್ ಮೆಂಟ್ ಆ ಕೆಪಾಸಿಟಿ ತಕ್ಕಹಾಗೆ ೩೦,೪೦,೫೦ ಸಾವಿರ ಕ್ವಿಂಟಾಲ್ ಹೀಗೆ ಪ್ರಕ್ಯೂರ್ ಆಗುತ್ತದೆ.

ಇದರಲ್ಲಿ ಎಷ್ಟು ಸ್ವಾಮಿಗೆ ಪರ್‌ಸೆಂಟೇಜ್ ಇಳುವರಿ ಬರುವುದು. ೧೫–೧೬ ಸಾವಿರ ಕ್ವಿಂಟಲ್‌ಗೆ ೩೦೦೦ ಕ್ವಿಂಟಲ್ ಅಕ್ಕಿ ಇಳುವರಿ ಬರುತ್ತದೆ. ೪೦ ಸಾವಿರ ಕ್ವಿಂಟಲ್‌ಗೆ ಎಷ್ಟು ಬರಬೇಕು? ಅಷ್ಟು ಬರುತ್ತಿದೆಯೇ? ರಾಜ್ಯದಲ್ಲಿ ಯಾವ ಮಾರ್ಕೆಟಿಂಗ್ ಸೊಸೈಟಿ ಇಳುವರಿ ತೋರಿಸಿದೆ. ಏತಕ್ಕೆ ಇಳುವರಿ ಕಡಿಮೆಯಾಗುತ್ತಿದೆ. ೪೨೧ ಜನ ಆಡಿಟರ್ಸ್ ಇರುತ್ತಾರೆ, ರಿಜಿಸ್ಟ್ರಾರ್ ಇರುತ್ತಾರೆ, ಡೆಪ್ಯುಟಿ ರಿಜಿಸ್ಟ್ರಾರ್ ಇರುತ್ತಾರೆ. ಒಂದೊಂದು ತಾಲ್ಲೂಕು ಮಾರ್ಕೆಟಿಂಗ್ ಸೊಸೈಟಿಯಲ್ಲಿ ೪೦,೫೦,೬೦ ಸಾವಿರ ಕ್ವಿಂಟಲ್ ಪ್ರಕ್ಯೂರ್ ಮಾಡುತ್ತಾರೆ. ಎಷ್ಟು ಕ್ವಿಂಟಲ್ ಇಳುವರಿ ಬರುತ್ತದೆ ? ಸರಿಯಾದ ರೀತಿಯಲ್ಲಿ ಇಳುವರಿ ಬಂದರೆ ಷೇರ್‌ಕ್ಯಾಪಿಟಲ್ ಏತಕ್ಕೆ ಬೇಕು ಸೊಸೈಟಿ ಏತಕ್ಕೆ ಲಾಸ್ ಆಗುತ್ತದೆ ? ಇವೊತ್ತು ತಾಲ್ಲೂಕು ಮಾರ್ಕೆಟಿಂಗ್ ಸೊಸೈಟಿಗಳಲ್ಲಿ ಎಷ್ಟೆಷ್ಟು ಸಾವಿರ ಕ್ವಿಂಟಲ್ ಪ್ರಕ್ಯೂರ್ ಮಾಡಿದ್ದಾರೆ. ಸೂಪರ್‌ಸೀಡ್ ಮಾಡಿದರೂ ಅದೇ ಪರಿಸ್ಥಿತಿ, ಆಡಳಿತ ಮಂಡಲಿ ಇದ್ದರೂ ಅದೇ ಪರಿಸ್ಥಿತಿ ಈ ರೀತಿ ಇರುವಾಗ ಅಧಿಕಾರಿಗಳು ಸ್ಥಳದಲ್ಲಿ ಏನು ಮಾಡುತ್ತಿದ್ದಾರೆ ಸ್ವಾಮಿ. ಅಲ್ಲಿ ೪೪೧ ಆಡಿಟರ್ಸ್ ನೇಮಿಸಿರುವುದು ಏತಕ್ಕೆ ? ಬೆಳಿಗ್ಗೆ ಎದ್ದರೆ ಅವರಿಗೆ ಏನು ಕೆಲಸ ? ಅಸಿಸ್ಟೆಂಟ್ ರಿಜಿಸ್ಟ್ರಾರನ್ನು ಅವರಿಗೆ ಅಲ್ಲಿ ಸೆಕ್ರೆಟರಿಯಾಗಿ ಹಾಕಿದ್ದಾರೆ ಅವರಿಗೆ ಏನು ಕೆಲಸ ಇದೆ ? ಅವರು ಏನು ಮಾಡುತ್ತಿದ್ದಾರೆ ?

ಒಬ್ಬ ಮಾನ್ಯ ಸದಸ್ಯರು.—ಈ ಸರ್ಕಾರ ಬಂದ ಮೇಲೆ ಯಾವ ಪ್ರಕ್ಯೂರ್‌ಮೆಂಟ್ ಮಾಡಲಿಕೆ ಹೋಗಿಲ್ಲ.

ಉಪಾಧ್ಯಕ್ಷರು.—ಅವರು ಹಿಂದಿನದು ಹೇಳಿದರು.

ಒಬ್ಬ ಮಾನ್ಯ ಸದಸ್ಯರು.—ಗತ ಕಾಲದ ವೈಭವ ಹೇಳುತ್ತಿದ್ದಾರೆ.

ಶ್ರೀ ಎಂ. ಮಹದೇವ್.—ಕಳ್ಳ ಎಂದರೆ ನೀವು ಏತಕ್ಕೆ ಬೆನ್ನು ಮುಟ್ಟಿ ನೋಡಿಕೊಳ್ಳುತ್ತೀರಿ ? ಅಲ್ಲಿ ಅಧಿಕಾರಿಗಳು ಕಟ್ಟುನಿಟ್ಟಾಗಿ ಕೆಲಸ ಮಾಡಬೇಕಾಗುತ್ತದೆ. ಆಡಳಿತ ಮಂಡಳಿಯವರು ಬಹುಶಃ ಅದರ ಬಗ್ಗೆ ನಿಗಾ ವಹಿಸದೇ, ಅಧಿಕಾರಿಗಳು, ಆಡಿಟರುಗಳು ಸರಿಯಾಗಿ ಕೆಲಸ ಮಾಡದೇ ಇದ್ದರೆ ಈ ರೀತಿಯಾಗುತ್ತಿದೆ. ಲಾಸ್ ಆಗಿದ್ದಕ್ಕೆ ಆಡಳಿತ ಮಂಡಳಿ ಮೇಲೆ ೬೫ರ ಎನ್‌ಕ್ವಯಿರಿಗೆ ಹಾಕಿದೆ. ಅಲ್ಲಿ ಡೈರೆಕ್ಟರು ಮೀಟಿಂಗ್ ಟೈಮ್‌ಗೆ ಬರುತ್ತಾರೆ ರೆಸಲ್ಯೂಷನ್ ಪಾಸ್ ಆಗುತ್ತದೆ. ಕೆಲವರಿಗೆ ಮೀಟಿಂಗ್‌ನಲ್ಲಿ ಏನು ರೆಸಲ್ಯೂಷನ್ ಆಯಿತು ಎನ್ನುವುದು ಗೊತ್ತಾಗುವುದಿಲ್ಲ. ಏನೋ ರೆಸಲ್ಯೂಷನ್ ಮಾಡುತ್ತಾರೆಂದು ತಿಳಿದುಕೊಂಡಿರುತ್ತಾರೆ ಈಗ ೬೫ರ ಎನ್‌ಕ್ವಯಿರಿಗೆ ಹಾಕಿದಾಗ ಅಸಿಸ್ಟೆಂಟ್ ರಿಜಿಸ್ಟ್ರಾರ್ ಏತಕ್ಕೆ ಇನ್‌ವಾಲ್ವ್ ಮಾಡುವುದಿಲ್ಲ ? ಖಾಸಗಿ ಜನರನ್ನು ೬೫ರ ಎನ್‌ಕ್ವಯಿರಿಗೆ ಹಾಕುತ್ತೀರಿ, ಅದೇ ರೀತಿ ಅವರನ್ನು ಸೇರಿಸಬೇಕು. ಏಕೆಂದರೆ ಅವರು ಸಹ ಆ ಒಂದು ತಪ್ಪಿನಲ್ಲಿ ಭಾಗಿಗಳಾಗಿರುತ್ತಾರೆ. ಆಡಳಿತ ಮಂಡಳಿಯು ಮೇಲೆ ಲಾಸಸ್ ಜವಾಬ್ದಾರಿ ಮಾಡುತ್ತಾರೆ ಎಂದರೆ, ನಿಮ್ಮ ಸೆಕ್ರೆಟರಿ ಏನು ಮಾಡುತ್ತಾರೆ ? ಇಂಥಾದ್ದನ್ನು ನಾನು ಒಪ್ಪಿಲ್ಲ ಎಂದು ಏನಾದರೂ ಬರೆದುಕೊಂಡು ಇಲಾಖೆಗೆ ಕೊಟ್ಟಿರುತ್ತಾನೆಯೇ ? ಆತ ಏನು ಮಾಡಿರುತ್ತಾನೆ ? ಈ ೬೫ರ ಎನ್‌ಕ್ವಯಿರಿಯನ್ನು ತಿದ್ದುಪಡಿ ಮಾಡಲೇಬೆ ಕಾಗುತ್ತದೆ. ಆಗ ಜಾಯಿಂಟ್ ರೆಸ್‌ಪಾನ್‌ಸಿಬಿಲಿಟಿ ಇರುತ್ತದೆ. ಆಯಾ ಜಿಲ್ಲಾ ಬ್ಯಾಂಕ್ ಸೂಪರ್‌ಸೀಡ್ ಮಾಡಬೇಕೆಂದು ಮಾಡಿದಾಗ ಅವರನ್ನು ಇನ್‌ವಾಲ್ವ್ ಮಾಡಬೇಕಾಗುತ್ತದೆ. ತಾಲ್ಲೂಕು ಮಾರ್ಕೆಟಿಂಗ್ ಸೊಸೈಟಿ ಅಥವಾ ಯಾವುದೇ ಸೊಸೈಟಿ ಆಗಲಿ ಯಾವುದರಲ್ಲಿಯೇ ಆಗಲಿ, ಆ ಅಧಿಕಾರಿಗಳನ್ನು ಸೇರಿಸಿ ೬೫ರ ಎನ್‌ಕ್ವಯಿರಿ ಮಾಡಬೇಕಾಗುತ್ತದೆ.

೪–೦೦ ಪಿ ಎಂ.

ರಾಜ್ಯಮಟ್ಟದಲ್ಲಿ ಅಪೆಕ್ಸ್ ಬ್ಯಾಂಕುಗಳು ಇರುತ್ತವೆ. ಇದರಲ್ಲಿ ನೌಕರರಿಗೆ ಬಹಳ ಡಿಮ್ಯಾಂಡ್ ಇರುತ್ತದೆ. ಇಲ್ಲಿ ಸಿಕ್ಕತಕ್ಕ ಸಂಬಳ ಯಾವ ರಿಸರ್ವ್ ಬ್ಯಾಂಕ್‌ನಲ್ಲೂ ಕೂಡ ಸಿಕ್ಕುವುದಿಲ್ಲ. ಅಪೆಕ್ಸ್ ಬ್ಯಾಂಕ್‌ನಲ್ಲಿ ಅರ್ಜಿಗಳನ್ನು ಹುದ್ದೆಗಾಗಿ ಕೋರಿದರೆ ಅದರಲ್ಲಿ ಬಹಳ ಜನರ ಆಸಕ್ತಿ ಇರುತ್ತದೆ. ಅಲ್ಲಿ ಕೆಲವು ಸಂದರ್ಭದಲ್ಲಿ ಸಂಬಳಕ್ಕಿಂತ ಗಿಂಬಳವೇ ಜಾಸ್ತಿ ಇರುತ್ತದೆ. ಅಲ್ಲಿ ಯಾವ ನಿಯಮಗಳನ್ನನುಸರಿಸಿ ನೌಕರರನ್ನು ನೇಮಕ ಮಾಡಿಕೊಳ್ಳುತ್ತಾರೋ ಗೊತ್ತಿಲ್ಲ. ಇರತಕ್ಕವರಿಗೆ ಪ್ರೊಮೋಷನ್ ಕೊಡುವಾಗ ಏನಾದರೂ ಒಂದು ಕ್ರಮ ಇದೆಯೇ ಎಂಬುದನ್ನು ಕೇಳಬೇಕಾಗಿದೆ. ಸ್ವಾಮಿ, ನಾನಾದರೂ ಹೇಳುತ್ತೇನೆ, ಪರ್ಸನಲ್ ಸೆಕ್ಷನ್‌ಗೆ ಅಥವಾ ಬೇರೆ ಕಮರ್ಷಿಯಲ್ ಬ್ಯಾಂಕ್‌ಗಳಲ್ಲಿ ಮಾಡುವಂತೆ ನೀವು ರಿಟನ್ ಟೆಸ್ಟನ್ನು ಮಾಡಿ ಅವರನ್ನು ಅರ್ಹತೆಯ ಮೇಲೆ ಇಂಟರ್‌ವ್ಯೂ ಮಾಡಿ, ನೇಮಕಮಾಡಿಕೊಳ್ಳಬೇಕು. ಅದು ಬಿಟ್ಟು ನಾನು ಅಧ್ಯಕ್ಷನಾದೆ, ಇವನು ನಮ್ಮ ಸ್ನೇಹಿತರ ಮಗ, ಇವರು ನಮಗೆ ತುಂಬಾ ಬೇಕಾದವರು ಎಂದು ಕೆಲಸ ಕೊಡುವುದನ್ನು ಬಿಡಬೇಕು.

ನಬಾರ್ಡ್ಸ್ ಸಿಸ್ಟಂನ್ನು ಅಪೆಕ್ಸ್ ಬ್ಯಾಂಕ್‌ನಲ್ಲಿ ಅನುಸರಿಸುತ್ತಿದ್ದಾರೆ. ಆದರೆ ಅದರ ಪ್ರಕಾರ ಅಪೆಕ್ಸ್ ಬ್ಯಾಂಕ್‌ನಲ್ಲಿ ಪ್ರೊಮೋಷನ್ ಕೊಡಬೇಕು. ಆದರೆ ಅದು ನಡೆಯುತ್ತಿಲ್ಲ. ಇದರ ಬಗ್ಗೆ ಮಾನ್ಯ ಸಚಿವರ ಗಮನವನ್ನು ಸೆಳೆಯುತ್ತಿದ್ದೇನೆ. ಮತ್ತು ಈ ಲೋಪದೋಷಗಳನ್ನು ಸರಿಪಡಿಸಬೇಕೆಂದು ಮನವಿ ಮಾಡಿಕೊಂಡು ಅಲ್ಲಿ ಇನ್ನು ಮುಂದೆ ಕೆಲಸಕ್ಕೆ ತೆಗೆದುಕೊಳ್ಳುವಾಗ ರಿಟನ್ ಟೆಸ್ಟ್‌ನ್ನು ಮಾಡಿ ಕಮರ್ಷಿಯಲ್ ಬ್ಯಾಂಕ್‌ನವರು ಮಾಡುವಂತೆ ನಿಯಮಾವಳಿಯ ಪ್ರಕಾರ ಪರೀಕ್ಷೆ ಮಾಡಿ ನೇಮಕ ಮಾಡಿಕೊಳ್ಳಬೇಕೆಂದು ಹೇಳಿ ಇಷ್ಟು ಮಾತನಾಡಲು ಅವಕಾಶವನ್ನು ಕೊಟ್ಟ ತಮಗೆ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

† ಶ್ರೀ ಬಿ. ಜಿ. ಬಣಕಾರ್ (ಹಿರೆಕೆರೂರು).—ಸನ್ಮಾನ್ಯ ಸಭಾಧ್ಯಕ್ಷರೆ, ಮಾನ್ಯ ಸಹಕಾರ ಮಂತ್ರಿಗಳು ಮಂಡಿಸಿರುವ ಬೇಡಿಕೆಗಳನ್ನು ಬೆಂಬಲಿಸಲಿಕ್ಕೆ ನನಗೆ ತುಂಬಾ ಸಂತೋಷವಾಗುತ್ತದೆ. ನಮ್ಮ ರಾಜ್ಯದ ಜನಸಂಖ್ಯೆ ೩.೭೦ ಕೋಟಿ ಇದೆ. ಇದರಲ್ಲಿ ಹಳ್ಳಿಗಾಡಿನಲ್ಲಿ ೨.೬ ಕೋಟಿ ಜನ ಇದ್ದಾರೆ. ಇಷ್ಟು ಜನರ ಹಿತವನ್ನು ಮಾಡುವುದು ಈ ಸಹಕಾರ ಕ್ಷೇತ್ರದ ಮೂಲ ಉದ್ದೇಶ ವಾಗಿದೆ. ನಮ್ಮ ದೇಶದಲ್ಲಿ ಸಹಕಾರಿ ಚಳುವಳಿ ಬಂದು ೧೦೦ ವರ್ಷವಾಗಿದೆ. ಇಷ್ಟು ವರ್ಷಗಳಲ್ಲಿ ನಾವು ಸಾಧಿಸಿರುವುದಾದರೂ ಏನೆಂದು ನೋಡಿದರೆ ಅದು ಏನೇನೂ ಸಮರ್ಪಕವಾಗಿಲ್ಲ. ನಮ್ಮ ಸಹಕಾರ ಕ್ಷೇತ್ರ ಎಷ್ಟು ವೇಗವಾಗಿ ಹೋಗುತ್ತಿದೆ ಅಷ್ಟೇ ವೇಗವಾಗಿ ಮುರಿದು ಬೀಳುತ್ತಿದೆ. ಅನೇಕ ಕಡೆಗಳಲ್ಲಿ ಲೋಪದೋಷಗಳು ಕಂಡು ಬರುತ್ತಿವೆ. ಇದನ್ನು ಸರಿಪಡಿಸುವುದು ರಾಜ್ಯ ದಲ್ಲಿರತಕ್ಕ ಎಲ್ಲಾ ಸಹಕಾರಿ ಸಂಘಗಳ ಕರ್ತವ್ಯ. ಆದ್ದರಿಂದ ಈ ಸಹಕಾರಿ ಸಂಘಗಳು ಚೆನ್ನಾಗಿ ಕೆಲಸಮಾಡಿ ರಾಜ್ಯದ ಜನತೆಯ ಹಿತವನ್ನು ಕಾಪಾಡುವುದು ಎಲ್ಲರ ಮೂಲ ಉದ್ದೇಶ. ಇದರಲ್ಲಿ ಅಧಿಕಾರೇತರರಿಗಿಂತ ಅಧಿಕಾರಿಗಳ ಮೇಲೆ ಹೆಚ್ಚಿನ ಜವಾಬ್ದಾರಿ ಇದೆಯೆಂದರೆ ತಪ್ಪಾಗಲಾರದು. ತಾಲ್ಲೂಕು ಮಟ್ಟದಲ್ಲಿ ಕೋ-ಆಪರೇಟಿವ್ ಎಕ್ಸ್‌ಟೆನ್‌ಷನ್ ಅಧಿಕಾರಿಯಿಂದ ಹಿಡಿದು ಅಸಿಸ್ಟೆಂಟ್ ರಿಜಿಸ್ಟ್ರಾರ್, ಜಾಯಿಂಟ್ ರಿಜಿಸ್ಟ್ರಾರ್, ಡೆಪ್ಯುಟಿ ರಿಜಿಸ್ಟ್ರಾರ್, ರಿಜಿಸ್ಟ್ರಾರ್, ಸೆಕ್ರೆಟರಿ ಹೀಗೆ ಎಲ್ಲರ ಮೇಲೂ ಇದೆ. ಎಲ್ಲಾ ಅಧಿಕಾರಿಗಳೂ ಸಮರ್ಥನೀಯವಾಗಿ ಕೆಲಸ ಮಾಡಿದ್ದಾರೆಯೋ ಎಂದು ನೋಡಿದರೆ ಬಹುಶಃ ಇಲ್ಲ ಎಂದು ನಾನು ಹೇಳಬೇಕಾಗುತ್ತದೆ, ನಮ್ಮ ರಾಜ್ಯದಲ್ಲಿ ಒಟ್ಟು ೨೩,೮೪೬ ಸಹಕಾರ ಸಂಘಗಳಿವೆ. ಇವು ೩೦ ಸಾವಿರ ಹಳ್ಳಿಗಳಲ್ಲಿವೆ. ಇವು ಎಲ್ಲಾ ಕ್ಷೇತ್ರದಲ್ಲಿಯೂ ಕೆಲಸ ಮಾಡುತ್ತಿವೆ. ಇದು ಹೇಗೆಂದರೆ, ಆಡು ಮುಟ್ಟದ ಗಿಡ ಇಲ್ಲ ಎನ್ನುವಂತಿದೆ. Jack of all master of none. ಇವತ್ತು ನಮ್ಮ ರಾಜ್ಯದಲ್ಲಿ ಪ್ರತಿಯೊಬ್ಬ ಹಳ್ಳಿಯ ರೈತರೂ ಒಳ್ಳೆಯ ಒಕ್ಕಲಿಗರಾಗಬೇಕಾದರೆ ಒಳ್ಳೆಯ ಉತ್ಪಾದನೆಯನ್ನು ತೆಗೆದುಕೊಳ್ಳಬೇಕಾದರೆ ತನ್ಮೂಲಕ ತನ್ನ ಅಭಿವೃದ್ಧಿಯನ್ನು ಮಾಡಿಕೊಳ್ಳಬೇಕಾದರೆ, ತನ್ನ ಜೀವನವನ್ನು ಸುಧಾರಿಸಿಕೊಳ್ಳಬೇಕಾದರೆ ಉತ್ತಮ ಬೀಜ, ಗೊಬ್ಬರ, ಕ್ರಿಮಿನಾಶಕ ಔಷಧಿಗಳು ಇನ್ನೂ ಮುಂತಾದ್ದನ್ನು ಸರ್ಕಾರ ಒದಗಿಸಬೇಕು, ಮತ್ತು ವ್ಯವಸಾಯದ ಖರ್ಚಿಗಾಗಿ ಹಣವನ್ನು ಕೊಡುವವರೂ ಬೇಕು. ಈ ಹಣವನ್ನು ಕೊಡುವ ಕೆಲಸವನ್ನು ಸಹಕಾರಿ ಸಂಘಗಳು ಕೆಲಸ ಮಾಡುತ್ತಿದ್ದು ರೈತರಿಗೆ ಬೇಕಾದ ಮತ್ತು ಒಕ್ಕಲುತನಕ್ಕೆ ಬೇಕಾದ ಸಾಮಾನುಗಳನ್ನೂ, ಅವನು ಬೆಳೆದ ಫಸಲಿಗೆ ಒಳ್ಳೆಯ ಬೆಲೆಗಳನ್ನೂ ಒದಗಿಸುವುದು ಸಹಕಾರ ಸಂಘದ ಮೂಲ ಉದ್ದೇಶ. ಈ ಉದ್ದೇಶವನ್ನು ಸಹಕಾರ ಸಂಘಗಳು ಬೈಲಾ ಪ್ರಕಾರ ಸರಿಯಾಗಿ ಕೆಲಸ ಮಾಡುತ್ತಿವೆಯೋ ಎಂದು ನೋಡಿದರೆ ಯಾವುದು ಕೂಡ ಸರಿಯಾಗಿ ಕೆಲಸ ಮಾಡುತ್ತಿಲ್ಲವೆಂಬುದು ಎದ್ದು ಕಂಡುಬರುತ್ತದೆ. ಇದಕ್ಕೆ ಈ ಮೂಲಕಾರಣ ಈ ಅಧಿಕಾರಿಗಳು ನಾವು ಇವತ್ತು ಯಾವ ಕಡೆಯಲ್ಲಿಯೇ ಇರಲಿ ಅಧಿಕಾರೇತರರನ್ನು ದೂರ ಮಾಡುವುದು ಬೇಡ. ಏಕೆಂದರೆ ಯಾವ ಪ್ರೆಸಿಡೆಂಟ್ ಆಗಲಿ, ಯಾವ ಡೈರೆಕ್ಟರ್ ಆಗಲಿ, ಫುಲ್ ಟೈಂ ಆ ಸಂಘದಲ್ಲಿ ಕೆಲಸ ಮಾಡುವುದಿಲ್ಲ. ತಿಂಗಳಿಗೆ ಒಂದು ಸಾರಿಯೋ, ಎರಡು ತಿಂಗಳಿಗೆ ಒಂದು ಸಾರಿಯೋ ಅಲ್ಲಿ ಮೀಟಿಂಗ್‌ನ್ನು ಕರೆದಾಗ ಇವರು ಮನಸ್ಸು ಬಂದರೆ ಬಂದು ಹೋಗುತ್ತಾರೆ. ಅಲ್ಲಿನ ಎಲ್ಲಾ ವ್ಯವಹಾರಗಳನ್ನೂ ಅವರು ನೋಡುವುದಕ್ಕಾಗುವುದಿಲ್ಲ. ಪ್ರತಿಯೊಂದಕ್ಕೂ ಇವರನ್ನು ಜವಾಬ್ದಾರರನ್ನಾಗಿ ಮಾಡುವುದಕ್ಕಾಗುವುದಿಲ್ಲ. ಅಲ್ಲಿನ ಲೆಕ್ಕಪತ್ರಗಳನ್ನು ನೋಡುವವರು, ವ್ಯವಹಾರ ನಡೆಸುವವರು ಅಲ್ಲಿರತಕ್ಕ ಸಿಬ್ಬಂದಿ ವರ್ಗದವರು. ಅನಂತರ ಅಲ್ಲಿರತಕ್ಕ ಕೋ-ಆಪರೇಟಿವ್ ಎಕ್ಸ್‌ಟೆನ್‌ಷನ್ ಆಫೀಸರ್, ಅಸಿಸ್ಟೆಂಟ್ ರಿಜಿಸ್ಟ್ರಾರ್, ಡೆಪ್ಯುಟಿ ರಿಜಿಸ್ಟ್ರಾರ್, ಆಡಿಟರ್ ಇವರುಗಳು ಇದನ್ನೆಲ್ಲಾ ಸರಿಯಾಗಿ ನೋಡುತ್ತಿರಬೇಕು. ಆದರೆ ಇವರು ನೋಡುವುದಿಲ್ಲವೆಂಬುದು ಕಂಡು ಬರುತ್ತದೆ. ಎಲ್ಲೆಲ್ಲಿ ಒಳ್ಳೆಯ ಸಹಕಾರಿ ಸಂಘಗಳಿವೆ ತಿನ್ನುವುದಕ್ಕೆ ಏನೂ ಸಿಕ್ಕುವುದಿಲ್ಲ ಅಂಥವುಗಳ ಮೇಲೆ ಏನಾದರೊಂದು ಕಿತಾಪತಿಯನ್ನು ತೆಗೆದು ಅವುಗಳ ಮೇಲೆ ಗದಾ ಪ್ರಹಾರ ಮಾಡುತ್ತಾರೆ. ಇನ್ನು ಕೆಲವು ಕಡೆ ಕೆಟ್ಟ ಸಹಕಾರ ಸಂಘಗಳು ಇದ್ದು ಅಲ್ಲಿ ಹಣದ ಲೂಟಿಯಾಗುತ್ತಿರುತ್ತದೆ ಅಂಥವು

ಗಳಿಗೆ ರಕ್ಷಣೆ ಕೊಡುತ್ತಿದ್ದಾರೆ. ಅವುಗಳ ಮೇಲೆ ಯಾವುದೇ ರಿಮಾರ್ಕ್‌ನ್ನೂ ಬರೆಯುವುದಿಲ್ಲ. ಇಂಥ ಅನೇಕ ನಿದರ್ಶನಗಳಿವೆ. ಕೋಟ್ಯಾಂತರ ರೂಪಾಯಿಗಳನ್ನು ನುಂಗಿಹಾಕಿರತಕ್ಕ ಸಹಕಾರ ಸಂಘಗಳ ನಿದರ್ಶನವೂ ಉಂಟು. ಇದು ಆಗದಂತೆ ಬ್ಯೂರಾಕ್ರಸಿಗಳ ಮೇಲೆ ಮಾನ್ಯ ಮಂತ್ರಿಗಳು ಗಮನ ಇಡಬೇಕು ಇಲ್ಲದೇ ಹೋದರೆ ಸಹಕಾರ ಸಂಘಗಳ ಚಳುವಳಿ ಏನಿದೆ ಇದು ಹಳಿ ತಪ್ಪಿದ ರೈಲಿನಂತಾಗುತ್ತದೆ. ಇದರಿಂದ ರೈತರಿಗೆ ಬಹಳ ಅನಾನುಕೂಲವಾಗುತ್ತದೆಂದು ತಿಳಿದುಕೊಳ್ಳಬೇಕು. ೨೩,೮೪೬ ಸಹಕಾರ ಸಂಘಗಳಲ್ಲಿ ಬಹಳಷ್ಟು ಸಹಕಾರ ಸಂಘಗಳು ಪ್ರತಿವರ್ಷ ಸಾಯುತ್ತಿವೆ, ಅದೇ ರೀತಿ ಪ್ರತಿ ವರ್ಷ ಹುಟ್ಟುತ್ತಿವೆ. ಕಳೆದ ಸಾರಿ ೮೩ರ ಕೊನೆಯ ವೇಳೆಗೆ ೪೩೭೯ ಸಹಕಾರ ಸಂಘಗಳು ಮುಚ್ಚುವ ಹಂತಕ್ಕೆ ಬಂದಾಗಲೂ ನಿಮ್ಮ ಅಧಿಕಾರಿಗಳು ಏತಕ್ಕೆ ಅದನ್ನು ಸರಿಪಡಿಸುವ ಕಡೆ ಗಮನವನ್ನು ಕೊಡಲಿಲ್ಲ ? ಬೈಲಾ ಪ್ರಕಾರ ಅವರು ಏತಕ್ಕೆ ಕೆಲಸ ಮಾಡಲಿಲ್ಲ ? ಇದಕ್ಕೆ ಸೂಕ್ತ ಔಷಧಿಯನ್ನು ಏಕೆ ಕೊಡಲಿಲ್ಲ ? ಇರತಕ್ಕ ಲೋಪದೋಷವನ್ನು ಕಂಡುಹಿಡಿದು ಸರಿಯಾದ ಮಾರ್ಗದರ್ಶನವನ್ನು ಏತಕ್ಕೆ ನೀಡಲಿಲ್ಲ ? ನಿಮ್ಮ ಅಧಿಕಾರಿಗಳು ಸಹಕಾರ ಸಂಘದಲ್ಲಿ ಜವಾಬ್ದಾರಿಯಿಂದ ನಡೆದುಕೊಂಡು ಸಹಕಾರಿ ಕ್ಷೇತ್ರವನ್ನು ಸುಧಾರಣೆ ಮಾಡುವುದಕ್ಕೆ ಏತಕ್ಕೆ ಕ್ರಮವನ್ನು ತೆಗೆದುಕೊಳ್ಳಲಿಲ್ಲವೆಂದು ಅನಿವಾರ್ಯವಾಗಿ ಕೇಳಬೇಕಾಗಿದೆ. ಸುಮಾರು ೬-೭ ಸಾವಿರ ಸಹಕಾರ ಸಂಘಗಳು ಡಿಫಂಕ್ಟ್ ಆಗಿವೆ. ಅವು ಸರಿಯಾಗಿ ಕೆಲಸ ಮಾಡುತ್ತಿಲ್ಲ. ಹೆಸರಿಗೆ ಮಾತ್ರ ಬೋರ್ಡುಗಳು, ಹೆಸರಿಗೆ ಮಾತ್ರ ಕಾರ್ಯದರ್ಶಿ, ಹೆಸರಿಗೆ ಮಾತ್ರ ನಿರ್ದೇಶಕರು, ಹೆಸರಿಗೆ ಮಾತ್ರ ಅಧ್ಯಕ್ಷರು ಆಗಿದ್ದುಕೊಂಡು ಯಾವುದಾದರೂ ಒಂದು ಸಂಘ ಸಂಸ್ಥೆಗಳಿಗೆ ರೆಪ್ರೆಸೆಂಟಿಟಿವ್ ಆಗಿ ಹೋಗಲಿಕ್ಕೆ ಇವು ಇವೆ. ಇವುಗಳಿಗೆ ನಿಮ್ಮ ಅಧಿಕಾರಿಗಳು ಏತಕ್ಕೆ ಒಳ್ಳೆಯ ಮಾರ್ಗದರ್ಶನ, ಉತ್ತೇಜನವನ್ನು ಕೊಡುತ್ತಿಲ್ಲವೆಂಬುದನ್ನು ಕಂಡುಹಿಡಿಯಬೇಕಾಗಿದೆ.

ಈವೊತ್ತು ನಾವು ಗ್ರಾಮಾಂತರ ಸಹಕಾರ ಸಂಘಗಳಿಗೆ ಬಂದರೆ ಇವರು ಮೂರು ಹಂತದಲ್ಲಿ ಸಾಲವನ್ನು ಕೊಡುತ್ತಿದ್ದಾರೆ. ಒಂದು ರಾಜ್ಯ ಮಟ್ಟದಲ್ಲಿ ಅಪೆಕ್ಸ್ ಬ್ಯಾಂಕ್ ಜಿಲ್ಲಾ ಮಟ್ಟದಲ್ಲಿ ಜಿಲ್ಲಾ ಕೋಆಪರೇಟೀವ್ ಸಹಕಾರಿ ಬ್ಯಾಂಕ್ ಗ್ರಾಮಾಂತರ ಪ್ರದೇಶದಲ್ಲಿ ಗ್ರಾಮೀಣ ಸಹಕಾರಿ ಸಂಘಗಳು ಮುಖಾಂತರವಾಗಿ ಸಾಲವನ್ನು ಕೊಡುತ್ತಿರುತ್ತಾರೆ. ಈವತ್ತು ಗ್ರಾಮೀಣ ಸಹಕಾರಿ ಸಂಘಗಳು ಎಲ್ಲವೂ ನಿರ್ನಾಮವಾಗಿರತಕ್ಕಂಥ ಪರಿಸ್ಥಿತಿಗೆ ಬಂದಿರುತ್ತವೆ. ಶೇಕಡಾ ೨೦ ರಷ್ಟು ಸಹಕಾರಿ ಸಂಘಗಳು ಸರಿಯಾದ ರೀತಿಯಲ್ಲಿ ನಡೆಯುತ್ತಿದ್ದರೆ ಶೇಕಡಾ ೮೦ ರಷ್ಟು ಗ್ರಾಮೀಣ ಸಹಕಾರಿ ಸಂಘಗಳು ಲುಕ್ಸಾನ್‌ನಲ್ಲಿ ನಡೆಯುತ್ತಿವೆ. ಅಲ್ಲಿಯ ಸಿಬ್ಬಂದಿಗಳಿಗೆ ಪಗಾರವನ್ನು ಕೊಡಲಿಕ್ಕೆ ಹಣವಿರುವುದಿಲ್ಲ, ಸೆಕ್ರೆಟರಿಯವರಿಗೆ ಹಣವನ್ನು ಕೊಡಲಿಕ್ಕೆ ಇರುವುದಿಲ್ಲ. ಜಿಲ್ಲಾ ಬ್ಯಾಂಕ್‌ಗಳು ಈವತ್ತಿನ ದಿವಸ ರೈತರಿಗೆ ರಿಸರ್ವ್ ಬ್ಯಾಂಕಿನಿಂದ ಹಣವನ್ನು ಪಡೆದರೂ ಕೂಡ ಸಂಘದ ಮೂಲಕ ಕೊಡುವಾಗ ಬಡ್ಡಿ ಕಡಿಮೆ ಮಾಡಿ ಕೆಲವೊಂದು ಪರ್ಸೆಂಟ್ ಆಪೆಕ್ಸ್ ಬ್ಯಾಂಕ್, ಜಿಲ್ಲಾ ಬ್ಯಾಂಕ್‌ಗಳು ಹಳ್ಳಿ ಸಹಕಾರಿ ಸಂಘದ ಹಣವನ್ನು ತಿಂದು, ಅವುಗಳನ್ನು ಚಿಂತಾಜನಕ ಸ್ಥಿತಿಗೆ ತಂದಿರುತ್ತಾರೆ. ಅಪೆಕ್ಸ್ ಬ್ಯಾಂಕ್ ಈವತ್ತಿನ ದಿವಸ ೨ ಕೋಟಿ ೧೨ ಲಕ್ಷ ರೂಪಾಯಿಗಳ ಲಾಭವನ್ನು ಮಾಡಿದೆ. ಇದೆಲ್ಲಾ ಯಾರ ದುಡ್ಡು ಈವತ್ತು ಹಳ್ಳಿಯಲ್ಲಿರತಕ್ಕಂಥ ಸೊಸೈಟಿಗಳು ನಿರ್ನಾಮವಾಗಿರುತ್ತವೆ. ಜಿಲ್ಲಾ ಬ್ಯಾಂಕ್‌ಗಳು ಅಪೆಕ್ಸ್ ಬ್ಯಾಂಕ್‌ಗಳು ಹೇರಳವಾದ ಇಂಟರೆಸ್ಟ್ ತೆಗೆದುಕೊಂಡು ಬಹಳ ಲಾಭಮಾಡುತ್ತಿವೆ. ಇದರಿಂದ ಹಳ್ಳಿಗಾಡು ಸೊಸೈಟಿಗಳು ನಿರ್ನಾಮವಾಗುತ್ತಿವೆ. ಐ.ಎ.ಎಸ್. ಅಧಿಕಾರಿಗಳಾಗಲಿ, ರಿಜಿಸ್ಟ್ರಾರ್‌ರವರಾಗಲಿ, ಡೆಪ್ಯುಟಿ ರಿಜಿಸ್ಟ್ರಾರ್‌ರಾಗಲಿ, ಇಲಾಖೆಯ ಬಗ್ಗೆ ಏನು ಮಾಡಬೇಕೆಂಬುದನ್ನು ವಿಚಾರ ಮಾಡಬೇಕು. ಮಾನ್ಯ ಮಂತ್ರಿಗಳು ಹಳ್ಳಿಗಾಡಿನಿಂದ ಬಂದಿರತಕ್ಕಂಥವರು ಅವರ ಜನರಿಗೆ ಹೇಳ ಬಯಸುವುದೇನೆಂದರೆ ಹಳ್ಳಿಯಲ್ಲಿರತಕ್ಕಂಥ ಸೊಸೈಟಿಗಳು ಉದ್ಧಾರವಾಗಬೇಕಾದರೆ ಜಿಲ್ಲಾ ಬ್ಯಾಂಕ್‌ಗಳು, ಅಪೆಕ್ಸ್ ಬ್ಯಾಂಕ್‌ಗಳು ಉದಾರವಾಗಿ ಸಹಾಯ ನೀಡಬೇಕು. ಭೂ ಅಭಿವೃದ್ಧಿ ಬ್ಯಾಂಕ್‌ಗಳು ಸಾಲವನ್ನು ಕೊಡುತ್ತಿರುವ ಬಗ್ಗೆ ರಾಜ್ಯ ಮಟ್ಟದಲ್ಲಿ ಸ್ಟೇಟ್ ಲ್ಯಾಂಡ್ ಡೆವಲಪ್‌ಮೆಂಟ್ ಬ್ಯಾಂಕ್ ತಾಲ್ಲೂಕು ಮಟ್ಟದಲ್ಲಿ ಭೂ ಅಭಿವೃದ್ಧಿ ಬ್ಯಾಂಕ್‌ಗಳ ಮುಖಾಂತರ ಹಳ್ಳಿ ರೈತರಿಗೆ ಸಾಲವನ್ನು ಕೊಡುತ್ತಿರುತ್ತಾರೆ ಆದರೆ ಹಳ್ಳಿಯ ಮಟ್ಟದಲ್ಲಿ ವಸೂಲು ಮಾಡತಕ್ಕಂಥವರು ಯಾರೂ ಇಲ್ಲ, ಭೂ ಅಭಿವೃದ್ಧಿ ಬ್ಯಾಂಕ್‌ಗಳು ಅಪೆಕ್ಸ್ ಬ್ಯಾಂಕ್‌ಗಳು ಒಂದು ಡ್ಯೂಯಲ್ ವ್ಯವಸ್ಥೆಯಲ್ಲಿ ನಡೆಯುತ್ತಿವೆ. ರೈತರಿಗೆ ಸಾಲ ಕೊಡುವುದು ಲ್ಯಾಂಡ್ ಬ್ಯಾಂಕ್ ಮತ್ತು ಅಪೆಕ್ಸ್ ಬ್ಯಾಂಕ್‌ಗಳು ಈ ಎಲ್ಲವನ್ನು ಒಂದೇ ಮಾಡಿ. ತ್ರೀ ಟೈರ್ಸ್. ಟೂ ಟೈರ್ಸ್ ಈ ಒಂದು ವ್ಯವಸ್ಥೆ ಮಾಡುವ ಬದಲು ನೇರವಾಗಿ ಹಳ್ಳಿಯ ರೈತರಿಗೆ ಏತಕ್ಕೆ ಸಾಲವನ್ನು ಕೊಡಬಾರದು ? ಸ್ಟೇಟ್ ಬ್ಯಾಂಕ್‌ನಿಂದ ತಾಲ್ಲೋಕ್ ಮಟ್ಟದಲ್ಲಿರತಕ್ಕಂಥ ಬ್ಯಾಂಕ್‌ಗಳಿಂದ ನೇರವಾಗಿ ಸಾಲವನ್ನು ಇಂಡಿಯಾ ಗೌವರ್ನ್ಮೆಂಟ್‌ನವರು ರೈತರಿಗೆ ಕೊಡುತ್ತಾರೆ. ಇಲ್ಲಿ ಏತಕ್ಕೆ ಎರಡು ಹಂತಗಳಲ್ಲಿ ಮೂರು ಹಂತದಲ್ಲಿ ಮಾರ್ಜಿನಲ್, ಇಂಟರೆಸ್ಟ್ ಹಾಕಿ ರೈತರ ತಲೆಯಮೇಲೆ ಬಡಿಯುತ್ತೀರಿ. ಇದನ್ನು ಕೈಬಿಡಬೇಕೆಂದು ಹೇಳಲಿಕ್ಕೆ

ಇಚ್ಛೆಪಡುತ್ತೇನೆ. ಈವತ್ತು ತಾಲ್ಲೂಕು ಮಟ್ಟದಲ್ಲಿರತಕ್ಕಂಥ ಕೋ-ಆಪರೇಟೀವ್ ಸೊಸೈಟಿಗಳಿಗೆ ಬರತಕ್ಕಂಥ ಸದಸ್ಯರಿಗೆ ಮೂರು ವರ್ಷಗಳ ಅವಧಿಯೆಂದು ಒಂದು ಆರ್ಡಿನೆನ್ಸ್ ಮುಖಾಂತರ ಮಾಡುತ್ತೀರಿ. ಅದರಂತೆ ಈವೊತ್ತು ಗ್ರಾಮಾಂತರ ಪ್ರದೇಶಗಳಲ್ಲಿರತಕ್ಕಂಥ ನೇಕಾರರೇ ಇರಲಿ ಚಮ್ಮಾರರೆ ಇರಲಿ, ಮೇದಾರರೆ ಇರಲಿ ಕುಂಬಾರರೇ ಇರಲಿ ಅಥವಾ ಯಾರೇ ಇರಲಿ, ಈ ಕಸಬುದಾರರಿಗೆ ಋಣವನ್ನು ಕೊಡಬೇಕು ಎಂದು ಮಾಡಿರುತ್ತೀರಿ. ಅವರಿಗೆ ಸಹಾಯವನ್ನು ಮಾಡಬೇಕೆಂದು ಇದ್ದೀರಿ. ಆದರೆ ತಾವು ಕೊಟ್ಟಿರುವ ರಿಪೋರ್ಟ್ ನೋಡಿದರೆ ತಾಲ್ಲೂಕು ಮಟ್ಟದಲ್ಲಿರತಕ್ಕಂಥ ಕೋಆಪರೇಟೀವ್ ಸೊಸೈಟಿಗಳು ಸರಿಯಾಗಿ ಕೆಲಸ ಮಾಡುತ್ತಿಲ್ಲ. ಎಲ್ಲಾ ಬಹುತೇಕ ಸೊಸೈಟಿಗಳು ಡಿಫಂಕಟ್ ಆಗಿರುತ್ತವೆ. ಹೀಗಿರುವಾಗ ಈ ಒಂದು ವರ್ಗದವರಿಗೆ ಹೇಗೆ ಸಹಾಯವನ್ನು ಮಾಡಲು ಸಾಧ್ಯವಾಗುತ್ತದೆ. ಖಾದಿ ಬೋರ್ಡ್‌ಗಾಗಿ ಬೇಕಾದಷ್ಟು ಹಣವನ್ನು ಖರ್ಚು ಮಾಡುತ್ತಿದ್ದೀರಿ. ತಾಲ್ಲೂಕು ಮಟ್ಟದಲ್ಲಿ ಗ್ರಾಮ ಮಟ್ಟದಲ್ಲಿ, ಸರಿಯಾಗಿ ಸಾಲ ಸಿಕ್ಕಬೇಕಾದರೆ ಸೊಸೈಟಿಗಳು ಸರಿಯಾದ ರೀತಿಯಲ್ಲಿ ಕೆಲಸ ಮಾಡಬೇಕು. ಸಹಕಾರಿ ಸಂಘಗಳ ಅಧಿಕಾರಿಗಳಾದ ರಿಜಿಸ್ಟ್ರಾರ್, ಡೆಪ್ಯುಟಿ ರಿಜಿಸ್ಟ್ರಾರ್, ಅಸಿಸ್ಟೆಂಟ್ ರಿಜಿಸ್ಟ್ರಾರ್‌ಗಳು ಈವತ್ತಿನ ದಿವಸ ಬೇಕಾದಷ್ಟು ಜನ ಆಫೀಸರ್ಸ್‌ಗಳು ಇದ್ದಾರೆ ಆದರೆ ತಾಲ್ಲೂಕು ಮಟ್ಟದಲ್ಲಿ ಕೇವಲ ಒಬ್ಬ ಎಕ್ಸಿಕ್ಯುಟೀವ್ ಆಫೀಸರ್ ಇದ್ದಾರೆ ಅವರೊಬ್ಬರು ಇಡೀ ತಾಲ್ಲೂಕನ್ನು ಸೂಪರ್‌ವಿಷನ್ ಮಾಡಬೇಕೆಂದರೆ ಯಾವ ರೀತಿ ಲೋಪದೋಷಗಳನ್ನು ಹುಡುಕಲಿಕ್ಕೆ ಸಾಧ್ಯವಾಗುತ್ತದೆ ? ಆಡಿಟ್ ವರದಿಯನ್ನು ನೋಡಿದರೆ ಬಹಳ ಹೆಚ್ಚಿನ ಸಂಖ್ಯೆಯಲ್ಲಿ ಲೋಪದೋಷಗಳು ಇರತಕ್ಕಂಥದ್ದು ಕಂಡುಬರುತ್ತಿದೆ. ಅಲ್ಲಿ ಹರಿಯತಕ್ಕಂಥ ಕೆಟ್ಟರಕ್ತ ಏನು ಇದೆ ಅದಕ್ಕೆ ಸರಿಯಾದ ಔಷಧಿಗಳನ್ನು ಕೊಡಲಿಕ್ಕೆ ತಾವು ತಯಾರಾಗಿರಬೇಕು. ಈವೊತ್ತು ಆಡಿಟ್ ಯಾವ ಸೊಸೈಟಿಗಳದು ಸರಿಯಾಗಿ ಆಗುತ್ತಿಲ್ಲ. ನಮ್ಮ ರಾಜ್ಯದಲ್ಲಿ ೨೩ ಸಾವಿರದ ೮೪೬ ಸಹಕಾರಿ ಸಂಘಗಳು ಇದ್ದರೆ. ೧೯೮೩ ರಲ್ಲಿ ಕೇವಲ ೨೩ ಸಾವಿರದ ೮೪೬ ಸೊಸೈಟಿಗಳ ಪೈಕಿ ೧೩ ಸಾವಿರದ ೨೨೪ ಸೊಸೈಟಿಗಳ ಆಡಿಟ್ ಮಾತ್ರ ಮಾಡಿದ್ದಾರೆ. ೧೯೮೧-೮೨ರಲ್ಲಿ ೨೨,೫೩೮ ಸಹಕಾರಿ ಸಂಘಗಳ ಪೈಕಿ ಕೇವಲ ೧೨,೫೯೯ ಸಹಕಾರಿ ಸಂಘಗಳ ಆಡಿಟ್ ಆಗಿರುತ್ತದೆ ೧೯೮೧ನೇ ಇಸವಿಯಲ್ಲಿ ೨೧ ಸಾವಿರದ ೮೫೨ ಸಹಕಾರಿ ಸಂಘಗಳ ಪೈಕಿ ಕೇವಲ ೧೨,೩೮೦ ಸಹಕಾರಿಸಂಘಗಳ ಆಡಿಟ್ ಮಾಡಿರುತ್ತಾರೆ. ಹೀಗಾಗಿ ಸುಮಾರು ೪೫ ಪರ್ಸೆಂಟ್ ಸಹಕಾರಿ ಸಂಘಗಳ ಆಡಿಟ್ ಆಗಿಲ್ಲವೆಂದು ಹೇಳುವುದಾದರೆ ಈವತ್ತಿನ ಪರಿಸ್ಥಿತಿಯಲ್ಲಿ ಆಫೀಸ್ ಇಲ್ಲವೇ ? ಆಫೀಸ್ ಇದ್ದರೂ ಅಧಿಕಾರಿಗಳು ಸರಿಯಾಗಿ ಕೆಲಸ ಮಾಡುತ್ತಿದ್ದಾರೆಯೋ ಇಲ್ಲವೇ. ಎನ್ನುವುದನ್ನು ನಾನು ಕೇಳಬೇಕಾಗುತ್ತದೆ. ಸಹಕಾರಿ ಚಳುವಳಿ ಸುಗಮವಾಗಿ ನಡೆಯಬೇಕಾದರೆ ಆಡಿಟ್ ಪ್ರತಿವರ್ಷ ನಡೆಯಬೇಕು. ಆಡಿಟ್ ಮಾಡದೇಹೋದರೆ ರೋಗಿ ಸಾಯಲಿ ಎಂದು ಕೈಬಿಟ್ಟ ಹಾಗಾಗುತ್ತದೆ. ಕಂಪಲ್‌ಸರಿಯಾಗಿ ಇವುಗಳನ್ನು ಸುಧಾರಣೆ ಮಾಡಬೇಕೆಂದರೆ ಡಾಕ್ಟರ್ ಯಾವರೀತಿ ರೋಗಿಯ ಖಾಯಿಲೆಯನ್ನು ಡಯಾಗನೈಸ್ ಮಾಡುತ್ತಾನೆಯೋ ಆ ರೀತಿಯಲ್ಲಿ ಕಂಪಲ್‌ಸರಿಯಾಗಿ ಸಹಕಾರಿ ಸಂಘಗಳ ಆಡಿಟ್ ವೆರಿಫಿಕೇಶನ್ ಮಾಡಬೇಕೆಂದು ಹೇಳಲಿಕ್ಕೆ ನಾನು ಇಚ್ಛೆಪಡುತ್ತೇನೆ.

ಇನ್ನು ಗ್ರಾಹಕರ ಸಹಕಾರಿ ಸಂಘಗಳ ಬಗ್ಗೆ ಹೇಳುವುದಾದರೆ, ಇವತ್ತು ಈ ಗ್ರಾಹಕರ ಸಹಕಾರಿ ಸಂಘಗಳು ಹಳಿಗಳಲ್ಲಿಯೋ ಇರಲಿ, ಬೆಂಗಳೂರಿನಂತಹ ಪಟ್ಟಣಗಳಲ್ಲಿಯೋ ಇರಲಿ ಜೀವನಾವಶ್ಯಕ ವಸ್ತುಗಳನ್ನು ಎಲ್ಲಾ ಜನರಿಗೂ, ಎಲ್ಲಾ ನಾಗರೀಕರಿಗೂ ಕಡಿಮೆ ಬೆಲೆಯಲ್ಲಿ ಒದಗಿಸಬೇಕೆಂಬ ಉದ್ದೇಶದಿಂದ ಸಹಕಾರಿ ಸಂಘಗಳನ್ನು ಸ್ಥಾಪನೆ ಮಾಡಿರುವುದಾಗಿರುತ್ತದೆ. ಆದರೆ ಈ ಸಹಕಾರಿ ಸಂಘಗಳನ್ನು ನೋಡಿದರೆ ೧೦೦ಕ್ಕೆ ೮೦ ರಷ್ಟು ದಿವಾಳಿಯಾಗಿರುತ್ತವೆ. ಜಿಲ್ಲಾ ಮಟ್ಟದಲ್ಲಿರತಕ್ಕಂಥ ಸಹಕಾರಿ ಸಂಘಗಳು ಇದ್ದರೂ ಸಹಿತ ಜವಾಬ್ದಾರಿ ಇಲ್ಲದಂತಾಗಿರುತ್ತವೆ. ಕನ್‌ಸ್ಯೂಮರ್ಸ್ ಕೋಆಪರೇಟಿವ್ ಸೊಸೈಟಿಗಳು ಲಿಕ್ವಿಡೇಷನ್ ಆಗಿರುತ್ತವೆ, ಇದಕ್ಕಾಗಿ ಒಂದು ಸಮಿತಿಯನ್ನು ಮಾಡಿದ್ದಾಗ್ಯೂ ಕೂಡ ಒಂದು ಸಂಘದಮೇಲೆ ರಿಪೋರ್ಟ್ ಮಾಡಲಿಲ್ಲ. ಸಂಘವನ್ನು ಉದ್ಧಾರವನ್ನೂ ಮಾಡಲಿಲ್ಲ ಲಿಕ್ವಿಡೇಷನ್ ಮಾಡಿದಂಥ ವ್ಯಕ್ತಿಯೇ, ಮತ್ತೊಂದು ಹೊಸ ಸಂಘದ ಅಧ್ಯಕ್ಷರಾಗಿರುತ್ತಾರೆ. ಪ್ರತಿಯೊಂದು ತಾಲ್ಲೂಕಿನಲ್ಲಿಯೂ ತಾಲ್ಲೂಕು ಕನ್‌ಸ್ಯೂಮರ್ಸ್ ಕೋ-ಆಪರೇಟೀವ್ ಸೊಸೈಟಿಯನ್ನು ಮಾಡಿದರೂ ಕೂಡ ಅದು ನಿರ್ನಾಮವಾಗಿರುತ್ತದೆ. ಆದ್ದರಿಂದ ಅಧಿಕಾರಿಗಳೇ ಆಗಲಿ ಯಾರೇ ಆಗಲಿ ಜವಾಬ್ದಾರಿಯಿಂದ ವರ್ತನೆ ಮಾಡಬೇಕು. ಸಹಕಾರಿ ಚಳುವಳಿ ಅತ್ಯಂತ ಒಳ್ಳೆಯ ರೀತಿಯಲ್ಲಿ ನಡೆಯಬೇಕು. ಇಡೀ ಪ್ರಪಂಚದಲ್ಲಿ ನಮ್ಮ ಭಾರತದೇಶದಲ್ಲಿ ಈ ಚಳುವಳಿ ಒಂದು ಆದರ್ಶವಾಗಿ ನಡೆಯಬೇಕೆಂದು ಹೇಳುತ್ತೇನೆ. ಈವತ್ತಿನ ದಿವಸ ಎಷ್ಟೋ ಕಡೆಗಳಲ್ಲಿ ದೊಡ್ಡ ದೊಡ್ಡ ಸೊಸೈಟಿಗಳನ್ನು ಮುಚ್ಚಿಬಿಡಬೇಕಾದ ಸಂದರ್ಭಗಳು ಒದಗಿರುತ್ತವೆ. ಸಹಕಾರಿ ಕ್ಷೇತ್ರದಲ್ಲಿ ಬಂದಿರತಕ್ಕಂಥ ಮುಖ್ಯವಾದ ರೋಗಗಳು ಎಂದರೆ ಎರಡು. ಒಂದು ರಾಜಕೀಯ ಮತ್ಸರ, ಮತ್ತೊಂದು ರಾಜಕೀಯ ಮೋಹ ರಾಜಕೀಯ ಮತ್ಸರವೆಂದರೆ ಈವತ್ತು

ಮಂತ್ರಿಯಾಗಿದ್ದವರು ಅಧಿಕಾರದಲ್ಲಿದ್ದರೆ ನನ್ನ ವಿರುದ್ಧವಾಗಿ ಸಹಕಾರಿ ಸಂಘವನ್ನು ನಡೆಸುತ್ತಿದ್ದಾನಲ್ಲ ಹೇಗಾದರೂ ಮಾಡಿ ಇವನ್ನು ಮಟ್ಟಹಾಕಬೇಕು ಎನ್ನತಕ್ಕಂಥದ್ದು ಮತ್ತೊಂದು ರಾಜಕೀಯ ಮೋಹವೆಂದರೆ ಸಹಕಾರಿ ಸಂಘಗಳಲ್ಲಿ ಕೆಲಸ ಮಾಡತಕ್ಕಂಥ ಅಧ್ಯಕ್ಷರು, ಡೈರೆಕ್ಟರ್ಸ್ ಅವರು ನನ್ನ ಕೈಯ್ಯಲ್ಲಿ ಇರಬೇಕು ಎನ್ನುವ ವ್ಯಾಮೋಹ. ಈ ರಾಜಕೀಯ ಮತ್ಸರ ಮತ್ತು ರಾಜಕೀಯ ವ್ಯಾಮೋಹ ಹೋಗಬೇಕು. ಈವತ್ತು ಆಡಳಿತ ನನ್ನ ಕೈಯಲ್ಲಿ ಇದೆ ನನಗೆ ಬೇಕಾದವರು ಇರಬೇಕು ನನಗೆ ಬೇಡವಾದವರು ಅಲ್ಲಿ ಇರಬಾರದು ಎನ್ನುವ ಒಂದು ಮತ್ಸರ ಹೋಗಬೇಕು. ಈವೊತ್ತು ಯಾರೇ ಇರಲಿ ಉತ್ತಮ ರೀತಿಯಲ್ಲಿ ಸಹಕಾರಿ ಸಂಘಗಳು ನಡೆದು ಎಲ್ಲಾ ರೀತಿಯ ಸೌಲಭ್ಯಗಳನ್ನು, ಸವಲತ್ತುಗಳನ್ನು, ಸಬ್‌ಸಿಡಿಗಳನ್ನು ಜನತೆಗೆ ಒದಗಿಸಿ ಕೊಡಬೇಕು ಸಹಕಾರಿ ಕ್ಷೇತ್ರದಲ್ಲಿ ಕೆಲಸ ಮಾಡತಕ್ಕಂಥವರು ಯಾರೇ ಇರಲಿ ದುರ್ವ್ಯವಹಾರದಲ್ಲಿ ತೊಡಗಿರ ತಕ್ಕಂಥದನ್ನು ರಿಪೇರಿ ಮಾಡತಕ್ಕಂಥ ಶಕ್ತಿಯನ್ನು ಹೊಂದಿರಬೇಕು. ನಿರ್ಧಾಕ್ಷಿಣವಾಗಿ ಕ್ವಾಲಿಫೈ, ಡಿಸ್‌ಕ್ವಾಲಿಫೈ ಮಾಡತಕ್ಕಂಥ ಶಕ್ತಿ ಇದ್ದರೆ ಸಹಕಾರಿ ಸಂಘಗಳು ಒಳ್ಳೆಯ ರೀತಿಯಲ್ಲಿ ನಡೆಯಲು ಸಾಧ್ಯವಾಗುತ್ತದೆ. ಅಧಿಕಾರಿಗಳು ಮತ್ತು ರಾಜಕಾರಣಿಗಳು ಶಾಮೀಲಾಗಿ ದುರುಪಯೋಗ ಮಾಡಿ ಕೊಂಡಿರತಕ್ಕಂಥ ನಿದರ್ಶನಗಳು ಬೇಕಾದಷ್ಟಿರುತ್ತವೆ. ಉದಾಹರಣೆಗೆ ಹೇಳುವುದಾದರೆ, ಈವೊತ್ತು ಸಹಕಾರಿ ಸಂಘಗಳಲ್ಲಿ ಅಧಿಕಾರಿಗಳು ಒಮ್ಮೆ ರಾಜಕಾರಣಿಗಳು ಹೇಳಿದರು ಆಡಿಟ್ ವರದಿಯನ್ನು ಅರ್ಡರ್ಸ್ ಆಗಿ ಬರೆದಿರತಕ್ಕಂಥದ್ದು ಹಲವಾರು ನಿದರ್ಶನಗಳು ಇರುತ್ತವೆ. ಈವತ್ತು ಒಂದು ಉದಾಹರಣೆಯನ್ನು ಹೇಳುವುದಾದರೆ ೨೦ ಸಾವಿರ ರೂಪಾಯಿಗಳಿಗೆ ಒಂದು ಲಾರಿಯನ್ನು ಕೊಳ್ಳು ವುದಕ್ಕೆ ಹತ್ತುಸಾವಿರ ರೂಪಾಯಿಗಳ ಬಂಡವಾಳವನ್ನು ಹೂಡಿದರೆ, ಸೊಸೈಟಿಯಲ್ಲಿ ಮೂವತ್ತು ಸಾವಿರ ರೂಪಾಯಿಗಳ ಲೆಕ್ಕವನ್ನು ಬರೆದು ದುರುಪಯೋಗ ಮಾಡಿರತಕ್ಕಂಥವರ ಮೇಲೆ. ಅವರು ಯಾರೇ ಇರಲಿ ಬೋರ್ಡ್ ಆಫ್ ಡೈರೆಕ್ಟರ್ ಇರಲಿ ಅವರ ಹತ್ತಿರ ವಸೂಲು ಮಾಡುವುದನ್ನು ಬಿಟ್ಟು ಸೊಸೈಟಿಯನ್ನು ಸೂಪರುಸೀಡ್ ಮಾಡಿ ಎಂದು ಹೇಳತಕ್ಕಂಥ ಬೇಜವಾಬ್ದಾರಿಯ ಅಧಿಕಾರಿಗಳು ಇದ್ದಾರೆ. ಅಂಥ ಅಧಿಕಾರಿಗಳನ್ನು ಹುಡುಕಿ ಸರಿಯಾದ ಮಾರ್ಗದರ್ಶನ ಮಾಡದಿದ್ದರೆ ಸಹಕಾರಿ ಚಳುವಳಿಯನ್ನು ಮೇಲಕ್ಕೆ ತರಲು ಸಾಧ್ಯವಾಗುವುದಿಲ್ಲ. ಆದ್ದರಿಂದ ಅಧಿಕಾರಿಗಳ ಮೇಲೆ ಬಹಳ ಜವಾಬ್ದಾರಿ ಇದೆ. ನಾವು ಇಲ್ಲಿ ೫ ವರ್ಷಗಳ ಕಾಲ ಇದ್ದು ಹೋಗಬಹುದು. ಮಾನ್ಯ ಮಂತ್ರಿಗಳು ಸ್ವಲ್ಪ ದಿವಸ ಇದ್ದು ಹೋಗಬಹುದು. ಆದರೆ ಅಧಿಕಾರಿಗಳು ೩೦ ವರ್ಷಗಳ ಕಾಲ ಅಧಿಕಾರದಲ್ಲಿರುತ್ತಾರೆ. ಆದ್ದರಿಂದ ಈ ಸಹಕಾರಿ ಕ್ಷೇತ್ರವನ್ನು ಚೆನ್ನಾಗಿ ಬೆಳೆಸ ತಕ್ಕಂಥ ಜವಾಬ್ದಾರಿ ಅಧಿಕಾರಿಗಳ ಮೇಲೆ ಇದೆ. ನಾವು ಏನಿದ್ದರೂ ಸಲಹೆ ಮತ್ತು ಸೂಚನೆಗಳನ್ನು ಕೊಡುತ್ತೇವೆ. ನಮಗಿರುವಂತಹ ಅನುಭವವನ್ನು ಹೇಳುತ್ತೇವೆ. ಇದರ ಒಂದು ಆಧಾರದ ಮೇಲೆ ಈ ಕ್ಷೇತ್ರವನ್ನು ಬೆಳೆಸತಕ್ಕಂಥ ಒಂದು ಜವಾಬ್ದಾರಿ ಅಧಿಕಾರಿಗಳ ತಲೆಯ ಮೇಲಿದೆ. ಎಲ್ಲೆಲ್ಲಿ ಸಹಕಾರ ಸಂಘಗಳು ಬಹಳ ಚೆನ್ನಾಗಿ ಕೆಲಸ ಮಾಡುತ್ತಿವೆ, ಅಂತಹ ಸಹಕಾರ ಸಂಘಗಳಿಗೆ ಸಬ್ಸಿಡಿ ಕೊಡಿ ಮತ್ತು ಸಾಲ ಕೊಡಿ. ಆದರೆ ಕೆಲವು ಹೆಸರಿಗೆ ಮಾತ್ರ ಇರುತ್ತವೆ, ಬೋರ್ಡ್ ಸಹ ಇರುವುದಿಲ್ಲ, ಇಂತಹ ಸೊಸೈಟಿಗಳಿಗೂ ಸಹ ಸಬ್ಸಿಡಿ ಮತ್ತು ಸಾಲ ಕೊಟ್ಟಂತಹ ಉದಾಹರಣೆಗಳಿವೆ. ಇದು ಸರಿಯಾದ ಕ್ರಮವಲ್ಲ. ಹರಿಜನ ಮತ್ತು ಗಿರಿಜನರನ್ನು ಈ ಸಹಕಾರಿ ಕ್ಷೇತ್ರದ ಸದಸ್ಯರನ್ನಾಗಿ ಮಾಡಲು ಸರ್ಕಾರ ಹಣ ಕೊಟ್ಟರೂ ಸಹ ಅದರ ಸದುಪಯೋಗವಾಗುತ್ತಿಲ್ಲ. ಈ ಹಣವನ್ನು ಮಿಸಲೇನಿಯಸ್ ಫಂಡ್ ನಲ್ಲಿಟ್ಟು ಬೇರೆ ಬಾಬಿಗೆ ಖರ್ಚಾಗಿರುವುದೂ ಸಹ ಉಂಟು.

ಉಪಾಧ್ಯಕ್ಷರು.— ತಾವು ಜಾಗ್ರತೆ ತಮ್ಮ ಭಾಷಣವನ್ನು ಮುಗಿಸಿ.

ಶ್ರೀ ಬಿ. ಜಿ. ಬಣಕಾರ್.— ಇನ್ನು ೫ ನಿಮಿಷಗಳಲ್ಲಿ ಮುಗಿಸಿಬಿಡುತ್ತೇನೆ. ಈಗ ಕೋ ಆಪ ರೇಟಿವ್ ಸೂಪರ್‌ವೈಜರಿ ಯೂನಿಯನ್‌ಗಳು ತಾಲ್ಲೂಕ್ ಮಟ್ಟದಲ್ಲಿ, ಜಿಲ್ಲಾ ಮಟ್ಟದಲ್ಲಿ ಮತ್ತು ರಾಜ್ಯ ಮಟ್ಟದಲ್ಲಿ ಇವೆ. ಪ್ರಚಾರ ಮಾಡುವುದು ಮತ್ತು ಅಂಕಿಅಂಶಗಳನ್ನು ಒದಗಿಸುವುದು ಈ ಯೂನಿಯನ್‌ಗಳ ಕೆಲಸ. ಎಷ್ಟು ಸಹಕಾರಿ ಸಂಘಗಳು ಅತ್ಯುತ್ತಮವಾಗಿ ಕೆಲಸ ಮಾಡಿವೆ, ಎಷ್ಟು ಸಹಕಾರ ಸಂಘಗಳು ಢಿಪಂಕ್ಟ್ ಆಗಿವೆ, ಎಷ್ಟು ಸಹಕಾರ ಸಂಘಗಳು ಲಿಕ್ವಿಡೇಷನ್ ಆಗಿವೆ ಎಂಬತಕ್ಕಂಥ ವಿವರಗಳನ್ನು ಈ ವರದಿಯಲ್ಲಿ ಕೊಟ್ಟಿದ್ದಾರೆ. ಇಲ್ಲಿ ೭-೮ ವರ್ಗದ ಕೋ ಆಪರೇಟಿವ್ ಸೊಸೈಟಿಗಳಿವೆ. *via.*, Primary Credit Co-operative Societies, Urban Co-operative Societies, Housing Co-Oprative Societies Industrial Co-operative Socities, Dairy Co-operative Societies, Labour Co-operatives, Fisheries Co-operatives Hand, loom Weavers Co-operatives, Community Irrigation Co-opera-

tives, Beedi Workers Co-operatives, Toddy Tappers Co-operatives etc., ಈ ಎಲ್ಲ ಸೊಸೈಟಿಗಳಿಗೂ ಯಾವ ಯಾವ ರೀತಿಯಿಂದ ಸಹಾಯಧನ ಕೊಡಬೇಕು, ಯಾವ ಯಾವ ರೀತಿಯಿಂದ ಸಬ್ಸಿಡಿ ಕೊಡಬೇಕು ಮತ್ತು ಇವು ಯಾವ ರೀತಿಯಿಂದ ಕೆಲಸ ಮಾಡಬೇಕು ಎಂಬತಕ್ಕಂಥದ್ದನ್ನು ನೋಡುವ ಜವಾಬ್ದಾರಿ ಅಧಿಕಾರಿಗಳ ಮೇಲಿದೆ. ಈ ಸೊಸೈಟಿಗಳ ಮೇಲೆ ಅಧಿಕಾರಿಗಳು ನಿಗಾವಹಿಸಿ ಕೆಲಸ ಮಾಡಬೇಕು. ಇದರ ಜೊತೆಗೆ ತಾಲ್ಲೂಕ್ ಮಟ್ಟದಲ್ಲಿ ಜಿಲ್ಲಾ ಮಟ್ಟದಲ್ಲಿ ಹಾಗೂ ರಾಜ್ಯ ಮಟ್ಟದಲ್ಲಿ ಎಷ್ಟು ಸೊಸೈಟಿಗಳು ಚೆನ್ನಾಗಿ ಕೆಲಸ ಮಾಡುತ್ತಿವೆ, ಎಷ್ಟು ಸೊಸೈಟಿಗಳು ಲಾಭದಲ್ಲಿವೆ, ಎಷ್ಟು ಸೊಸೈಟಿಗಳು ನಷ್ಟದಲ್ಲಿವೆ ಮತ್ತು ಇದಕ್ಕೆಲ್ಲಾ ಕಾರಣಗಳೇನೆಂಬುದನ್ನು ತಿಳಿದುಕೊಳ್ಳಲು ತಾಲ್ಲೂಕ್ ಮಟ್ಟದಲ್ಲಿ, ಜಿಲ್ಲಾ ಮಟ್ಟದಲ್ಲಿ ಹಾಗೂ ರಾಜ್ಯ ಮಟ್ಟದಲ್ಲಿ ಸಭೆಗಳನ್ನು ನಡೆಸಿ ಅವರ ಕಷ್ಟಸುಖಗಳೇನೆಂಬುದನ್ನು ಅಧಿಕಾರಿಗಳು ತಿಳಿದುಕೊಳ್ಳಬೇಕು. ಇಂತಹ ಸಭೆಗಳಲ್ಲಿ ಅಧಿಕಾರಿಗಳು ಅವು ಚೆನ್ನಾಗಿ ನಡೆಯಲು ಬೇಕಾದಂಥ ಸಲಹೆ ಸೂಚನೆಗಳನ್ನು ಮತ್ತು ಸರಿಯಾದಂಥ ಮಾರ್ಗದರ್ಶನಗಳನ್ನು ನೀಡಬೇಕು. ೫-೬ ವರ್ಷಗಳ ಹಿಂದೆ ದೊಡ್ಡ ದೊಡ್ಡ ನಗರಗಳಲ್ಲಿ ಸ್ಟೇಟ್ ಲೆವೆಲ್ ಕೋ ಆಪರೇಟಿವ್ ಕಾನ್ಫರೆನ್ಸ್ ಎಂದು ಕರೆದು ಎಲ್ಲಾ ರೀತಿಯ ಮಾಹಿತಿಗಳನ್ನು ಒದಗಿಸುತ್ತಿದ್ದರು. ಆದರೆ ಈಗ ಇಂತಹ ಕಾನ್ಫರೆನ್ಸ್ ಕೂಡ ನಡೆಯುತ್ತಿಲ್ಲ ಮತ್ತು ಯಾವ ವಿಧವಾದ ಅಂಕಿ ಅಂಶಗಳನ್ನೂ ಸಹ ಇವರು ಒದಗಿಸುತ್ತಿಲ್ಲ, ಸಹಕಾರಿ ಕ್ಷೇತ್ರಕ್ಕೆ ಸಂಬಂಧಪಟ್ಟ ಪತ್ರಿಕೆಯನ್ನು ಸಹ ಹೊರಡಿಸುತ್ತಿಲ್ಲ. ಈಗ ನಮ್ಮ ರಾಜ್ಯದಲ್ಲಿ ೨೩,೮೪೬ ಸಹಕಾರ ಸಂಘಗಳಿವೆ, ಇವು ಪ್ರತಿಯೊಂದು ಒಳ್ಳೆಯ ರೀತಿಯಿಂದ ಕೆಲಸ ಮಾಡಬೇಕು, ದಕ್ಷತೆಯಿಂದ ಕೆಲಸ ಮಾಡಬೇಕು. ಮಾನ್ಯ ಮಂತ್ರಿಗಳು, ಕಾರ್ಯದರ್ಶಿಗಳು ಹಾಗೂ ಇತರೇ ಸಿಬ್ಬಂದಿ ವರ್ಗದವರೆಲ್ಲರೂ ಸೇರಿಕೊಂಡು ಒಳ್ಳೆಯ ರೀತಿಯಿಂದ ಕೆಲಸ ಮಾಡಿದಾಗ ಮಾತ್ರ ನಮ್ಮ ರಾಜ್ಯಕ್ಕೆ ಒಳ್ಳೆಯ ಹೆಸರು ಬರುತ್ತದೆ. ನಮ್ಮ ಕರ್ನಾಟಕ ರಾಜ್ಯದಲ್ಲಿ ಸಹಕಾರಿ ಚಳುವಳಿ ಬಹಳ ಅತ್ಯುತ್ತಮವಾಗಿ ನಡೆದಿದೆ ಎಂಬ ಹೆಸರನ್ನು ಮಾನ್ಯ ಮಂತ್ರಿಗಳು ತರುತ್ತಾರೆಂಬ ವಿಶ್ವಾಸ ನನಗಿದೆ. ಮಾನ್ಯ ಮಂತ್ರಿಗಳು ಗ್ರಾಮಾಂತರ ಪ್ರದೇಶದಿಂದ ಬಂದಿರುವವರಾಗಿದ್ದಾರೆ. ಇವರಿಗೆ ಸಾಕಷ್ಟು ಅನುಭವವಿದೆ. ಆದ್ದರಿಂದ ತಮ್ಮ ಒಂದು ಅನುಭವವನ್ನು ಉಪಯೋಗ ಮಾಡಿಕೊಂಡು ನಮ್ಮ ರಾಜ್ಯದ ಸಹಕಾರಿ ಚಳುವಳಿಯನ್ನು ಒಳ್ಳೆಯ ರೀತಿಯಿಂದ ಬೆಳೆಸಬೇಕು. ಹಳ್ಳಿಯಿಂದ ಬೆಂಗಳೂರಿನವರೆಗೆ ಇರುವಂತಹ ೩ ಕೋಟಿ ೭೦ ಲಕ್ಷ ಜನರಿಗೂ ಸಹ ಇದರ ಒಂದು ಸದುಪಯೋಗ ಮತ್ತು ಮಾರ್ಗದರ್ಶನ ಸಿಗುವಂತಹ ವ್ಯವಸ್ಥೆ ಮಾಡಬೇಕು. ಈಗ ಈ ಸಹಕಾರಿ ಕ್ಷೇತ್ರದಲ್ಲಿ ಪ್ರೈವೇಟ್ ಸೆಕ್ಟರ್‌ನವರು ಮತ್ತು ಪಬ್ಲಿಕ್ ಸೆಕ್ಟರ್‌ನವರು ಮೂಗು ಹಾಕುತ್ತಿದ್ದಾರೆ. ಈಗ ಸಾರ್ವಜನಿಕ ಕ್ಷೇತ್ರದಲ್ಲಿರುವಂತಹ ನ್ಯಾಷನಲ್ ಟೆಕ್ಸ್‌ಟೈಲ್ ಕಾರ್ಪೋರೇಷನ್ ಅವರು ರೈತರ ಸೇವೆ ಮಾಡುತ್ತೇವೆಂದು ಮುಂದೆ ಬಂದಿದ್ದಾರೆ. ಆದರೆ ಇವರ ಒಂದು ಸೇವೆಯನ್ನು ನಮ್ಮ ಸಹಕಾರಿ ಸಂಘಗಳ ಸೇವೆಗೆ ಒರೆಹಚ್ಚಿ ನೋಡಿದಾಗ ನಮ್ಮ ಸಹಕಾರ ಸಂಘಗಳೇ ಸಾವಿರ ಪಾಲು ಚೆನ್ನಾಗಿವೆ ಎಂದು ಹೇಳಬಹುದು. ಈ ಸಾರ್ವಜನಿಕ ಕ್ಷೇತ್ರದ ಉದ್ಯಮಗಳು ಸಾರ್ವಜನಿಕರ ಸೇವೆ ಮಾಡಬೇಕೆಂಬ ಉದ್ದೇಶದಿಂದ ಸ್ಥಾಪನೆಯಾಗಿದ್ದರೂ ಸಹ ಇಲ್ಲಿ ಹೆಚ್ಚಾಗಿ ಐ.ಎ.ಎಸ್. ಅಧಿಕಾರಿಗಳೇ ಡೈರೆಕ್ಟರ್‌ಗಳಾಗಿರುತ್ತಾರೆ. ಇದರ ಜೊತೆಗೆ ನಾಲ್ಕೈದು ಕಾರ್ಪೊರೇಷನ್‌ಗಳಿಗೆ ಒಬ್ಬರೇ ಚೇರ್‌ಮನ್ ಇರುತ್ತಾರೆ. ನಮ್ಮ ರಾಜ್ಯದಲ್ಲಿ ಈಗ ಇರುವಂತಹ ಇಂತಹ ೨೮ ಸಂಸ್ಥೆಗಳ ಒಂದು ಕೆಲಸವನ್ನು ನೋಡಿದಾಗ ನಮಗೆ ನಾಚಿಕೆಯಾಗುತ್ತದೆ. ಈ ಸಂಸ್ಥೆಗಳು ೬೯ ಕೋಟಿ ೧೩ ಲಕ್ಷದ ೪೯ ಸಾವಿರ ರೂಪಾಯಿಗಳವರೆಗೆ ಲುಕ್ಸಾನು ಮಾಡಿವೆ. ಇಂತಹ ಸಂಸ್ಥೆಗಳು ಇವೊತ್ತಿನ ದಿವಸ ಈ ಸಹಕಾರಿ ಕ್ಷೇತ್ರದಲ್ಲಿಯೂ ತಮ್ಮ ಮೂಗನ್ನು ಚಾಚಲು ಮುಂದೆ ಬರುತ್ತಿವೆ. ಇದಕ್ಕೆ ಮೊದಲು ಇವು ನಷ್ಟವಿಲ್ಲದೆ ಕೆಲಸ ಮಾಡುವಂತಾಗಬೇಕು. ಮುಖ್ಯವಾಗಿ ಈ ಸಹಕಾರಿ ಕ್ಷೇತ್ರದ ಮೂಲಕ ನಮ್ಮ ರೈತರ ಉದ್ಧಾರವಾಗಬೇಕು ಮತ್ತು ಜನತೆಯ ಉದ್ಧಾರವಾಗಬೇಕು, ಈ ದಿಶೆಯಲ್ಲಿ ಮಾನ್ಯ ಮಂತ್ರಿಗಳು ಉತ್ತಮ ರೀತಿಯಿಂದ ಕೆಲಸ ಮಾಡಲಿ ಎಂದು ಹಾರೈಸುತ್ತೇನೆ ಮತ್ತು ನನಗೆ ಮಾತನಾಡಲು ಅವಕಾಶ ಕೊಟ್ಟ ಅಧ್ಯಕ್ಷರಿಗೆ ವಂದಿಸಿ ನನ್ನ ಚಿಕ್ಕ ಭಾಷಣವನ್ನು ಮುಗಿಸುತ್ತೇನೆ.

† ಶ್ರೀ ಪಂಪಾಪತಿ (ದಾವಣಗೆರೆ).—ಸನ್ಮಾನ್ಯ ಅಧ್ಯಕ್ಷರೇ, ಈ ದಿವಸ ಮಾನ್ಯ ಮಂತ್ರಿಗಳ ಮಂಡಿಸಿರುವಂತಹ ೫೩ ಮತ್ತು ೫೫ನೇ ಬೇಡಿಕೆಗಳನ್ನು ಬೆಂಬಲಿಸುತ್ತಾ ನಾಲ್ಕು ಮಾತುಗಳನ್ನು ಹೇಳುತ್ತೇನೆ. ಈಗಾಗಲೇ ನಮ್ಮ ಸಹಕಾರಿ ಸಂಸ್ಥೆಗಳ ಬಗ್ಗೆ ಅನೇಕ ಜನ ಮಾತನಾಡಿದ್ದಾರೆ. ಈ ಸಹಕಾರಿ ಸಂಸ್ಥೆಯಲ್ಲಿ ನಾನು ಯಾವುದೇ ವಿಧವಾದಂಥ ಕೆಲಸ ಮಾಡಿದವನಲ್ಲ. ಆದ್ದರಿಂದ ನನಗೆ ಈ ಕ್ಷೇತ್ರದಲ್ಲಿ ಅಷ್ಟೊಂದು ಅನುಭವವಿಲ್ಲ. ಆದರೆ ಈ ಕ್ಷೇತ್ರದಲ್ಲಿ ಅನುಭವವಿರುವ ಎಲ್ಲರೂ ಮಾತನಾಡಿದ್ದಾರೆ. ಇದನ್ನು ಕೇಳಿ ನನಗೆ ಸಂತೋಷವಾಯಿತು. ಎಲ್ಲರೂ ಸಹ ಒಳ್ಳೆಯ ರೀತಿಯಿಂದ ಕೆಲಸ ಮಾಡಿದ್ದರೆ ಈ ನಮ್ಮ ಸಹಕಾರಿ ಸಂಸ್ಥೆ ಖಂಡಿತವಾಗಿಯೂ ನಮ್ಮ ರಾಜ್ಯದಲ್ಲಿ

ಒಳ್ಳೆಯ ಹೆಸರು ಪಡೆಯುತ್ತಿತ್ತು. ಆದರೆ ಕೆಲಸ ಮಾಡುವುದಕ್ಕಿಂತ ಹೆಚ್ಚಾಗಿ ಸಲಹೆಗಳನ್ನು ಕೊಡುವುದರಲ್ಲಿಯೇ ನಾವು ೩೫ ವರ್ಷಗಳನ್ನು ಕಳೆದಿದ್ದೇವೆಂದು ಕಾಣುತ್ತದೆ. ಈಗ ಕೆಲವರು ಏನು ಸಲಹೆಗಳನ್ನು ಕೊಟ್ಟಿದ್ದಾರೆ, ಆ ಸಲಹೆಗಳ ಪ್ರಕಾರವೇ ಕೆಲಸ ಮಾಡಿದ್ದರೂ ಸಹ ಈ ನಮ್ಮ ಸಹಕಾರ ಸಂಸ್ಥೆಗಳು ನಿಜವಾಗಲೂ ಚೆನ್ನಾಗಿ ಬೆಳೆಯುತ್ತಿದ್ದವು. ಈಗ ಅನೇಕರು ಅನೇಕ ರೀತಿಯಿಂದ ಮಾತ ನಾಡಿದ್ದಾರೆ.

ಶ್ರೀ ಬಿ. ಜಿ. ಬಣಕಾರ್.—ಅಂದರೆ ಈಗ ಮಾತನಾಡಿರುವವರೆಲ್ಲರೂ ಚೆನ್ನಾಗಿ ಕೆಲಸ ಮಾಡಿಲ್ಲ ವೆಂದು ತಮ್ಮ ಅರ್ಥವೇ?

ಶ್ರೀ ಪಂಪಾಪತಿ.—ಈ ಸಹಕಾರಿ ಕ್ಷೇತ್ರವನ್ನು ಅಧಿಕಾರಿಗಳು ಮತ್ತು ಇತರರು ಸೇರಿಕೊಂಡು ಕೆಡಿಸಿದ್ದಾರೆ. ಎಲ್ಲವೂ ಕೆಟ್ಟುಹೋಗಿವೆ. ಈಗ ಅಲ್ಲಿ ಏನೂ ಉಳಿದಿಲ್ಲ ಎಂಬ ಮಾತನ್ನು ನಾನು ಕೇಳಿದ್ದೇನೆ. ಈ ಸಹಕಾರಿ ಸಂಘಗಳನ್ನು ಬಹಳ ಚೆನ್ನಾಗಿ ನಡೆಸಿಕೊಂಡು ಬರಲಾಗಿದೆ ಎಂದು ಯಾರೂ ಸಹ ಹೇಳಲಿಲ್ಲ.

ಶ್ರೀ ಮಲ್ಲಾರಿಗೌಡ ಶಂಕರಗೌಡ ಪಾಟೀಲ್.—ಅದನ್ನು ನೀವು ಹೇಳಿ.

ಶ್ರೀ ಪಂಪಾಪತಿ.—ಎಲ್ಲವೂ ಕೆಟ್ಟಿವೆ, ಏನೂ ಉಳಿದಿಲ್ಲವೆಂದು ಹೇಳಿದ ಮೇಲೆ, ನಾನು ಹೇಳುವುದೇನಿದೆ? ಸಹಕಾರ ಮನೋಭಾವದಿಂದ ಎಲ್ಲರೂ ಮುಂದೆ ಬರಬೇಕು, ಈ ಸಹಕಾರಿ ಸಂಸ್ಥೆಗಳ ಮೂಲಕ ಸಾಮಾನ್ಯ ಜನರ ಅಭಿವೃದ್ಧಿಯಾಗಬೇಕೆಂಬ ದೃಷ್ಟಿಯಿಂದ ಈ ಸಹಕಾರಿ ಸಂಸ್ಥೆ ಗಳನ್ನು ಪ್ರಾರಂಭ ಮಾಡಿದ್ದು. ಈ ಒಂದು ಕಾರಣದಿಂದಲೇ ಸರ್ಕಾರದವರು ಈ ಸಹಕಾರಿ ಸಂಸ್ಥೆ ಗಳಿಗೆ ಕೋಟ್ಯಾಂತರ ರೂಪಾಯಿಗಳನ್ನು ಒದಗಿಸುತ್ತಿದ್ದಾರೆ. ಈ ರೀತಿ ಒದಗಿಸಿದಂಥ ಹಣವನ್ನು ಕೆಲವೇ ಜನರು ನುಂಗಿ ಹಾಕುತ್ತಿದ್ದಾರೆಂಬ ಮಾತನ್ನು ಯಾರೂ ಸಹ ಅಲ್ಲಗಳೆಯುವುದಕ್ಕಾಗುವುದಿಲ್ಲ. ಮಹಾರಾಷ್ಟ್ರ ಹಾಗೂ ಇನ್ನೂ ಕೆಲವು ರಾಜ್ಯಗಳಲ್ಲಿ ಈ ಸಹಕಾರಿ ಕ್ಷೇತ್ರ ಚೆನ್ನಾಗಿ ಬೆಳೆದಿದೆ ಎಂದು ಕೇಳಿದ್ದೇನೆ. ಆದರೆ ನಾನು ನೋಡಿಲ್ಲ. ತಮಿಳುನಾಡಿನಲ್ಲಿಯೂ ಪರವಾಗಿಲ್ಲವೆಂದು ಕಾಣುತ್ತದೆ. ಅಲ್ಲಿ ಕೋಆಪರೇಟಿವ್ ವೀವಿಂಗ್ ಮಿಲ್ಲ್‌ಗಳು ಬಹಳ ಚೆನ್ನಾಗಿ ನಡೆಯುತ್ತಿವೆ. ನಮ್ಮ ರಾಜ್ಯ ದಲ್ಲಿಯೂ ಕೂಡ ಇಲ್ಲಿಯವರೆಗೆ ಮಾನ್ಯ ಸದಸ್ಯರು ಏನೇನು ಸಲಹೆಗಳನ್ನು ಕೊಟ್ಟರು, ಆ ಸಲಹೆಗಳ ಪ್ರಕಾರವೇ ಅಚ್ಚುಕಟ್ಟಾಗಿ ಅವರವರ ಸಂಸ್ಥೆಗಳಲ್ಲಿ ಅಳವಡಿಸಿಕೊಂಡರೆ ಖಂಡಿತವಾಗಿಯೂ ಈ ಸಹಕಾರಿ ಸಂಸ್ಥೆಗಳು ಚೆನ್ನಾಗಿ ನಡೆಯಬಹುದೆಂದು ನನ್ನ ಅಭಿಪ್ರಾಯ. ಈ ಸಂಸ್ಥೆಗಳು ಕೆಡಿಸು ತ್ತಿದ್ದಾರೆಂದು ನಾನು ಹೇಳುತ್ತಿಲ್ಲ. ಆದರೆ ಇಲ್ಲಿ ಕೆಲಸ ಮಾಡುವವರು ಇತರರಿಗೆ ಮಾರ್ಗದರ್ಶನ ಮಾಡಿ ತೋರಿಸಬೇಕು.

೪-೩೦ ಪಿ.ಎಂ.

ಅನುಕೂಲವಾದಂತಹ ವಾತಾವರಣವಿದೆ ಅದನ್ನು ಮಾಡಿ ಅದೇರೀತಿ ಮಾರ್ಗದರ್ಶನ ಮಾಡ ತಕ್ಕಂತಹ ಒಂದು ಪರಿಪಾಠವನ್ನು ಹಾಕಿಕೊಂಡಾಗ ಖಂಡಿತವಾಗಿಯೂ ಈ ಸಹಕಾರ ಸಂಸ್ಥೆಗಳು ಬೆಳೆಯುತ್ತವೆ. ಇವತ್ತು ಮುಖ್ಯವಾಗಿ ಹತ್ತಿಗಿರಣಿಗಳನ್ನು ಪ್ರಾರಂಭಿಸಬೇಕು ಎನ್ನತಕ್ಕ ಯೋಜನೆ ಸರ್ಕಾರಕ್ಕೆ ಇದೆ. ಸುಮಾರು ೧೩-೧೪ ಸಹಕಾರ ನೂಲಿನ ಗಿರಣಿಗಳನ್ನು ಮಾಡಬೇಕೆಂದು ಯೋಚಿಸಿ ದ್ದಾರೆ ಇದು ಬಹಳ ಒಳ್ಳೆಯದು. ಹತ್ತಿ ಗಿರಣಿಗಳನ್ನು ಪ್ರಾರಂಭ ಮಾಡಿದರೆ ಹತ್ತಿ ಬೆಳೆಯು ತಕ್ಕವರು, ನೇಕಾರರು ಇವರಿಗೆಲ್ಲಾ ಉದ್ಯೋಗ ಒದಗಿಸುವುದಕ್ಕೆ ಬಹಳ ಅನುಕೂಲವಾಗುತ್ತದೆ. ನೂಲಿನ ಗಿರಣಿ ಕೈಗಾರಿಕೆಗಳನ್ನು ಮಾಡುವುದರಿಂದ ಹೆಚ್ಚು ಜನರಿಗೆ ಉದ್ಯೋಗ ದೊರಕುತ್ತದೆ. ನೂಲಿನ ಗಿರಣಿಗಳನ್ನು ಗ್ರಾಮಾಂತರ ಪ್ರದೇಶಗಳಲ್ಲಿ ಪ್ರಾರಂಭ ಮಾಡಿ ಅಲ್ಲಿರತಕ್ಕ ಜನರಿಗೆ ಉದ್ಯೋಗ ಒದಗಿಸುತ್ತೇವೆಂದು, ಗ್ರಾಮಾಂತರ ಪ್ರದೇಶಗಳಲ್ಲಿ ನೂಲಿನ ಗಿರಣಿಗಳನ್ನು ಹಾಕಿದರೆ ಖಂಡಿತ ವಾಗಿಯೂ ಅವು ಸರಿಯಾಗಿ ನಡೆಯುವುದಿಲ್ಲ. ಗಿರಣಿಗಳಲ್ಲಿ ಕೆಲಸ ಮಾಡತಕ್ಕವರು ಆ ಕೆಲಸಗಳಲ್ಲಿ ನುರಿತವರು ಇರಬೇಕು. ಕೈಗಾರಿಕೆಗಳು ಎಲ್ಲಿ ಹೆಚ್ಚು ಇವೆ ಅಂತಹ ಕಡೆಗಳಲ್ಲಿ ಕೈಗಾರಿಕೆಗಳನ್ನು ಶುರು ಮಾಡಬೇಕು. ಅಂತಹ ಜಾಗದಲ್ಲಿ ಕೈಗಾರಿಕೆಗಳನ್ನು ಪ್ರಾರಂಭ ಮಾಡಿದರೆ ಜನರಿಗೆ ಉದ್ಯೋಗ ಸಿಗುತ್ತದೆ, ಹತ್ತಿ ಬೆಳೆಯತಕ್ಕವರಿಗೆ ಒಳ್ಳೆಯ ಬೆಲೆ ಸಿಗುತ್ತದೆ. ನೇಕಾರರಿಗೆ ಕಡಿಮೆ ಬೆಲೆಯಲ್ಲಿ ನೂಲನ್ನು ಒದಗಿಸುವುದಕ್ಕೆ ಸಾಧ್ಯವಾಗುತ್ತದೆ. ಕೊಯಮತ್ತೂರು ನಗರ ಒಂದರಲ್ಲೇ ಸುಮಾರು

೧೦೦೦ ಮಿಲ್‌ಗಳಿವೆ. ಬೊಂಬಾಯಿಯಲ್ಲಿ ದೊಡ್ಡ ದೊಡ್ಡ ಮಿಲ್‌ಗಳು ೬೦–೭೦ ಇವೆ. ನಮ್ಮಲ್ಲಿ ಒಂದು ಭಾವನೆ ಬಂದುಬಿಟ್ಟಿದೆ ಗ್ರಾಮಾಂತರ ಪ್ರದೇಶಗಳಲ್ಲಿ ಕೈಗಾರಿಕೆಗಳನ್ನು ಸ್ಥಾಪನೆ ಮಾಡಿದರೆ ಗ್ರಾಮೀಣ ಜನರಿಗೆ ಉದ್ಯೋಗ ಸಿಗುತ್ತದೆಂದು ಒಂದು ಉದ್ದೇಶವಿದೆ. ಈಗಾಗಲೇ ಸ್ಥಾಪನೆ ಮಾಡಿರತಕ್ಕ ಕೈಗಾರಿಕೆಗಳು ನರಗುಂದದಲ್ಲಿ ಇವೆ, ಬಿಜಾಪುರದಲ್ಲಿ ಇವೆ ಬಾಗಲಕೋಟೆಯಲ್ಲಿವೆ, ರಾಯಚೂರಿನಲ್ಲಿವೆ. ಅಲ್ಲಿ ಏನಾಗಿದೆ? ಮಿಲ್‌ಗಳು ಸರಿಯಾಗಿ ನಡೆಯುತ್ತಿಲ್ಲ, ಉತ್ಪಾದನೆ ಹೆಚ್ಚಿಗೆ ಬರುತ್ತಿಲ್ಲ. ಅಲ್ಲಿ ನುರಿತಂತಹ ಕೆಲಸಗಾರರು ಸಿಗುವುದಿಲ್ಲ. ನೂಲಿನ ಗಿರಣಿಗಳನ್ನು ಸಹಕಾರ ಸಂಸ್ಥೆಗಳಿಂದ ಬೆಳೆಸಬೇಕು ಎನ್ನತಕ್ಕ ಸರ್ಕಾರದ ಇಚ್ಛೆಯೇನಿದೆ ಅದಕ್ಕೆ ಸರಿಯಾದ ಸ್ಥಳ ಎಂದರೆ ದಾವಣಗೆರೆ. ನನ್ನ ಅಭಿಪ್ರಾಯ ಹೇಳುತ್ತೇನೆ, ದಾವಣಗೆರೆಯಲ್ಲಿ ೮ ಈ ರೀತಿಯ ಗಿರಣಿಗಳು ಇವೆ, ಅಲ್ಲಿ ನುರಿತ ಕೆಲಸಗಾರರು ಇದ್ದಾರೆ. ನುರಿತ ಕೆಲಸಗಾರರು ಇದ್ದಾಗ ಮಾತ್ರ ಉತ್ಪಾದನೆ ಹೆಚ್ಚಾಗುತ್ತದೆ.

ಶ್ರೀ ಬಿ.ಬಿ. ಚಿಮ್ಮನಕಟ್ಟಿ.—ನುರಿತಂತಹ ಕೆಲಸಗಾರರು ಎಲ್ಲಾ ಕಡೆಗಳಲ್ಲೂ ಇದ್ದಾರೆ.

ಶ್ರೀ ಪಂಪಾಪತಿ.—ಇವತ್ತು ನರಗುಂದದಲ್ಲಿ ಮಿಲ್ ಶುರುವಾಗಿ ೨೫ ವರ್ಷವಾಯಿತು. ಮಿಲ್‌ನ ಪರಿಸ್ಥಿತಿ ಏನು ಎನ್ನುವುದನ್ನು ತಿಳಿದುಕೊಳ್ಳಿ. ಅಲ್ಲಿ ನುರಿತಂತಹ ಕೆಲಸಗಾರರು ಸಿಗುವುದಿಲ್ಲ. ಕೈಗಾರಿಕೆಗಳನ್ನು ಅನುಭವ ಕೆಲಸಗಾರರು ಇರುವ ಕಡೆಗಳಲ್ಲಿ ಶುರು ಮಾಡಬೇಕು. ಇದು ನನ್ನ ಅನುಭವ. ಆದ್ದರಿಂದ ಹತ್ತಿಗಿರಣಿಗಳನ್ನು ದಾವಣಗೆರೆಯಲ್ಲಿ ಹೆಚ್ಚು ರೀತಿ ಬೆಳೆಸುವುದಕ್ಕೆ ಪ್ರಯತ್ನಪಟ್ಟರೆ ತಮ್ಮ ಉದ್ದೇಶ ಫಲಕಾರಿಯಾಗುತ್ತದೆ. ಕರ್ನಾಟಕ ರಾಜ್ಯದಲ್ಲಿರತಕ್ಕವರಿಗೆ ಹೆಚ್ಚು ಉದ್ಯೋಗ ಒದಗಿಸಬೇಕು. ದಾವಣಗೆರೆಯಲ್ಲಿ ಹತ್ತಿ ಗಿರಣಿಗಳನ್ನು ಪ್ರಾರಂಭ ಮಾಡಿದರೆ ಗುಲ್ಬರ್ಗ, ರಾಯಚೂರು, ಬಳ್ಳಾರಿ ಜಿಲ್ಲೆಗಳಿಂದ ಜನರು ಕರ್ನಾಟಕದವರೇ ಬರುತ್ತಾರೆ, ಅಲ್ಲಿಯ ಜನರು ಉದ್ಯೋಗ ಮಾಡುವುದಕ್ಕೆ ಸಹಾಯವಾಗುತ್ತದೆ ಮತ್ತು ಉತ್ಪಾದನೆ ಹೆಚ್ಚು ಆಗುತ್ತದೆ. ಕೈಗಾರಿಕೆಗಳು ಲಾಭದಾಯಕವಾಗಿ ನಡೆಯುತ್ತವೆ. ಈ ಒಂದು ವಿಷಯವನ್ನು ಮಾನ್ಯಮಂತ್ರಿಗಳು ಗಮನದಲ್ಲಿಟ್ಟುಕೊಳ್ಳಬೇಕೆಂದು ವಿನಂತಿ ಮಾಡಿಕೊಳ್ಳುತ್ತೇನೆ. ಹತ್ತಿ ತೆಗೆಯತಕ್ಕ ಜಿನ್ನಿಂಗ್ ಫ್ಯಾಕ್ಟರಿಗಳು ಬೇಕಾದಷ್ಟು ಇವೆ. ಜಿನ್ನಿಂಗ್ ಫ್ಯಾಕ್ಟರಿಗಳನ್ನು ತೆಗೆಯುವುದು ಬೇಡ, ಈಗಿರತಕ್ಕ ಫ್ಯಾಕ್ಟರಿಗಳಿಗೆ ಸರಿಯಾದ ಕೆಲಸವಿಲ್ಲ. ಅದೇ ಫ್ಯಾಕ್ಟರಿಗಳಿಗೆ ಹಣ ಹಾಕಿದರೆ ವೇಸ್ಟ್ ಆಗುತ್ತದೆ. ದಾವಣಗೆರೆ, ಗದಗ, ರಾಯಚೂರು. ಹರಪ್ಪನಹಳ್ಳಿ, ರಾಣಿಬೆನ್ನೂರು ಅಲ್ಲಿರತಕ್ಕ ಜಿನ್ನಿಂಗ್ ಫ್ಯಾಕ್ಟರಿಗಳಿಗೆ ಸಮರ್ಪಕವಾದ ಕೆಲಸವಿಲ್ಲದೆ ಅವು ಖಾಲಿ ಇವೆ. ಇಂತಹ ಫ್ಯಾಕ್ಟರಿಗಳಿಗೆ ಹಣ ಹಾಕತಕ್ಕದ್ದು ಅವಶ್ಯಕತೆ ಇದೆಯೇ ಎನ್ನುವುದನ್ನು ಯೋಚನೆ ಮಾಡಬೇಕೆಂದು ಈ ಸಂದರ್ಭದಲ್ಲಿ ನಾನು ಹೇಳುವುದಕ್ಕೆ ಇಚ್ಛೆಪಡುತ್ತೇನೆ. ಸಕ್ಕರೆ ಕೈಗಾರಿಕೆಗಳ ಪರಿಸ್ಥಿತಿಯೂ ಸರಿಯಾಗಿಲ್ಲ. ಇವತ್ತು ಸಕ್ಕರೆ ಮತ್ತು ಕಬ್ಬಿನ ಬೆಲೆ ಹೋಲಿಸಿದಾಗ ಸಕ್ಕರೆ ಸಹಕಾರ ಕಾರ್ಖಾನೆಗಳು ೫೪.೭೭ ಟನ್ ಕಬ್ಬನ್ನು ಅರೆದು ೫.೬೭ ಲಕ್ಷ ಟನ್ ಸಕ್ಕರೆಯನ್ನು ಉತ್ಪಾದಿಸಿವೆ ಎಂದು ಹೇಳಿದ್ದಾರೆ, ಇದು ಏನು ತೋರಿಸುತ್ತದೆ ಎಂದರೆ ಕಬ್ಬನ್ನು ಅರೆದಾಗ ಎಷ್ಟು ಸಕ್ಕರೆ ಉತ್ಪಾದನೆಯಾಗಬೇಕೋ ಅಷ್ಟು ಬಂದಿಲ್ಲ ಕಡಿಮೆಯಾಗಿದೆ ಎಂದು ಸಕ್ಕರೆಗೆ ಬೆಲೆ ಸರಿಯಾಗಿ ನಿಗದಿಯಾಗಿಲ್ಲ. ಸಕ್ಕರೆ ಕೈಗಾರಿಕೆಗಳನ್ನು ಸರಿಯಾಗಿ ನಡೆಸುವುದಕ್ಕೆ ಸಾಧ್ಯವಾಗುತ್ತಿಲ್ಲ. ಕಬ್ಬು ಬೆಳೆದವರಿಗೆ ಸರಿಯಾದ ಬೆಲೆ ಕೊಡುವುದಕ್ಕೆ ಆಗುವುದಿಲ್ಲ. ಅಲ್ಲಿ ಕೆಲಸ ಮಾಡತಕ್ಕವರಿಗೆ ಸರಿಯಾದ ವೇತನ ಅವರಿಗೆ ಮನೆ, ಅವರ ಮಕ್ಕಳ ವಿದ್ಯಾಭ್ಯಾಸ ಯಾವುದನ್ನೂ ಒದಗಿಸುವುದಕ್ಕೆ ಆಗಿಲ್ಲ. ಸಕ್ಕರೆ ಮಾರಾಟ ನೀತಿ ಕಬ್ಬು ಅರೆಯುವ ನೀತಿ ಸರಿಯಾಗಿ ಇಲ್ಲದೆ ಇರುವುದರಿಂದ ಅದರ ಬಗ್ಗೆ ಸರಿಯಾದ ಕಾರ್ಯಕ್ರಮವನ್ನು ಅನುಸರಿಸಬೇಕು. ಕೈಗಾರಿಕೆಗಳನ್ನು ಲಾಭದಾಯಕವಾಗಿ ನಡೆಸುವುದಕ್ಕೆ ವ್ಯವಸ್ಥೆಯನ್ನು ಮಾಡಬೇಕೆಂದು ನಾನು ತಮ್ಮ ಮೂಲಕ ಮಾನ್ಯಮಂತ್ರಿಗಳಲ್ಲಿ ಕೇಳಿಕೊಳ್ಳುತ್ತೇನೆ. ಮಾನ್ಯ ಸದಸ್ಯರಾದ ಬಿ.ಜಿ. ಬಣಕಾರ್‌ರವರು ಸಹಕಾರಿ ಸಂಸ್ಥೆಗಳ ಬಗ್ಗೆ ಮಾತನಾಡಿದರು, ಮಾನ್ಯ ಬಣಕಾರ್‌ರವರು ಮತ್ತು ಕೊಟ್ರಬಸಪ್ಪನವರು ಒಂದು ಗಿರಣಿ ಹಾಕಿ ಮುಚ್ಚಿದರು. ನಾನು ಈ ಸಹಕಾರಿ ಸಂಸ್ಥೆಗಳ ಬಗ್ಗೆ ಜಾಸ್ತಿ ಹೇಳುವುದಕ್ಕೆ ಹೋಗುವುದಿಲ್ಲ. ಒಟ್ಟಿನಲ್ಲಿ ನಮ್ಮ ಸಹಕಾರಿ ಸಂಸ್ಥೆಗಳು ಸರಿಯಾಗಿ ಬೆಳೆಯಬೇಕು.

ಶ್ರೀ ಬಿ.ಜಿ. ಬಣಕಾರ್.—ಮಾನ್ಯ ಸದಸ್ಯರಾದ ಪಂಪಾಪತಿಯವರು ಏನೇನು ಮಾಡಿದ್ದಾರೆ ಅದನ್ನು ಹೇಳಲಿ.

ಶ್ರೀ ಪಂಪಾಪತಿ.—ನಾನು ಕರ್ನಾಟಕ ರಾಜ್ಯದಲ್ಲಿ ಕಾರ್ಮಿಕರ ಸಂಘಟನೆ ಮಾಡಿ ಅವರಿಗೆ ಇರತಕ್ಕ ಕಷ್ಟವನ್ನು ಹೋಗಲಾಡಿಸುವುದಕ್ಕೆ ಪ್ರಾಣವನ್ನೇ ಕೊಡುವುದಕ್ಕೆ ತಯಾರಾಗಿದ್ದೇನೆ.

ನನ್ನದು ಹೇಳಬೇಕೆಂದರೆ ಬೇರೆ ಏನೂ ಹೇಳುವುದಕ್ಕೆ ಆಗುವುದಿಲ್ಲ. ನಾನು ಹೇಳುವುದಕ್ಕಿಂತಲೂ ಬೇರೆಯವರನ್ನು ಕೇಳಿ ತಿಳಿದುಕೊಳ್ಳುವುದು ಒಳ್ಳೆಯದು. ಆದ್ದರಿಂದ ಸಹಕಾರ ಸಂಸ್ಥೆಯಲ್ಲಿ ಅನೇಕ ಲೋಪದೋಷಗಳನ್ನು ಅವರು ಏನು ಎತ್ತಿ ತೋರಿಸಿದ್ದಾರೆ. ಅದನ್ನು ನಾನು ಅಲ್ಲಗಳೆಯು ವುದಕ್ಕೆ ಹೋಗುವುದಿಲ್ಲ. ನಮ್ಮ ಸಹಕಾರಿ ಬಂಧುಗಳು ಅಭಿಮಾನದಿಂದ ಸಹಕಾರೀ ಸಂಸ್ಥೆಗಳನ್ನು ಬೆಳೆಸುವುದಕ್ಕೆ ಪ್ರಯತ್ನ ಮಾಡಬೇಕು. ಅಧಿಕಾರಿ ವರ್ಗದವರಿಗೂ ಕೂಡ ಜವಾಬ್ದಾರಿ ಜಾಸ್ತಿ ಯಿದೆ. ಇವತ್ತು ಎಲ್ಲಾ ಕಡೆಗಳಲ್ಲೂ ಚುನಾಯಿತ ಪ್ರತಿನಿಧಿಗಳು ಬರುತ್ತಾರೆ ಎಲ್ಲರೂ ತಿಳಿದವರೆ ಇರುವುದಿಲ್ಲ, ಏನಾದರೂ ಅವರು ತಪ್ಪು ಮಾಡಿದರೆ ತಿದ್ದಿ ಅವರಿಗೆ ಒಳ್ಳೆಯ ಮಾರ್ಗದರ್ಶ ಮಾಡಿ, ಸಹಕಾರಿ ಸಂಸ್ಥೆಗಳು ಸರಿಯಾಗಿ ನಡೆಯುವುದಕ್ಕೆ ಕೆಲಸಮಾಡತಕ್ಕ ಜವಾಬ್ದಾರಿ ಅಧಿಕಾರಿಗಳಿಗೂ ಇರುತ್ತದೆ. ಆದ್ದರಿಂದ ಅಧಿಕಾರಿಗಳನ್ನು ಸಹಕಾರಿ ಸಂಸ್ಥೆಗಳಲ್ಲಿ ನೇಮಿಸುತ್ತಾರೆ. ಅಧಿಕಾರಿಗಳ ಅಲಕ್ಷತನ, ರಾಜಕೀಯ ಪ್ರವೇಶ, ದಕ್ಷ ಆಡಳಿತ ನಡೆಸುವುದಕ್ಕೆ ಗೊತ್ತಿಲ್ಲದ ಜನ, ಎಷ್ಟು ಸಿಕ್ಕಿದರೆ ಅಷ್ಟೇ ಸಾಕು ಎಂದು ತಿನ್ನುವುದಕ್ಕೆ ಕೆಲವರು ಬರುತ್ತಾರೆ, ಹೀಗಾಗಿ ಸಹಕಾರಿ ಸಂಸ್ಥೆಗಳು ಹಾಳಾಗಿವೆ.

ಇನ್ನು ಬತ್ತದ ಲೆವಿ ಬಗ್ಗೆ ಹೇಳುವುದಾದರೆ, ಸರ್ಕಾರ ಇವತ್ತು ಬತ್ತ ಸಂಗ್ರಹ ಮಾಡುತ್ತದೆ. ಕೆಲವು ಸೊಸೈಟಿಗಳಲ್ಲಿ ಬತ್ತವನ್ನು ಸ್ಟಾಕ್‌ಮಾಡಿ ಇಡುತ್ತಾರೆ. ಸುಮಾರು ನಾಲ್ಕಾರು ತಿಂಗಳು ಹಾಗೆಯೇ ಇಡುತ್ತಾರೆ, ಆಮೇಲೆ ಹೊಸ ಬತ್ತ ಬರುತ್ತದೆ. ಹಳೆಯ ಬತ್ತವನ್ನು ಮಾರುತ್ತಾರೆ. ಹೊಸ ಬತ್ತವನ್ನು ಕೊಂಡು ಸ್ಟಾಕ್ ಮಾಡುತ್ತಾರೆ. ಸಹಕಾರಿ ಸಂಸ್ಥೆಗಳಲ್ಲಿ ನಡೆಯುತಕ್ಕ ಅವ್ಯವಹಾರ ಮತ್ತು ಅಕ್ರಮಗಳು ಯಾರಿಗೂ ಗೊತ್ತಿಲ್ಲವೆಂದು ಅವರು ತಿಳಿದುಕೊಂಡಿರುತ್ತಾರೆ. ಆದರೆ ಇದು ಎಲ್ಲರಿಗೂ ಗೊತ್ತಿದೆ.

ಮಾನ್ಯ ಅಧ್ಯಕ್ಷರೇ ಇದನ್ನು ಸರಿಪಡಿಸುವುದಕ್ಕೆ ಇದುವರೆಗೂ ಯಾರಿಂದ ಕೂಡ ಸಾಧ್ಯವಾಗಿಲ್ಲ. ಆದ್ದರಿಂದ ಇವತ್ತು ಆ ಒಂದು ಪರಿಸ್ಥಿತಿ ಮುಂದುವರಿದುಕೊಂಡು ಬರುತ್ತಿದೆ. ಆ ಒಂದು ಪರಿಸ್ಥಿತಿಯನ್ನು ತಡೆಗಟ್ಟುವುದಕ್ಕೆ ಇದುವರೆಗೂ ಕೂಡ ಯಾವ ಒಬ್ಬ ಅಧಿಕಾರಿಯೂ ಕೂಡ ಪ್ರಯತ್ನ ಮಾಡಲಿಲ್ಲ. ಮಂತ್ರಿಗಳು ಕೂಡ ಪ್ರಯತ್ನ ಮಾಡಲಿಲ್ಲ. ಮತ್ತು ಶಾಸಕರು ಕೂಡ ಪ್ರಯತ್ನ ಮಾಡಲಿಲ್ಲ. ಈ ಎಲ್ಲಾ ಜನರು ಒಂದೇ ಮನಸ್ಸಿನಿಂದ ಪ್ರಯತ್ನ ಪಟ್ಟರೆ ಬದಲಾವಣೆ ಯಾಗುತ್ತದೆ ಎನ್ನುವ ಮಾತನ್ನು ನಾನು ಈ ಸಂದರ್ಭದಲ್ಲಿ ಹೇಳಬಯಸುತ್ತೇನೆ.

ಇನ್ನು ನಮ್ಮ ದಾವಣಗೆರೆ ರೆಗ್ಯುಲೇಟೆಡ್ ಮಾರ್ಕೆಟ್ ಕಮಿಟಿಯ ಬಗ್ಗೆ ಪ್ರಸ್ತಾಪ ಮಾಡುವುದಾದರೆ ಈ ಒಂದು ಮಾರ್ಕೆಟ್‌ನಲ್ಲಿ ಸುಮಾರು ವರ್ಷಗಳಿಂದ ಬಹಳ ತೊಂದರೆ ಇದೆ. ಈ ಒಂದು ವಿಷಯವನ್ನು ನಾನು ಮೊದಲಿನಿಂದಲೂ ಕೂಡ ಹೇಳುತ್ತಿದ್ದೇನೆ. ಮಾನ್ಯ ಮಂತ್ರಿಗಳಿಗೂ ಕೂಡ ಗೊತ್ತಿದೆ. ಈ ಮಾರ್ಕೆಟ್‌ಗಳಿಂದ ರೈತರಿಗೆ ಬಹಳ ತೊಂದರೆಯಾಗಿದೆ. ಸಾರ್ವಜನಿಕರಿಗೂ ಕೂಡ ಬಹಳ ತೊಂದರೆಯಾಗುತ್ತಿದೆ. ಈ ಮಾರ್ಕೆಟ್‌ನಿಂದ ಸರ್ಕಾರಕ್ಕೆ ಆದಾಯ ಬರುತ್ತಿದೆ. ಆದರೆ ಅಲ್ಲಿ ಒಂದು ರೈಲ್ವೆ ಗೇಟ್ ಇದೆ. ಆ ರೈಲ್ವೆ ಗೇಟನ್ನು ಮುಚ್ಚಬೇಕೆಂದು ನಾನು ಸುಮಾರು ವರ್ಷ ಗಳಿಂದ ಹೇಳುತ್ತಲೇ ಬಂದಿದ್ದೇನೆ. ಆದರೆ ಇದರ ಬಗ್ಗೆ ಹಿಂದಿನ ಸರ್ಕಾರದವರು ಕೂಡ ಯಾವ ಒಂದು ತೀರ್ಮಾನವನ್ನು ತೆಗೆದುಕೊಳ್ಳಲಿಲ್ಲ. ಈ ಸರ್ಕಾರ ಕೂಡ ಯಾವ ಒಂದು ತೀರ್ಮಾನವನ್ನು ಕೂಡ ತೆಗೆದುಕೊಳ್ಳಲಿಲ್ಲ. ಅಲ್ಲಿರತಕ್ಕಂಥ ರೈತರು ಹೋರಾಟ ಮಾಡುತ್ತಿದ್ದಾರೆ. ಅಲ್ಲಿನ ರೈತರು ಅನೇಕ ಸಾರಿ ಸರ್ಕಾರಕ್ಕೆ ಮನವಿಯನ್ನು ಸಹ ಕೊಟ್ಟಿದ್ದಾರೆ.

ಶ್ರೀ ಆರ್.ಎಲ್. ಜಾಲಪ್ಪ.—ಮಾನ್ಯ ಅಧ್ಯಕ್ಷರೇ, ಆ ರೈಲ್ವೆ ಗೇಟನ್ನು ನಾನು ಕೂಡ ಪ್ರವಾಸ ಹೋಗಿದ್ದಾಗ ನೋಡಿಕೊಂಡು ಬಂದಿದ್ದೇನೆ. ಅಲ್ಲಿ ನಿಜವಾಗಿಯೂ ಕೂಡ ರೈತರಿಗೆ ತೊಂದರೆಯಾಗಿದೆ. ಆದ್ದರಿಂದ ನಾನು ಮಾನ್ಯ ಮುಖ್ಯಮಂತ್ರಿಗಳ ಜೊತೆಯಲ್ಲಿ ಸಮಾಲೋಚನೆ ಮಾಡಿ ಮಾನ್ಯ ಮುಖ್ಯಮಂತ್ರಿಗಳು ರೈಲ್ವೆ ಮಂತ್ರಿಗಳಿಗೆ ಒಂದು ಪತ್ರವನ್ನು ಸಹ ಬರೆದಿದ್ದಾರೆ. ಮತ್ತು ಮಾನ್ಯ ಕೇಂದ್ರ ರೈಲ್ವೆ ಮಂತ್ರಿಗಳಾದಂಥ ಶ್ರೀಮಾನ್ ಜಾಫರ್ ಷರೀಫ್‌ರವರ ಜೊತೆಯಲ್ಲಿ ನಾನು ಸ್ವತಃ ಮಾತನಾಡಿದ್ದೇನೆ. ಬಹುಶಃ ಅವರು ೧೦ ಲಕ್ಷ ರೂಪಾಯಿಗಳನ್ನು ಕೇಳಿದ್ದಾರೆ. ಆ ಹಣವನ್ನು ಸರ್ಕಾರ ಕೊಡುವುದಕ್ಕೆ ಒಪ್ಪಿಕೊಂಡಿದೆ. ಆದ್ದರಿಂದ ಆ ರೈಲ್ವೆ ಗೇಟನ್ನು ಮುಚ್ಚಿಸಿ ಕೊಡುವ ಪ್ರಯತ್ನ ಸರ್ಕಾರ ಮಾಡುತ್ತದೆ ಎನ್ನುವ ಮಾತನ್ನು ನಾನು ಈ ಸಂದರ್ಭದಲ್ಲಿ ಹೇಳ ಬಯಸುತ್ತೇನೆ.

ಶ್ರೀ ಪಂಪಾಪತಿ.—ಮಾನ್ಯ ಅಧ್ಯಕ್ಷರೇ, ಮಾನ್ಯ ಮಂತ್ರಿಗಳಿಗೆ ನಾನು ಅಭಿನಂದನೆಯನ್ನು ಸಲ್ಲಿಸಬೇಕಾಗುತ್ತದೆ. ಮಾನ್ಯ ಮಂತ್ರಿಗಳು ಆ ಒಂದು ಕೆಲಸವನ್ನು ಆದಷ್ಟು ಬೇಗ ಮಾಡಬೇಕೆಂದು ನಾನು ಪ್ರಾರ್ಥನೆ ಮಾಡಿಕೊಳ್ಳುತ್ತೇನೆ. ಮತ್ತು ೧೦ ಲಕ್ಷ ರೂಪಾಯಿಗಳನ್ನು ಕೇಂದ್ರ ಸರ್ಕಾರಕ್ಕೆ ಕೊಡುತ್ತೇವೆ ಎನ್ನುವ ಮಾತನ್ನು ಕೂಡ ಹೇಳಿದ್ದಾರೆ. ಆದ್ದರಿಂದ ನಾನು ನಮ್ಮ ರೈತರ ಪರವಾಗಿ ಕೂಡ ಅವರಿಗೆ ಅಭಿನಂದನೆಗಳನ್ನು ಸಲ್ಲಿಸುತ್ತೇನೆ. ಮತ್ತು ನಾನು ಈ ಸಹಕಾರಿ ಇಲಾಖೆಯ ಬಗ್ಗೆ ಇನ್ನೂ ಅನೇಕ ವಿಷಯಗಳನ್ನು ಮಾತನಾಡಬೇಕೆಂದು ಆಸೆ ಇದ್ದರೂ ಕೂಡ ಕಾಲ ಮಿತಿ ಇರುವುದರಿಂದ ನಾನು ಅಧ್ಯಕ್ಷರಿಗೆ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

† ಶ್ರೀ ಎನ್. ಚಿಕ್ಕೇಗೌಡ (ಹೊಸಕೋಟೆ).—ಸನ್ಮಾನ್ಯ ಅಧ್ಯಕ್ಷರೇ ಸನ್ಮಾನ್ಯ ಸಹಕಾರಿ ಮಂತ್ರಿಗಳು ಈ ಸದನದಲ್ಲಿ ಮಂಡಿಸಿರತಕ್ಕಂಥ ಸುಮಾರು ೧೨.೮೪ ಲಕ್ಷ ರೂಪಾಯಿಗಳ ಬೇಡಿಕೆ ಏನು ಇದೆ, ಈ ಬೇಡಿಕೆಯನ್ನು ನಾನು ಸಂಪೂರ್ಣವಾಗಿ ವಿರೋಧಿಸುತ್ತೇನೆ. ಇದುವರೆಗೂ ಅನೇಕ ಜನ ಮಾನ್ಯ ಸ್ನೇಹಿತರು ಮಾತನಾಡಿ ಈ ಸಹಕಾರಿ ಕ್ಷೇತ್ರದ ಬಗ್ಗೆ ಸವಿಸ್ತಾರವಾಗಿ ತಿಳಿಸಿದ್ದಾರೆ. ಆದರೂ ಕೂಡ ನಾನು ಕೆಲವಾರು ವಿಷಯಗಳನ್ನು ಈ ಸದನದಲ್ಲಿ ಪ್ರಸ್ತಾಪ ಮಾಡಬಯಸುತ್ತೇನೆ. ಈ ಸಹಕಾರಿ ಕ್ಷೇತ್ರ ಎಂದರೆ ಏನು ? ಈ ಸಹಕಾರಿ ತತ್ವ ಎಂದರೆ ಏನು ? ಈ ಸಹಕಾರಿ ಕ್ಷೇತ್ರದಲ್ಲಿ ನಂಬಿಕೆ ಇರತಕ್ಕಂಥ ಸಹಕಾರಿಗಳ ಬಗ್ಗೆ ಈಗಾಗಲೇ ಅನೇಕ ಜನ ಮಾನ್ಯ ಸ್ನೇಹಿತರು ತಿಳಿಸಿದ್ದಾರೆ. ಮತ್ತು ಕೆಲವಾರು ಲೋಪದೋಷಗಳನ್ನು ಕೂಡ ತಿಳಿಸಿದ್ದಾರೆ. ಆದರೂ ಕೂಡ ನಾನು ಕೆಲವಾರು ವಿಷಯಗಳನ್ನು ಸ್ಪಷ್ಟವಾಗಿ ಈ ಸಂದರ್ಭದಲ್ಲಿ ಹೇಳಬೇಕಾಗುತ್ತದೆ. ನಮ್ಮ ಮಾನ್ಯ ಮಂತ್ರಿಗಳು ಈ ಒಂದು ಖಾತೆಯನ್ನು ವಹಿಸಿಕೊಂಡ ಮೇಲೆ ಕೆಲವು ಪಕ್ಷಗಳ ಮೇಲೆ, ಕೆಲವು ಸೊಸೈಟಿಗಳ ಮೇಲೆ ತಮ್ಮ ಹಿಡಿತವನ್ನು ಇಟ್ಟುಕೊಂಡಿದ್ದಾರೆ ಮತ್ತು ಆ ಬಗ್ಗೆ ಅವರು ಕೆಲವಾರು ಕಾರ್ಯಕ್ರಮಗಳನ್ನು ಕೂಡ ತೆಗೆದುಕೊಂಡಿದ್ದಾರೆ. ಇವತ್ತು ಈ ಸಹಕಾರ ಸಂಘಗಳಲ್ಲಿ ಆಡಳಿತ ಮಂಡಲಿಯವರು ಸರಿಯಾದ ರೀತಿಯಲ್ಲಿ ಕೆಲಸ ಮಾಡುತ್ತಿಲ್ಲ. ಮಾನ್ಯ ಅಧ್ಯಕ್ಷರೇ, ನಾನು ೧೯೬೮ನೇ ಇಸವಿಯಲ್ಲಿ ಸದಸ್ಯನಾಗಿದ್ದಂತಹ ಕಾಲದಲ್ಲಿ ಬೆಂಗಳೂರು ಜಿಲ್ಲಾ ಬ್ಯಾಂಕ್ ಸಹಕಾರಿ ಸಂಘದ ಬಗ್ಗೆ ಕೆಲವಾರು ಮಾತುಗಳನ್ನು ಈ ಸದನದಲ್ಲಿ ಪ್ರಸ್ತಾಪ ಮಾಡಿದ್ದೇನೆ. ಬೇಕಾದರೆ ವರದಿಯಲ್ಲಿ ಇದೆ ತಾವು ನೋಡಬಹುದು. ಮತ್ತು ನಮ್ಮ ಪಕ್ಷದ ವತಿಯಿಂದ ಮಾತನಾಡಿದಂಥ ಶ್ರೀ ಮಾನ್ಯ ಕೆ.ಹೆಚ್. ರಂಗನಾಥ್‌ರವರು ಅನೇಕ ವಿಷಯಗಳನ್ನು ಪ್ರಸ್ತಾಪ ಮಾಡಿದ್ದಾರೆ. ಮತ್ತು ಜನತಾ ಪಕ್ಷದ ಶ್ರೀಮಾನ್ ನಾರಾಯಣಗೌಡರು ಕೂಡ ಇದರ ಬಗ್ಗೆ ಸ್ಪಷ್ಟವಾಗಿ ಮಾತನಾಡಿದ್ದಾರೆ. ಇವತ್ತು ನಾವು ಇದನ್ನೆಲ್ಲಾ ನೋಡುವುದಾದರೆ ಈ ಸಹಕಾರಿ ಕ್ಷೇತ್ರದ ತತ್ವವನ್ನು ಒಪ್ಪಿಕೊಂಡು ಕೆಲಸ ಕಾರ್ಯಗಳನ್ನು ಮಾಡುತ್ತಿದ್ದೇವೆ. ಆದರೆ ಇವತ್ತು ಈ ಸಹಕಾರಿ ಕ್ಷೇತ್ರದಲ್ಲಿ ಆಗಿರತಕ್ಕಂಥ ನಷ್ಟ ಹೇಳತೀರದು. ಈ ಸಹಕಾರಿ ಕ್ಷೇತ್ರದಲ್ಲಿ ದೊಡ್ಡ ದೊಡ್ಡ ಹೆಗ್ಗಣಗಳು ಸೇರಿಕೊಂಡಿವೆ. ಈ ಹೆಗ್ಗಣಗಳು ಗೋಡೋನ್ ಒಳಗೆ ಸೇರಿಕೊಂಡಿವೆ. ಆದ್ದರಿಂದ ಇವರು ಎಷ್ಟೇ ಪ್ರಯತ್ನ ಪಟ್ಟರೂ ಕೂಡ ಅದು ಸಫಲವಾಗುವುದಿಲ್ಲ. ನಮ್ಮ ಕೋಲಾರದ ಕಡೆ ಒಂದು ಮಾತನ್ನು ಹೇಳುತ್ತಾರೆ ಅದು ಏನೆಂದರೆ, ''ಮಾನ್ನಿ ಮಾಡೆ ಮುಂಚೇಸೆ'' ಅಂತ. ಆದ್ದರಿಂದ ಈ ಎಲ್ಲಾ ಸಹಕಾರಿ ಸಂಘಗಳನ್ನು ಈ ಹೆಗ್ಗಣಗಳೇ ಮುಗಿಸಿವೆಯೆಂದು ನಾನು ಈ ಸಂದರ್ಭದಲ್ಲಿ ಹೇಳಬಯಸುತ್ತೇನೆ. ಮಾನ್ಯ ಅಧ್ಯಕ್ಷರೇ, ನಾನು ಈ ಸಂದರ್ಭದಲ್ಲಿ ಒಂದು ಮಾತನ್ನು ಮಾನ್ಯ ಸದನಕ್ಕೆ ತಿಳಿಯಬಯಸುವುದೇನೆಂದರೆ ಮಾನ್ಯ ದೇವರಾಜ ಅರಸರ ಕಾಲದಲ್ಲಿ ನನ್ನನ್ನು ಈ ಕೋ-ಆಪರೇಟಿವ್ ಇಲಾಖೆಯ ಮಂತ್ರಿಯಾಗುತ್ತೀಯಾ ಎಂದು ಕೇಳಿದರು. ಆಗ ನಾನು ಮಾನ್ಯ ದಿವಂಗತ ಶ್ರೀಮಾನ್ ದೇವರಾಜ ಅರಸರಿಗೆ ತಿಳಿಸಿದೆ. ಸ್ವಾಮಿ, ಈ ಕೋ-ಆಪರೇಟಿವ್ ಸೊಸೈಟಿಯಲ್ಲಿರುವಂಥ ಹೆಗ್ಗಣಗಳನ್ನು ಹಿಡಿದುಹಾಕಬೇಕಾದರೆ ಈಗ ಇರುವಂಥ ಸೆಂಟ್ರಲ್ ಜೈಲ್ ಸಾಕಾಗುವುದಿಲ್ಲ. ಆ ಹೆಗ್ಗಣಗಳನ್ನು ಹಿಡಿದುಹಾಕುವುದಕ್ಕೆ ಪ್ರತ್ಯೇಕವಾದಂಥ ಒಂದು ಜೈಲು ತಾವು ಮಾಡಬೇಕಾಗುತ್ತದೆ. ಆದ್ದರಿಂದ ನನಗೆ ಆ ಇಲಾಖೆ ಬೇಡವೆಂದು ತಿಳಿಸಿದ್ದೆ. ಆಗ ಅವರು ನನಗೆ ಕೃಷಿ ಮತ್ತು ಪಶುಸಂಗೋಪನಾ ಇಲಾಖೆಯನ್ನು ಕೊಟ್ಟರು. ಆದ್ದರಿಂದ ಈ ಇಲಾಖೆಯಲ್ಲಿರುವಂಥ ಹೆಗ್ಗಣ

---

† ಈ ಚಿನ್ಹೆ ಸಂಬಂಧ ಪಟ್ಟ ಸದಸ್ಯರು ಟಿಪ್ಪಣಿ ಅಥವಾ ಭಾಷಣವನ್ನು ಪರಿಸ್ಕರಿಸಿಲ್ಲ ಎಂದು ಸೂಚಿಸುತ್ತದೆ.

ಗಳನ್ನು ಮೊದಲು ಹಿಡಿದು ನಾಶ ಮಾಡಿದರೆ ಮಾತ್ರ ನಿಮ್ಮ ಸೊಸೈಟಿಗಳು ಚೆನ್ನಾಗಿ ನಡೆಯು ವುದಕ್ಕೆ ಸಾಧ್ಯವಾಗುತ್ತದೆ ಎನ್ನುವ ಮಾತನ್ನು ನಾನು ಈ ಸಂದರ್ಭದಲ್ಲಿ ಹೇಳಬಯಸುತ್ತೇನೆ.

ಶ್ರೀ ಎಸ್.ಆರ್. ಲಕ್ಷ್ಮಯ್ಯ.—ಮಾನ್ಯ ದೇವರಾಜ ಅರಸ್‌ರವರು ಏನು ಹೇಳಿದರು ಎನ್ನ ತಕ್ಕಂಥ ಮಾತನ್ನು ತಾವು ಹೇಳಲಿಲ್ಲ.

ಶ್ರೀ ಎನ್. ಚಿಕ್ಕೇಗೌಡ.—ಮಾನ್ಯ ಅಧ್ಯಕ್ಷರೇ, ಅವರು ಯಾವ ಕೆಲಸವನ್ನು ನನಗೆ ವಹಿಸಿದ್ದರೋ ಆ ಕೆಲಸವನ್ನು ನಾನು ಪೂರ್ಣವಾಗಿ ಮಾಡಿದ್ದೇನೆ. ನಿನಗೆ ಆ ಇಲಾಖೆಯನ್ನು ಕೊಟ್ಟರೆ ನೀನು ಎಲ್ಲರನ್ನೂ ಹಿಡಿದು ಜೈಲಿಗೆ ಹಾಕುತ್ತೀಯ ಬೇಡವೆಂದು ಹೇಳಿದರು. ಇವತ್ತು ನಮ್ಮ ಮಾನ್ಯ ಮಂತ್ರಿಗಳು ತಮ್ಮ ವರದಿಯಲ್ಲಿ ಕೊಟ್ಟಿದ್ದಾರೆ. ಇಲ್ಲಿ, ತ್ರೀ ಟೈರ್ಸ್ ಸಿಸ್ಟಂನ್ನು ಜಾರಿಗೆ ತರುತ್ತೇವೆಂದು ನಮಗೆ ಈ ಯೋಜನೆಗೆ ವಿಶ್ವ ಬ್ಯಾಂಕಿನಿಂದ ಕೂಡ ಹಣವನ್ನು ಕೊಟ್ಟಿದ್ದಾರೆ. ಈ ಒಂದು ಯೋಜನೆ ಅಮೇರಿಕಾ ದೇಶದಲ್ಲಿ ಕೂಡ ಚೆನ್ನಾಗಿ ನಡೆಯುತ್ತಿದೆ. ಪ್ರೊಡಕ್ಟೀವ್ ಕೋ-ಆಪರೇಟಿವ್ ಸೊಸೈಟಿ ಕನ್ಸೂಮರ್ಸ್ ಕೋ-ಆಪರೇಟಿವ್ ಸೊಸೈಟಿ, ಮುಂತಾಗಿ ಇವೆ.

ಶ್ರೀ ಬಿ.ಆರ್. ಯಾವಗಲ್.—ಮಾನ್ಯ ಅಧ್ಯಕ್ಷರೆ, ಸುಭೇದಾರ್ ಛತ್ರಂ ರಸ್ತೆಯಲ್ಲಿರುವ ಶ್ರೀ ಗಂಗಾರಾಂರವರ ಕಟ್ಟಡ ಬಿದ್ದು ಹೋಗಿದೆಯೆಂದು ಹೇಳಿ ಮೇಲ್ಮನೆಯನ್ನು ಮುಂದೂಡಿದ್ದಾರೆ. ಆದ್ದರಿಂದ ನಾವು ಈ ಸದನವನ್ನು ನಡೆಸುವುದು ಬೇಡವೆಂದು ನನ್ನ ಅಭಿಪ್ರಾಯ. ಕಾರಣ ಅಲ್ಲಿ ಸುಮಾರು ೧೦೦ ಜನರ ಮೇಲೆ ಸತ್ತಿದ್ದಾರೆಂದು ನನಗೆ ಗೊತ್ತಾಗಿದೆ.

ಶ್ರೀ ಎನ್. ಚಿಕ್ಕೇಗೌಡ.—ಮಾನ್ಯ ಅಧ್ಯಕ್ಷರೇ ನಾನು ಪಾಶ್ಚಿಮಾತ್ಯ ರಾಷ್ಟ್ರಗಳಿಗೆ ಹೋದಾಗ ಕೂಡ ನೋಡಿಕೊಂಡು ಬಂದಿದ್ದೇನೆ...

ಶ್ರೀ ಎಸ್. ಆರ್. ಲಕ್ಷ್ಮಯ್ಯ.—ಮಾನ್ಯ ಅಧ್ಯಕ್ಷರೇ ಕಪಾಲಿ ಚಿತ್ರಮಂದಿರದ ಹತ್ತಿರ ಸುಮಾರು ನೂರಾರು ಜನರು ಸತ್ತಿದ್ದಾರೆ. ಆದ್ದರಿಂದ ನಾವು ಸಭೆ ನಡೆಸುವುದು ಸರಿಯಲ್ಲ.

ಶ್ರೀ ಎನ್. ಚಿಕ್ಕೇಗೌಡ.—ಮಾನ್ಯ ಅಧ್ಯಕ್ಷರೇ ನಮ್ಮ ರಾಜ್ಯದಲ್ಲಿ ಇವತ್ತು ಸಾವಿರಾರು ಕೋ-ಆಪರೇಟಿವ್ ಸೊಸೈಟಿಗಳು ಇವೆ.

ಶ್ರೀ ಪಂಪಾಪತಿ.—ಮಾನ್ಯ ಅಧ್ಯಕ್ಷರೇ ಸುಮಾರು ನೂರಾರು ಜನರು ಸತ್ತಿದ್ದಾರೆ. ಅವರು ಅಲ್ಲಿ ಸಾಯುತ್ತಿರುವಾಗ ನಾವು ಇಲ್ಲಿ ಸಭೆ ನಡೆಸುವುದು ಸರಿಯಲ್ಲ.

ಶ್ರೀ ಎನ್. ಚಿಕ್ಕೇಗೌಡ.—ಮಾನ್ಯ ಅಧ್ಯಕ್ಷರೇ ತಮಗೆ ಗೊತ್ತೇ ಇದೆ. ಕ್ರಿಮಿನಲ್ ಪ್ರೊಸಿಜರ್ ಕೋಡ್‌ನಲ್ಲಿ ಒಂದು ಸಾಧಾರಣ ತಪ್ಪು ಮಾಡಿದರೂ ಕೂಡ, ಒಬ್ಬರ ಜೇಬಿನಿಂದ ಪರ್ಸನ್ನು ಪಿಕ್ ಪಾಕೇಟ್ ಮಾಡಿದರೂ ಕೂಡ ಒಂದು ವರ್ಷ ಶಿಕ್ಷೆ ವಿಧಿಸಬಹುದು ಎಂದಿದೆ. ಆದರೆ ಕೋ-ಆಪರೇಟಿವ್ ಸೊಸೈಟಿಯಲ್ಲಿ ಹಣ ತಿಂದರೆ ಶಿಕ್ಷೆ ವಿಧಿಸಲು ಸಾಧ್ಯವಿಲ್ಲವೇ ?

ಶ್ರೀ ಪಂಪಾಪತಿ.—ಮಾನ್ಯ ಉಪಾಧ್ಯಕ್ಷರೆ, ಐದು ಗಂಟೆಗೆ ಇನ್ನು ಹತ್ತು ನಿಮಿಷ ಮಾತ್ರ ಇದೆ. ಸಭೆಯನ್ನು ಮುಕ್ತಾಯ ಮಾಡಿದ್ದರೆ ಚೆನ್ನಾಗಿತ್ತು.

ಉಪಾಧ್ಯಕ್ಷರು.—ಚಿಕ್ಕೇಗೌಡರು ಬಹಳ ಸ್ವಾರಸ್ಯಕರವಾಗಿ ಮಾತನಾಡುತ್ತಿದ್ದಾರೆ.

ಶ್ರೀ ಪಂಪಾಪತಿ.—ದೊಡ್ಡ ಅನಾಹುತವೇ ಆಗಿದೆ. ಪ್ರಾಣಹಾನಿಯಾಗಿದೆ ಎಂದು ಹೇಳುವಾಗ......

ಶ್ರೀ ಎನ್. ಚಿಕ್ಕೇಗೌಡ.—ಎಂಟಾಣೆ ಕದ್ದರೂ ಮೂರು ತಿಂಗಳು ಶಿಕ್ಷೆ ವಿಧಿಸುತ್ತಾರೆ. ಆದರೆ ನಮ್ಮ ಸಹಕಾರ ಸಂಘಗಳಲ್ಲಿ ದುರ್ವ್ಯವಹಾರ ಮಾಡಿದರೆ, ಹಣ ನುಂಗಿಹಾಕಿದರೆ ಏನೂ ಮಾಡುವುದಿಲ್ಲ...

ಒಬ್ಬರು ಮಾನ್ಯ ಸದಸ್ಯರು.—ನೂರಾರು ಜನರು ಪ್ರಾಣ ಕಳೆದುಕೊಂಡಿದ್ದಾರೆ ಎಂದು ತಿಳಿದುಬಂದಿರುವಾಗಲೂ ಸಭೆಯನ್ನು ಮುಂದೂಡದೆ ಇರುವುದು ಸರಿಯಲ್ಲ.

ಶ್ರೀ ಎಂ. ಮಲ್ಲಿಕಾರ್ಜುನ ಖಾರ್ಗೆ.—ಸಭೆಯನ್ನು ಮುಂದೂಡಿದರೆ ಒಳ್ಳೆಯದು.

DEPUTY SPEAKER.—Now the House stands adjourned to meet tomorrow at 11-00 A.M.

(The House adjourned at Fifty-two-minutes past Four of the Clock to meet again on Tuesdey, the 13th September, 1983)